RESOLUTIONS

Mr. SPEAKER.—Then we come to resolutions. The first resolution stands in the name of Sri M. Madiah and in his absence, he has requested me to allow Sri Prabhakar to move the resolution on his behalf.

Reservation of appointments on population basis to Scheduled Castes and other Backward Classes.

Sri K. PRABHAKAR (Nelamangala-Scheduled Castes) [On behalf of Sri M. Madiah (Nanjangud—Scheduled Castes)].—

Sir, I move :

> "That this Assembly is of the opinion that necessary rules in respect of reservation of posts or appointments on population basis to the candidates belonging to the Scheduled Castes and other Backward Classes which are not adequately represented in the gazetted and non-gazetted services of the State, be framed for guidance of the Public Service Commission in Mysore, keeping in view the relevant provisions of the Indian Constitution."

ಸ್ವಾಮಿ, ಹೊಸದಾಗಿ ರಚಿತವಾಗಿರತಕ್ಕಂಥ Indian Constitution ಪ್ರಕಾರ ಆಗಿರತಕ್ಕ ಕೆಲವು ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ನಾವು ಈಗ ಸರ್ಕಾರಿ ನೌಕರಿಗಳಲ್ಲಿ ಬೇರೆ ಬೇರೆ ಜನಾಂಗ ಮತ್ತು ಪಂಗಡಗಳಿಗೆ ಸೇರಿದವರನ್ನೂ ಕೂಡ ತಕ್ಕ ಪ್ರಮಾಣದಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವ ಪ್ರಮೇಯ ಒದಗಿದೆ. ಈ ಕಾನ್‌ಸ್ಟಿಟ್ಯೂಷನ್ ಬರುವುದಕ್ಕೆ ಮುಂಚೆ ನಮ್ಮ ಮೈಸೂರು ದೇಶದ ರಿಕ್ರೂಟ್‌ಮೆಂಟ್ ಪರಿಸ್ಥಿತಿ ಒಂದು ರೂಪದಲ್ಲಿತ್ತು. ಆದರೆ keeping in view the relevant portion of the Indian Constitution ಎಂದರೆ ಮೊದಲು ಇದ್ದಂಥ ಪದ್ಧತಿಗೆ ಹೊಸದಾಗಿ ಇಂಡಿಯನ್ ಕಾನ್‌ಸ್ಟಿಟ್ಯೂಷನ್ನಿನಲ್ಲಿರುವ ಪದ್ಧತಿಗಳ spiritನ್ನೂ ಗಮನದಲ್ಲಿಟ್ಟುಕೊಂಡು ನಾವು ಹುದ್ದೆಗಳನ್ನು ಕೊಡಬೇಕಾಗಿದೆ. ಈ ಕಾನ್‌ಸ್ಟಿಟ್ಯೂಷನ್ ಪ್ರಕಾರವಾಗಿ I. A. S. ಎಂಬ ಒಂದು ಹೊಸ ಪದ್ಧತಿ ಬಂದಿದೆ. ಆದರೆ ಈ I.A.S. ಕೆಲಸಕ್ಕೆ ಜನರನ್ನು ತೆಗೆದುಕೊಳ್ಳುವಾಗ ಅದರ ಪರತ್ತುಗಳು ಬಹಳ ನಿಖರವಾಗಿರುವುದರಿಂದ State ಎನ್ನತಕ್ಕಂಥಾದ್ದು ಬಹು ಮಟ್ಟಿಗೆ ಹಿಂದುಳಿದ ಪಂಗಡಗಳವರಿಗೆ ಪ್ರಾತಿನಿಧ್ಯಕೊಡಲು ಸಾಧ್ಯವಾಗಿಲ್ಲವೆಂದು ಹೇಳುತ್ತಿದ್ದಾರೆ. ಏತಕ್ಕೆಂದರೆ ಅದು ಕೇವಲ ಮೆರಿಟ್ಟಿನಮೇಲೆಯೆ ಮಾಡಲಾಗುತ್ತಿದೆಯೆಂಬ ಅಂಶ ಎಲ್ಲರಿಗೂ ತಿಳಿದಿರತಕ್ಕದ್ದೇ ಆಗಿದೆ. ಇನ್ನುಳಿದ ವಿಚಾರ, ಸಂಸ್ಥಾನದ ಸರ್ಕಾರದವರು ತಮ್ಮ ಕೈಲಿ ಇರತಕ್ಕಂಥ ಅಧಿಕಾರವೇನಿದೆಯೋ ಅದನ್ನನುಸರಿಸಿ ಮಾಡತಕ್ಕಂಥ ಹುದ್ದೆಗಳಲ್ಲಿ ಎಷ್ಟರಮಟ್ಟಿನ ನ್ಯಾಯವನ್ನು ಬೇರೆ ಬೇರೆ ಜನಾಂಗಗಳಿಗೆ ದೊರಕಿಸಿಕೊಡಬೇಕೋ ಅದನ್ನು ಕೂಡ ಖಂಡಿತವಾಗಿಯೂ ಮತ್ತು ನ್ಯಾಯವಾಗಿಯೂ ದೊರಕಿಸಿಕೊಡುವುದು ಅವರ ಕರ್ತವ್ಯವಾಗಿದೆ. ಈಗ ನಮ್ಮ ದೇಶದಲ್ಲಿರತಕ್ಕ ರಿಕ್ರೂಟ್‌ಮೆಂಟ್ ಪದ್ಧತಿಯ ಪ್ರಕಾರವಾಗಿ ಅನೇಕ ಕೋಮುಗಳವರಿಗೆ ಮೊದಲಿನಿಂದಲೂ ಕೆಲಸಗಳನ್ನು ದೊರಕಿಸಿಕೊಡುತ್ತಾ ಬಂದಿದ್ದೀರಿ. ಹೀಗೆ ಮಾಡುವುದರಲ್ಲಿ ಒಂದು glaring factor ಎದ್ದು ಕಾಣುತ್ತಿದೆ. ಈಗ ಯಾವ ಯಾವ ಕೋಮುಗಳಿಗೆ ಗೆಜೆಟೆಡ್ ಮತ್ತು ನಾನ್‌ಗೆಜೆಟೆಡ್ ಹುದ್ದೆಗಳು ಬಂದಿವೆ ಎಂಬುದನ್ನು stock-taking ವಿಧಾನದ ಪ್ರಕಾರ ನೋಡಿದರೆ ಕೆಲವು ಜನಾಂಗದವರಿಗೆ ಬಹಳ ಅನ್ಯಾಯವಾಗಿದೆ. ಬ್ಯಾಕ್‌ವರ್ಡ್ ಕಮ್ಯೂನಿಟೀಸ್ ರೆಪ್ರೆಸೆಂಟೇಷನ್ ಎನ್ನುವ ಒಂದು ಅಂಶವನ್ನು ಇದರಲ್ಲಿ ಸೇರಿಸಿದ್ದಾರೆ. ಡಿಪ್ರೆಸ್ಡ್ ಕ್ಲಾಸ್ ಎನ್ನುವ ಅಂಶವೂ ಇದೆ. ಇವೆರಡೂ ಕೂಡ ರಿಲೇಟೀವ್ terms. ನಾವು ಈಗ ಈ ರಿಕ್ರೂಟ್‌ಮೆಂಟಿಗೆ ಸಂಬಂಧಪಟ್ಟ ಹಿನ್ನೆಲೆಯನ್ನು ನೋಡುವುದಾದರೆ ಹಿಂದೆ ಸರ್ಕಾರಿ ಹುದ್ದೆಗಳಲ್ಲಿ ಬಹಳ ಸಂಖ್ಯಾತರಾಗಿ ಮುಂದಿರುವ ಪಂಗಡದವರು ಬ್ರಾಹ್ಮಣರು, ಎನ್ನುವುದೇ ಹಿನ್ನೆಲೆ. ಆಮೇಲೆ ನಾನ್ ಬ್ರಾಹ್ಮಿನ್‌ಗಳ ಒಂದು ದೊಡ್ಡ ಮೂವ್‌ಮೆಂಟೇ ಹುಟ್ಟಿ ಇದನ್ನು ಈಕ್ವಲೈಜ್ ಮಾಡಬೇಕೆಂಬ ಪ್ರಯತ್ನ ನಡೆಯಿತು. ಆಗ ಒಂದು ವಿಧವಾದ ರೇಷನಿಂಗ್ ಆಗಿ non-Brahmin representationಅನ್ನು ಎಷ್ಟರಮಟ್ಟಿಗೆ ಸಾಧ್ಯವೋ ಅಷ್ಟರಮಟ್ಟಿಗೆ ಮಾತ್ರ ಸರ್ಕಾರದವರು ಮಾಡಿಕೊಂಡು ಬಂದರು. ಆಮೇಲೆ ಕೇವಲ ಹಿಂದುಳಿದ ಜನಾಂಗಗಳಿಗೆ ಈ ಹುದ್ದೆಗಳನ್ನು ಕೊಡಬೇಕೆಂಬ ತತ್ವವನ್ನು ಈ ರಿಕ್ರೂಟ್‌ಮೆಂಟ್ ಪದ್ಧತಿಯಲ್ಲಿ ಸೇರಿಸಿದರು. ಸರ್ಕಾರ ಎಷ್ಟರಮಟ್ಟಿಗೆ ಈ ಕೆಲಸವನ್ನು ಸಾಧಿಸಿದೆ ಎಂಬುದನ್ನು ನೋಡುತ್ತಾ ಹೋದರೆ ಈಗ ದೊರಕಿಸಿರುವಂಥ ಫಲದಿಂದ ಅದು ಅಷ್ಟು ಸಂತೋಷಕರವಾಗಿಲ್ಲ.

ಈ ಬ್ಯಾಕ್‌ವರ್ಡ್ ಕಮ್ಯೂನಿಟಿಗಳಲ್ಲಿ ಉದಾಹರಣೆಗೆ ಹೇಳುವುದಾದರೆ ಮೇಜರ್ ಕಮ್ಯೂನಿಟಿಗಳಾದ ಒಕ್ಕಲಿಗರು, ಲಿಂಗಾಯಿತರಲ್ಲಿ ಕೆಲಕೆಲವರು ಮುಂದೆ ಮುಂದೆ ಬಂದಿದ್ದಾರೆ. ಆದರೆ ಈ ಬ್ಯಾಕ್‌ವರ್ಡ್ ಕಮ್ಯೂನಿಟಿಗಳಿಗೆ ಕೆಲಸಗಳನ್ನು ಕೊಡುವಾಗ ಕೆಲ ಕೆಲವು ಕೋಮಿನಲ್ಲಿ ಕೆಲ ಕೆಲವರು, ಈ ಸರ್ಕಾರದ ವಿದ್ಯಾಭ್ಯಾಸದ ಸೌಲಭ್ಯಗಳನ್ನು ಪಡೆದುಕೊಂಡಿರತಕ್ಕಂಥವರು ಮಾತ್ರ ಮುಂದೆ ಬಂದಿದ್ದಾರೆ. ಬ್ಯಾಕ್‌ವರ್ಡ್ ಕಮ್ಯೂನಿಟಿಗಳೆಂದು ಏನಿರುತ್ತವೆಯೋ ಆ ಕಮ್ಯೂನಿಟಿಗಳಲ್ಲಿ ಬಹಳ ಹಿಂದುಳಿದ ಒಂದು ಗ್ರೂಪ್, ಸಣ್ಣ ಪಂಗಡ, ಪ್ರತಿಯೊಂದು ಕೋಮಿನಲ್ಲಿಯೂ ಇದ್ದೇ ಇದೆ. ಅವುಗಳ ಕಡೆಗೆ ಸರ್ಕಾರದ ಗಮನ ಬಂದಿಲ್ಲ. ಒಕ್ಕಲಿಗರ ಜನಾಂಗವನ್ನು ತೆಗೆದುಕೊಂಡರೆ ಕೆಲವು familiesಗಳು ಸೌಲಭ್ಯಗಳನ್ನು ತೆಗೆದುಕೊಳ್ಳುತ್ತಲೇ ಬಂದಿದೆ. ವಿದ್ಯಾಭ್ಯಾಸದ ಸೌಲಭ್ಯಗಳನ್ನು ಅವರಲ್ಲಿ ಕೆಲವರು ಹಾಗೆ ಪಡೆದುಕೊಂಡು ಬಂದುದ್ದರಿಂದ, ಹಿಂದುಳಿದಿರುವವರೆಲ್ಲಾ ಇನ್ನೂ ಹಾಗೆಯೇ ಹಿಂದುಳಿದೇ ಇದ್ದಾರೆ. ಸರ್ಕಾರದವರು ಹುದ್ದೆಗಳನ್ನು ಕೊಡುವಾಗ ಇದನ್ನು ಅವರು ಗಮನದಲ್ಲಿಟ್ಟುಕೊಳ್ಳಬೇಕು. ಈ ಒಂದು ಕಡೆಗೆ ಸರ್ಕಾರ ಗಮನ ಕೊಟ್ಟಿಲ್ಲ. ಬ್ಯಾಕ್‌ವರ್ಡ್ ಕಮ್ಯುನಿಟಿಗಳ ಪೈಕಿ ನಿಗಾ ಕೊಡಬೇಕಾದದಂಥ ಭಾಗ ಇದು. ಇನ್ನುಮೇಲೆ ಈ ಹುದ್ದೆಗಳನ್ನು ಜನಸಂಖ್ಯೆಯ ಆಧಾರದಮೇಲೆ ಕೊಡಬೇಕಾದದ್ದು ಒಂದು ನ್ಯಾಯವಾದ ತತ್ವ. ಇದನ್ನು ಒಪ್ಪಿ

(SRI K. PRABHAKAR.)

ಕೊಂಡು ಅನೂಚಾನವಾಗಿ ಇದನ್ನು ಜಾರಿಗೆ ತರಬೇಕು. ಹಾಗೆ ಮಾಡುವಾಗ ಒಂದು ಜನಸಂಖ್ಯೆಯ ಆಧಾರದಮೇಲೆ ಪ್ರತಿಯೊಂದು ಕೋಮಿನವರಿಗೂ ದೊರೆಯಬೇಕಾದ ಹುದ್ದೆಗಳು ಯಾರಿಗೆ ದೊರೆತಿಲ್ಲ, ಯಾರಿಗೆ ದೊರೆತಿವೆ ಎಂಬುದಕ್ಕೂ ಕೂಡ ಸರ್ಕಾರದವರು ಒಂದು Table ಇಟ್ಟುಕೊಂಡು, ಇದಕ್ಕೂ ನಿಗಾ ಕೊಟ್ಟು appointment ಕೊಡಬೇಕು. ಈ ಹುದ್ದೆಗಳನ್ನು ಕೊಡುವಾಗ influences ಏನಿವೆ, ಅವು ಹೆಚ್ಚಿಗೆ ಕೆಲಸಮಾಡುತ್ತವೆಯೋ ಏನೋ ಅನ್ನುವಹಾಗೆ ಹೆಚ್ಚಿಗೆ ಹುದ್ದೆಗಳು ದೊರೆತವರಿಗೇ ದೊರೆಯುತ್ತಿವೆ. ಇದು ನಿಲ್ಲಬೇಕು.

10 A. M.

ಈಗ ಬ್ಯಾಕ್‌ವರ್ಡ್ ಕಮ್ಯೂನಿಟಿಗಳಲ್ಲಿ ಕೆಲವು ಸಣ್ಣಪುಟ್ಟ ಕಮ್ಯೂನಿಟಿಗಳಿವೆ. ಅವುಗಳಿಗೆ ಕೋಮುವಾರು ಪ್ರಾತಿನಿಧ್ಯ ಸಾಕಷ್ಟು ದೊರೆಯುತ್ತಿಲ್ಲ, ದೊರೆಯುವಂತೆ ಮಾಡಬೇಕಾದದ್ದೂ ಸರ್ಕಾರದ ಕರ್ತವ್ಯ. ಅವರ ಜನಸಂಖ್ಯೆಗನುಸಾರವಾಗಿ ಅವರಿಗೆ ಪ್ರಾತಿನಿಧ್ಯ ಕೊಡಬೇಕು. ಹಾಗೆ ಮಾಡಿದರೆ ಕೆಲವಾರು ವರ್ಷಗಳಲ್ಲಿ ಬ್ಯಾಕ್‌ವರ್ಡ್ ಕಮ್ಯೂನಿಟಿಗಳಲ್ಲಿರುವ ಮೇಜರ್ ಕಮ್ಯೂನಿಟಿಗಳ ಜೊತೆಗೆ ಸಣ್ಣಪುಟ್ಟ ಕಮ್ಯೂನಿಟಿಗಳೂ ಬರಲು ಅವಕಾಶವಾಗುತ್ತದೆ. ಸಣ್ಣಪುಟ್ಟ ಕಮ್ಯೂನಿಟಿಗಳವರು ಸರ್ಕಾರದಲ್ಲಿ ಬಂದು ಮನವಿ ಮಾಡಿ ತಮ್ಮ ಪ್ರಾತಿನಿಧ್ಯ ದೊರೆಕಿಸಿಕೊಳ್ಳಲು ಅವರಿಗೆ ಶಕ್ತಿಯಿಲ್ಲ. ಆದಾಗ್ಯೂ ಸರ್ಕಾರ ಈ ಕಡೆ ಹೆಚ್ಚು ನಿಗ ಕೊಡುವ ಕಾಲ ಸನ್ನಿಹಿತವಾಗಿದೆ. ಹುದ್ದೆಗಳು ಯಾವ ಯಾವ ಪಂಗಡಗಳಿಗೆ ಎಷ್ಟೆಷ್ಟು ಬಂದಿದೆಯೆಂದು ನೋಡುವಾಗ ಪೋಲಿಸು ಕಾನ್ಸ್ಟೇಬಲ್, ಉಪಾಧ್ಯಾಯರು, ಪೌಲ್ಟ್ರಿ ಇನ್ಸ್‌ಪೆಕ್ಟರು ಇಂಥ ಹುದ್ದೆಗಳಲ್ಲಿ ಮಾತ್ರ ಸೀರಿಯಲ್ ನಂಬರು ಪ್ರಕಾರ ಭಾಗ ಮಾಡುತ್ತಾರೆ. ಆದರೆ ಜನಸಂಖ್ಯೆಗನುಸಾರವಾಗಿದೆಯೆ? ರೇಷಿಯೋ ಎಷ್ಟರ ಮಟ್ಟಿಗಿದೆ? ಎಂದು ಹೇಳುವಾಗ ಪ್ರಿನ್ಸಿಪಲ್ ವಿಚಾರ ಬರುತ್ತದೆ. ಒಬ್ಬ ಐ. ಜಿ. ಪಿ.ಗೂ ಒಬ್ಬ ಕಾನ್ಸ್ಟೇಬಲ್‌ಗೂ ಇರುವ ವ್ಯತ್ಯಾಸವೆಷ್ಟು? ಅವೆರಡು ಹುದ್ದೆಗಳನ್ನೂ ಸಮ ಎಂದು ಪರಿಗಣಿಸಬಹುದೆ ಎಂದು ಪ್ರಶ್ನೆ ಹಾಕಿಕೊಂಡರೆ ಈ ಸಮಸ್ಯೆ ಆಗ ಅರ್ಥವಾಗುತ್ತದೆ. ಪ್ರಾತಿನಿಧ್ಯ ಕೊಡುವಾಗ Key ಪೊಸಿಷ್ಯನ್ ಸರ್ಕಾರದಲ್ಲೇನಿದೆ, ಚೀಫ್ ಸೆಕ್ರೆಟರಿ, ಸ್ಟೇಟ್ ಆಫೀಸರುಗಳು ಇಂಥ ಹುದ್ದೆಗಳೇನಿವೆ ಅಂಥವುಗಳಲ್ಲೂ ಮೈನರ್ ಕಮ್ಯೂನಿಟಿಗಳಿಗೆ ಏನು ಪ್ರಾತಿನಿಧ್ಯ ಕೊಡಬೇಕೆಂಬುದನ್ನು ನೋಡಬೇಕು. ಮೊನ್ನೆ ಮಾನ್ಯ ರೆವೆನ್ಯೂ ಸಚಿವರು ಒಂದು ಸ್ಟೇಟ್‌ಮೆಂಟ್ ತೋರಿಸಿದರು. ಅದರಲ್ಲಿ ಒಕ್ಕಲಿಗರು ಮತ್ತು ಆದಿಕರ್ಣಾಟಕರಿಗೆ 12 ಮತ್ತು 17ರಂತೆ ರೇಷಿಯೋ ಇರುವಂತೆಯೂ, ಕೇವಲ 5 ಮಾತ್ರ ವ್ಯತ್ಯಾಸವಿದ್ದ ಹಾಗೂ ಕಂಡುಬಂತು; ಅದನ್ನು ನೋಡಿ ಸಂತೋಷವಾಯಿತು. ಆದರೆ ವಿಚಾರಮಾಡಿ ನೋಡಿದರೆ, ಷೆಡ್ಯೂಲ್ಡ್ ಪಂಗಡಗಳಲ್ಲಿ ಒಬ್ಬ ಡೆಪ್ಯುಟಿ ಕಮಿಷನರೂ ಇಲ್ಲ, ಒಬ್ಬ ಐ. ಜಿ. ಪಿ. ಇಲ್ಲ, ಒಬ್ಬ ಗೆಜೆಟೆಡ್ ಆಫೀಸರೂ ಇಲ್ಲ ಎಂದು ಕಂಡುಬಂತು. ಹೀಗೆ 12ರವರೆಗೆ ಪರ್ಸೆಂಟೇಜ್ ಏರಿಸಿದ್ದರೂ ಈ ತರಹ ನ್ಯೂನತೆಯಿದೆ.

Sri Kadidal MANJAPPA (Minister for Revenue and Public Works).—On a point of personal explanation, Sir. ಅವರಿಗೆ ತೋರಿಸಿದ ಪಟ್ಟಿ ನಾನ್ ಗೆಜೆಟೆಡ್ ಆಫೀಸರುಗಳ ರ್‍ಯಾಂಕಿಗೆ ಸಂಬಂಧಪಟ್ಟಿರುವುದು.

ಅಧ್ಯಕ್ಷರು.—ನಾನ್ ಗೆಜೆಟೆಡ್ ಆಫೀಸರುಗಳ ಪಟ್ಟಿಯಲ್ಲಿ ಐ. ಜಿ. ಪಿ. ಹುದ್ದೆ ವಿಚಾರ ಬರುವುದಿಲ್ಲ.

ಶ್ರೀ ಕೆ. ಪ್ರಭಾಕರ್.—ನಾನು ಸಾರಾಂಶ ಹೇಳುತ್ತಿದ್ದೇನೆ. ಹುದ್ದೆಗಳನ್ನು ಜನಾಂಗದ ಆಧಾರದ ಮೇಲೆ ಕೊಡಬೇಕೆಂಬ ತತ್ವವನ್ನು ಸರ್ಕಾರದವರು ಒಪ್ಪಿದ್ದಾರೆ. ಅದನ್ನು ಜಾರಿಗೆ ತರುವಾಗ ಗ್ರೇಡೆಡ್ ಅಪಾಯಿಂಟ್‌ಮೆಂಟ್ಸ್‌ಗೆ ಹೆಚ್ಚು ಬೆಲೆಕೊಟ್ಟು ಪ್ರಾತಿನಿಧ್ಯ ಸಿಕ್ಕುವ ಹಾಗೆ ಗೆಜೆಟೆಡ್ ಮತ್ತು ನಾನ್‌ಗೆಜೆಟೆಡ್ ನೌಕರರು ಯಾರಿದ್ದಾರೋ ಅವರಿಗೆ ಹೆಚ್ಚು ಪ್ರಾಶಸ್ತ್ಯ ತೋರಿಸುವಂತೆ ಮಾಡಬೇಕು. ಹೀಗೆ ಮಾಡದಿದ್ದರೆ ತಾವು ಕೊಡುವ ಉತ್ತೇಜನ ಸಂಪೂರ್ಣವಾಗಿ ಫಲಕಾರಿಯಾಗುವುದಿಲ್ಲ. ಆದ್ದರಿಂದ ಇನ್ನು ಮುಂದಾದರೂ ಘನ ಸರ್ಕಾರದವರು ಈ ವಿಚಾರದಲ್ಲಿ ಕಾನೂನು ಮಾಡಿ ಪಬ್ಲಿಕ್ ಸರ್ವಿಸ್ ಕಮಿಷನರಿಗೆ ಅದನ್ನು ಕಳುಹಿಸುತ್ತಿರುವಾಗ ನಿಮ್ನ ವರ್ಗದವರಿಗೆ ಮತ್ತು ಹಿಂದುಳಿದ ಪಂಗಡದವರಿಗೆ ಸಾಕಾದಷ್ಟು ಪ್ರಾತಿನಿಧ್ಯ ಕೊಡುವಂತೆ ಅವಕಾಶ ಕೊಡಬೇಕು. ಈಗ ತಾನೆ ಮಾಡಿರುವ ರೂಲ್ಸಿನಲ್ಲಿ ಆ ಅವಕಾಶವಿಲ್ಲವೆಂದು ಗೊತ್ತಾಗಿದೆ. ಪ್ರಜಾ ಪ್ರಭುತ್ವದಲ್ಲಿ ಒಳ್ಳೆಯದನ್ನು ಒಳ್ಳೆಯದೆಂದು ಹೇಳಿ ಕೆಟ್ಟದ್ದು ಮಾಡಿದಾಗ ಅಡ್ಡಿ ಮಾಡಬೇಕಾದದ್ದು ನಮ್ಮ ಕರ್ತವ್ಯ.. ಈಗ ಶೇಕಡ $16\frac{2}{3}$ ಹುದ್ದೆಗಳನ್ನು ಷೆಡ್ಯೂಲ್ಡ್ ಕ್ಯಾಸ್ಟುಗಳಿಗೆ ಕೊಡಬೇಕೆಂಬ ರೂಲ್ ಇದೆ. ಅದನ್ನು ಕಾರ್ಯಗತ ಮಾಡುತ್ತೇವೆಂದು ಹೇಳುತ್ತಾರೆ, ಸಂತೋಷ. ಆದರೆ ಎಲ್ಲ ದರ್ಜೆಯ ಹುದ್ದೆಗಳನ್ನೂ ಒಳಗೊಂಡಿರಬೇಕು. ಗೆಜೆಟೆಡ್ ಹುದ್ದೆಗಳಿಗೆ ಅದು ಅನ್ವಯವಾಗುತ್ತದೆಯೆ ಇಲ್ಲವೆ ಎಂಬ ಶಂಕೆಯಿದೆ; ಈ ತತ್ವವನ್ನು ಸಂಬಂಧಪಟ್ಟ ಮಂತ್ರಿಗಳು ಅದನ್ನು ಕ್ಲಾರಿಫೈ ಮಾಡಿದರೆ ಸಂತೋಷ. ಒಂದು ವೇಳೆ ಇಂಡಿಯಾ ದೇಶದಲ್ಲಿ ಮೈಸೂರಿಗೆ ಪುರಸ್ಕಾರವಿರುವ ಹಾಗೆ ಮಾಡಬೇಕೆಂದು ಪ್ರಯತ್ನಿಸಿದ್ದರೆ ಸಂತೋಷ. ಆದರೆ ಇಂಡಿಯಾ ದೇಶದಲ್ಲಿ ಇನ್ನೂ ಅನೇಕರು ಆಗಲೇ ಇದನ್ನು ಹೇಳಿದ್ದಾರೆ. ಷೆಡ್ಯೂಲ್ಡ್ ಕ್ಯಾಸ್ಟನವರಿಗೆ ಶೇಕಡ ಇಷ್ಟುಭಾಗ ಹುದ್ದೆಗಳನ್ನು ಕೊಡಬೇಕೆಂದು ನೆರೆಹೊರೆ ಪ್ರಾಂತಗಳು ನಿರ್ಧಾರ ಮಾಡಿದಮೇಲೆ ಮೈಸೂರು ಮಾಡಿರುವುದು ಸಂತೋಷಪಡುವ ವಿಚಾರವಲ್ಲ; ಆದರೂ ಮಾಡಿದ್ದಾರೆ. ಹೀಗೆ ಈ ಜನಾಂಗಕ್ಕೆ ಬಂದು ಉಪಕಾರವಾಗಬೇಕಾದರೆ, ಸರ್ಕಾರದ ಉದ್ದೇಶ ನೆರವೇರಬೇಕಾದರೆ, ಸರ್ಕಾರದವರು ಈ ವಿಚಾರವನ್ನು ಸೂಕ್ಷ್ಮವಾಗಿ ಆಲೋಚನೆ ಮಾಡಬೇಕು. ಶೇಕಡ $16\frac{2}{3}$ ಹುದ್ದೆಗಳನ್ನು ಈ ಪಂಗಡದವರಿಗೆ ಮೀಸಲಾಗಿಡುವುದೆಲ್ಲಾ ಗೆಜೆಟೆಡ್ ಹುದ್ದೆಗಳಿಗೇ ಅನ್ವಯಿಸುತ್ತದೆಯೆಂದು ಹೇಳಿದರೂ ಕೂಡ ಎಂಟು ಹತ್ತು ವರ್ಷಗಳಲ್ಲಿ ಎಷ್ಟು ಗೆಜೆಟೆಡ್ ಹುದ್ದೆಗಳನ್ನು ಕೊಡಬಹುದು, ಹೀಗೆ ಮಾಡುವುದರಿಂದ ಎಷ್ಟು ಪ್ರಾತಿನಿಧ್ಯ ದೊರೆಯಬಹುದೆಂದು ಲೆಕ್ಕ ಹಾಕಿದರೆ ಸುಮಾರು 20 ವರ್ಷಗಳಾದರೂ ಜನಾಂಗದ ಆಧಾರದ ಮೇಲೆ ಕೊಡಬೇಕಾದಷ್ಟು ಸಂಖ್ಯೆಯಲ್ಲಿ ಷೆಡ್ಯೂಲ್ಡ್ ಪಂಗಡಗಳಿಗೆ ಮತ್ತು ಬ್ಯಾಕ್‌ವರ್ಡ್ ಕಮ್ಯೂನಿಟಿಗಳಿಗೆ ನ್ಯಾಯ ದೊರೆಯುವುದಿಲ್ಲ, ಹುದ್ದೆಗಳು ಸಾಕಷ್ಟು ಸಿಕ್ಕುವುದಿಲ್ಲ. ಏಕೆಂದರೆ ಹೊಸದಾಗಿ ಮಾಡುವ ಹುದ್ದೆಗಳಿಗೆ ಮಾತ್ರ ಸರ್ಕಾರದವರು ಮಾಡಿರುವ ಕಾನೂನು ಅನ್ವಯಿಸುತ್ತದೆ. ಆದ್ದರಿಂದ ಈ ತತ್ವವನ್ನು ಪ್ರಮೋಷನ್ ವೇಕೆನ್ಸಿಗಳಿಗೂ ಅನ್ವಯ ಮಾಡಿ ಈ ಕಾನೂನು ಉದ್ದೇಶ ನೆರವೇರುವಂತೆ

ಮಾಡಬೇಕು. ಪ್ರಮೋಷನ್ ವೇಕೆನ್ಸಿಗಳಲ್ಲಿ ಶೇಕಡ 25ರಿಂದ 50ರವರೆಗೆ ಮಾಡಬಹುದೆಂಬ ಅವಕಾಶವಿದೆ. ಇದನ್ನು ಕಾರ್ಯಗತಮಾಡಿ ಸರ್ಕಾರದವರು ಗ್ರೇಡೆಡ್ ಆಫೀಸರುಗಳು ಯಾರಿದ್ದಾರೆ, ಸಬ್‌ಡಿವಿಜನ್ ಆಫೀಸರು, ಡೆಪ್ಯುಟಿ ಕಮಿಷನರು ಮುಂತಾದ ಅಧಿಕಾರಿಗಳು ಯಾರಿದ್ದಾರೆ ಅಂಥವರ ಪಟ್ಟಿಮಾಡಿ ಶೇಕಡ 16⅔ ಭಾಗ ಮೀಸಲಾಗಿಡುವಾಗ ಆ ಹುದ್ದೆಗಳನ್ನೂ ಪ್ರಮೋಷನ್ ವೇಕೆನ್ಸಿಗಳಲ್ಲೂ ಮೀಸಲಾಗಿಟ್ಟರೆ ಸರ್ಕಾರದ ಉದ್ದೇಶವೂ ಈಡೇರಿ ತನ್ಮೂಲಕ ಜನರ ಆಸೆಯೂ ನೆರವೇರಿ ಹತ್ತು ವರ್ಷಗಳಲ್ಲಿ ಬೇರೆ ಜನಾಂಗದ ಮಟ್ಟಕ್ಕೆ ಈ ಪಂಗಡಗಳವರು ಬರಲು ಸಾಧ್ಯವಾದೀತು. ಈಗ ಅನುಸರಿಸಿರುವ ತತ್ವವೇನೋ ಒಳ್ಳೆಯದೇ. ಇದನ್ನು ಕಾರ್ಯರೂಪದಲ್ಲಿ ಅನುಸರಿಸುವಾಗ ಹುದ್ದೆಗಳಲ್ಲಿರುವವರಿಗೆ ಪ್ರಮೋಷನ್ ಸರಿಯಾಗಿ ಸಿಕ್ಕದೆ irregular ಆಗುತ್ತದೆಂದು ಹೇಳುವುದು ಸಹಜ. ಆದರೆ ಎಡಗೈಯ್ಯಲ್ಲಿ ಕೊಟ್ಟಿದ್ದನ್ನು ಬಲಗೈಯ್ಯಲ್ಲಿ ಇಲ್ಲವೆಂದು ಹೇಳದೆ ಕೊಟ್ಟಿರುವ ಪರ್ಸೆಂಟೇಜ್ ನ್ಯಾಯ ರೀತಿಯಲ್ಲಿ ದೊರಕಿಸಿಕೊಡಬೇಕು. 15 ವರ್ಷಗಳು ಕಾದು ಒಬ್ಬೊಬ್ಬರನ್ನು ಗೆಜೆಟೆಡ್ ಆಫೀಸರಾಗಿ ಮಾಡಿದರೆ ಅದರಿಂದ ಸಂತೋಷಪಡುವ ಹಾಗಿಲ್ಲ. ಆದ್ದರಿಂದ ಸ್ಪೆಷಲ್ ಕೇಸಾಗಿ ಭಾವಿಸಿ ಷೆಡ್ಯೂಲ್ಡ್ ಪಂಗಡಗಳವರಿಗೆ ಸಂಬಂಧಪಟ್ಟ ಆಫೀಸರುಗಳ ಪಟ್ಟಿ ಮಾಡಿ ಅವರಿಗೆ ಪ್ರಮೋಷನ್ ವೇಕೆನ್ಸಿಗಳಲ್ಲೂ ಕೂಡ ಹೆಚ್ಚಿನ ಅವಕಾಶ ಕೊಡಬೇಕಾದ್ದು ಅವಶ್ಯಕ. ಈಗ ಸರ್ಕಾರದಲ್ಲಿರುವ ಇತರ ಗೆಜೆಟೆಡ್ ಆಫೀಸರುಗಳೂ ಸಹ ಪ್ರಾತಿನಿಧ್ಯವಿಲ್ಲದಿರುವ ಈ ಕೋಮುಗಳಿಗೆ ಹೀಗೆ ಅವಕಾಶಕೊಡುವುದನ್ನು ಸಂತೋಷದಿಂದ ಸಹಿಸುತ್ತಾರೆಂಬ ಭಾವನೆ ನನಗಿದೆ. ಒಂದು ರೀತಿಯಲ್ಲಿ ಕೆಲವರು ಸೀನಿಯಾರಿಟಿ ಹೋಯಿತೆಂದು ಹೇಳಬಹುದು. ಘನ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಸಾಕಷ್ಟು ಪ್ರಾತಿನಿಧ್ಯನಿಲ್ಲದಿರುವ ಪಂಗಡಗಳಿಗೆ ಉತ್ತೇಜನವೀಯುವುದನ್ನು ಮನಸ್ಸಿನಲ್ಲಿಟ್ಟು ಪ್ರಮೋಷನ್ ಕೊಡುವುದರ ಮೂಲಕ ಪರ್ಸೆಂಟೇಜ್ ಹೆಚ್ಚಿಸಿ ಅದರ ಜೊತೆಗೆ ಇತರ ಹುದ್ದೆಗಳಲ್ಲೂ ಜನಸಂಖ್ಯೆ ಆಧಾರದ ಮೇಲೆ ಕೆಲಸ ಕೊಡುವುದನ್ನು ಮನಸ್ಸಿನಲ್ಲಿಟ್ಟು ಹೊಸ ಹುದ್ದೆಗಳಲ್ಲೂ ಸರಿಯಾದ ಅವಕಾಶ ಕೊಟ್ಟರೆ ನಾಲ್ಕೈದು ವರ್ಷಗಳೊಳಗಾಗಿ ಇತರರ ಮಟ್ಟಕ್ಕೆ ಇವರು ಬರಲು ಅವಕಾಶವಾಗಬಹುದು. ಈ ನೀತಿಯನ್ನನುಸರಿಸಿ ಉದಾರವಾಗಿ ಸರ್ಕಾರದವರು ಕಾರ್ಯಗತ ಮಾಡಬೇಕು ಎಂದು ಮನವಿ ಮಾಡುತ್ತೇನೆ.

ಆ ಮೇಲೆ ಈ ಹುದ್ದೆಗಳ ವಿಚಾರದಲ್ಲಿ ಒಂದುಕಡೆ ಪಬ್ಲಿಕ್ ಸರ್ವಿಸ್ ಕಮಿಷನರ ಕೈವಾಡ ಮತ್ತೊಂದು ಕಡೆ ಸರ್ಕಾರದ ಕೈವಾಡ ಇದೆ. ಈ ಎರಡೂ ಸೇರಿ ಹುದ್ದೆಗಳನ್ನು ಹಂಚಲಾಗುತ್ತದೆ ಎಂದು ಹೇಳುವುದು ಸಹಜ. ಹೀಗಿರುವಾಗ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಕೊಡುವ ಹುದ್ದೆಗಳು ಸರ್ಕಾರದವರು ಮಾಡಿರುವ ಕಾನೂನಿಗನುಸಾರವಾಗಿವೆಯೇ, ಖಚಿತವಾಗಿ ಕಾನೂನಿನಂತೆ ನಡೆಯುತ್ತಿದ್ದಾರೆಯೆ ಇಲ್ಲವೇ ಎಂಬುದನ್ನು ಪರಿಶೀಲಿಸುವುದು ನ್ಯಾಯವಾದುದು. ಈಗ ಪಬ್ಲಿಕ್ ಸರ್ವಿಸ್ ಕಮಿಷನರು ಕೊಡುವ ಹುದ್ದೆಗಳ ವಿಚಾರದಲ್ಲಿ ಸರ್ಕಾರಕ್ಕೆ ಬರಬೇಕಾದ ವರದಿಯೇನಿದೆಯೋ ಅದು ಸಕಾಲದಲ್ಲಿ ಸರಿಯಾಗಿ ಬರುತ್ತಿಲ್ಲ. ಅದಕ್ಕೆ ನಿಗಾಕೊಡದಿದ್ದರೆ ನೀವು ಮಾಡಿದ ಕಾನೂನು ಜಾರಿಯಾಗುತ್ತಿದೆಯೋ ಇಲ್ಲವೇ ಎಂದು ನೋಡದಿದ್ದರೆ, ಕಾನೂನು ಪ್ರಕಾರ ಯಾರ್ಯಾರಿಗೆ ಎಷ್ಟೆಷ್ಟು ಕೊಡಬೇಕಾಗಿತ್ತೋ ಅಷ್ಟಷ್ಟನ್ನು ಕೊಡದಿದ್ದರೆ ಸರ್ಕಾರದ ಗುರಿ ಈಡೇರುವುದಿಲ್ಲ. ಆದ್ದರಿಂದ ಪಬ್ಲಿಕ್ ಸರ್ವಿಸ್ ಕಮಿಷನ್ ಮಾಡುವ ಕೆಲಸವನ್ನು ತನಿಖೆಮಾಡಿ ತಾವು ಮಾಡುವ ಕಾನೂನಿನ ಉದ್ದೇಶ ಈಡೇರುವಂತೆ ನೋಡಿಕೊಳ್ಳಬೇಕು.

ಪಬ್ಲಿಕ್ ಸರ್ವಿಸ್ ಕಮಿಷನ್‌ರ ರಚನೆಯಲ್ಲಿ Schedule Castesಗೆ ತಕ್ಕ ಪ್ರಾತಿನಿಧ್ಯ ಕೊಡುವ ವಿಚಾರವನ್ನೂ ಗಣನೆಗೆ ತೆಗೆದುಕೊಂಡು ಆ ಕಮಿಷನ್‌ನಲ್ಲಿ ಪ್ರಾತಿನಿಧ್ಯ ಕೊಟ್ಟಿಲ್ಲ. ಆದರೂ ಈಗ ರಚಿತವಾಗಿರುವ ಕಮಿಷನ್‌ನ ಅವಧಿ ಮುಗಿಯುವುದರೊಳಗಾಗಿ ಈ ಕಮಿಷನ್ ಸೆಕ್ರೆಟರಿ ಹುದ್ದೆಗೆ ಸರಿಸಮಾನಾಗಿ ಮತ್ತೊಂದು Member Secretary ಹುದ್ದೆಯನ್ನು ಹೊಸದಾಗಿ ಕಲ್ಪಿಸಿ ಅದನ್ನಾದರೂ Schedule Castes ನವರಿಗೆ ಕೊಡುವುದರ ಮೂಲಕವಾದರೂ ಅವರ ಆಶೋತ್ತರಗಳನ್ನು ಈಡೇರಿಸುವುದು ಒಳ್ಳೆಯದು. ಸಂಸ್ಥಾನದಲ್ಲಿ 14 ಲಕ್ಷಕ್ಕೆ ಮೇಲ್ಪಟ್ಟ ಪ್ರಜಾಸಂಖ್ಯೆಯುಳ್ಳ ಈ Schedule Castes ಆಶೋತ್ತರಗಳನ್ನು ಕಾರ್ಯಗತ ಮಾಡಲು ಈ ಕಮಿಷನ್ ರಚನೆಯಲ್ಲಿ ಅವರಿಗೆ ಪ್ರಾತಿನಿಧ್ಯ ಕಲ್ಪಿಸಲು ಸರ್ಕಾರದವರು ಪ್ರಯತ್ನಪಟ್ಟಿಲ್ಲ. ಈ ವಿಚಾರವನ್ನು ಹಲವಾರು ಬಾರಿ ಸರ್ಕಾರದ ಗಮನಕ್ಕೆ ತರಲಾಗಿದೆ. ಈ ಪಬ್ಲಿಕ್ ಸರ್ವಿಸ್‌ಕಮಿಷನ್ ರಚನೆ Constitutionಗೆ ಸಂಬಂಧಪಟ್ಟ ವಿಚಾರ. ಈಗಿರುವ ಪಬ್ಲಿಕ್ ಸರ್ವಿಸ್ ಕಮಿಷನ್ ವಾಯಿದೆ ಮುಗಿಯುವುದರೊಳಗೆ, ಇದನ್ನು extend ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಾದರೆ, ಪಬ್ಲಿಕ್ ಸರ್ವಿಸ್ ಕಮಿಷನ್ ಸೆಕ್ರೆಟೆರಿ ಹುದ್ದೆಗೆ ಸರಿಸಮಾನಾಗಿ, Member Secretary ಎಂಬ ಮತ್ತೊಂದು ಹೊಸ ಹುದ್ದೆಯನ್ನು ಕಲ್ಪಿಸಿ, ಅದನ್ನಾದರೂ ಈ Schedule Castes ನವರಿಗೆ ಕೊಟ್ಟು ಇವರ ಆಶೋತ್ತರಗಳನ್ನು ಈಡೇರಿಸಿಕೊಡಬೇಕೆಂದು ಸೂಚಿಸುತ್ತೇನೆ. ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ Schedule Castesಗೆ ಪ್ರಾತಿನಿಧ್ಯವಿಲ್ಲವೆಂಬುದು ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿದೆ. ಆದರೂ ಇದನ್ನು ಪದೇ ಪದೇ ಒತ್ತಾಯ ಪಡಿಸುವುದರಿಂದ ಈ ಕೊರತೆಯನ್ನು ಹೋಗಲಾಡಿಸಲು ಇನ್ನು ಮುಂದಾದರೂ ಬಲವಾದ ಪ್ರಯತ್ನವನ್ನು ಸರ್ಕಾರದವರು ಪಡಲ ಎಂಬ ಉದ್ದೇಶದಿಂದ ಈ ರೀತಿ ಹೇಳುತ್ತಿದ್ದೇನೆ.

ಇದೇ ಸಂದರ್ಭದಲ್ಲಿ ಪ್ರಾಸಂಗಿಕವಾಗಿ ಇನ್ನೊಂದು ವಿಚಾರವನ್ನು ಹೇಳುತ್ತೇನೆ. ರೈಲ್ವೆ ಇಲಾಖೆಯ ಆಡಳಿತ ಈಗ ಸೆಂಟ್ರಲ್ ಗೌರ್ನಮೆಂಟ್ ಹತೋಟಿಗೆ ಒಳಪಟ್ಟಿದೆಯೆಂದು ನಮ್ಮ ಸರ್ಕಾರದವರು ಆ ಇಲಾಖೆಯಲ್ಲಿ ನೇಮಕವಾಗುವ ಅಧಿಕಾರಿಗಳ ಬಗ್ಗೆ ಏನೊಂದು ಕಾರ್ಯ ಚಟುವಟಿಕೆಯನ್ನೂ ನಮ್ಮ ಸರ್ಕಾರದವರು ಅನುಸರಿಸದೆ ಸುಮ್ಮನೆ ಕುಳಿತಿರುವುದರಿಂದ ಪೆನುಗೊಂಡೆಯ ಕಡೆಯವರು ನಮ್ಮ ಸಂಸ್ಥಾನದಲ್ಲಿರುವ ರೈಲ್ವೆ ಆಡಳಿತ ವಿಚಾರದಲ್ಲಿ ಕೈವಾಡ ನಡೆಸಲು ಅವಕಾಶವಾಗಿದೆ. ಆದುದರಿಂದ Schedule Castes ವಿಚಾರದಲ್ಲಿ Recruitment of railway administrative servicesನಲ್ಲಿ ಅವರಿಗೆ ಸರಿಯಾದ ಪ್ರಾತಿನಿಧ್ಯ ದೊರಕುವಂತೆ ಆ ಬಗ್ಗೆ ಈಗಿರತಕ್ಕ ಆರ್ಡಿನೆನ್ಸಸ್ ರೆಗ್ಯುಲೇಟ್ ಮಾಡಬೇಕಾಗಿದೆ. ಅಲ್ಲದೆ I. A. S. ವಿಚಾರದಲ್ಲಿಯೂ ಈಗ ಇಂಡಿಯಾ ಸರ್ಕಾರದವರು ಅನುಸರಿಸುವ ಕಾರ್ಯ ನೀತಿಯು ಬಹು ಚಾಕಚಕ್ಯತೆಯಿಂದ ಕೂಡಿದೆ. ಮುಂದೆಯಾದರೂ ಸರ್ಕಾರದವರು ಇದರಲ್ಲಿ Community representation ಎಂಬುದು ಏನಿದೆಯೋ ಅದನ್ನು ಕೊಡಲೇಬೇಕಾಗುತ್ತದೆ. ಆದರೆ ನನ್ನ ದೃಷ್ಟಿಯಲ್ಲಿ ಈ

(ಶ್ರೀ ಕೆ. ಪ್ರಭಾಕರ್.)

Backward Classesಗೆ ಬರಬೇಕಾದ ಪ್ರಾತಿನಿಧ್ಯ ದಿನೇ ದಿನೇ ಕಡಮೆಯಾಗುತ್ತಿದೆ. ಇದರ ಮುಂದಿನ ಆಗುಹೋಗುಗಳನ್ನು ಪರಿಶೀಲಿಸಿದುದೇ ಆದರೆ Backward Communities ತಲೆ ಎತ್ತುವ ಹಾಗೆಯೇ ಇರುವುದಿಲ್ಲ. ಆದಕಾರಣ ಇನ್ನು ಮುಂದೆ ಇವರಿಗೆ ಕೊಡತಕ್ಕ ಪ್ರಾತಿನಿಧ್ಯವನ್ನು population basis ಮೇಲೆ ನಿರ್ಧರಿಸುವುದು ಸೂಕ್ತವಾದುದೆಂದು ಒತ್ತಾಯ ಪೂರ್ವಕವಾಗಿ ಸಲಹೆ ಮಾಡುತ್ತೇನೆ.

Mr. SPEAKER.—Resolution moved:

"This Assembly is of the opinion that necessary rules in respect of reservation of posts or appointments on population basis to the candidates belonging to the Scheduled Castes and other Backward Classes which are not adequately represented in the gazetted and non-gazetted services of the State, be framed for guidance of the Public Service Commission in Mysore, keeping in view the relevant provisions of the Indian Constitution."

The Hon'ble Member Sri M. Madiah, if he so desires, may speak on this resolution because it is his resolution.

*ಶ್ರೀ ಎಂ. ಮಾದಯ್ಯ (ನಂಜನಗೂಡು-ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ನೂತನ ರಾಜ್ಯಾಂಗ ಜಾರಿಗೆ ಬಂದಮೇಲೆ ಶಾಸನ ಸಭೆಯಲ್ಲಿ ಪ್ರಜಾ ಪ್ರತಿನಿಧಿಗಳು ಪ್ರಜಾಪ್ರಭುತ್ವದ ಸಲ್ಲಕ್ಷಣ ಫಲಗಳನ್ನು ಅನುಭವಿಸುತ್ತಿದ್ದಾರೆ, ಅಲ್ಲದೆ ಹಾಗೆ ಅನುಭವಿಸುವುದಕ್ಕೆ ಯಾವ ಅಡ್ಡಿ ಆತಂಕವೂ ಇಲ್ಲವೆಂಬ ಭರವಸೆಯಿಂದ ಕೂಡಿದವನಾಗಿದ್ದೇನೆ. ಆದಕಾರಣ ಈ ಸಭೆಯ ಸದಸ್ಯರಾದ ನಾವುಗಳು ಯಾವುದಾದರೂ ವಿಚಾರ ಹೇಳಿದರೆ ಅದಕ್ಕೆ ಈ ಸಭೆಯ ಬಹುಮತದ ಮನ್ನಣೆಯು ದೊರೆಯುತ್ತದೆಂದು ನಂಬಿ ಒಂದೆರಡು ಅಂಶಗಳನ್ನು ಭಿನ್ನವಿಸುತ್ತೇನೆ.

ಪ್ರಜಾ ಪ್ರಗತಿಯ ವಿಚಾರದಲ್ಲಿ ನಮ್ಮ ಸರ್ಕಾರದ ನೀತಿ ಯಾವ ರೀತಿ ಇರಬೇಕೆಂಬ ವಿಚಾರವನ್ನು ಅನೇಕ ಬಾರಿ ಸ್ಪಷ್ಟವಾಗಿ ತಿಳಿಸಿರುತ್ತೇನೆ. ದೇಶದಲ್ಲಿರುವ ಸಮಸ್ತ ಪ್ರಜೆಗಳಿಗೂ ಸರಿಸಮಾನವಾದ ಅವಕಾಶವಿರಬೇಕು, ಆಗಲೇ ಬಹುಮತದ ಅಭಿಪ್ರಾಯಕ್ಕೆ ಸರ್ಕಾರ ಮನ್ನಣೆ ಕೊಟ್ಟಹಾಗಾಗುತ್ತದೆಯೆಂದು ನನ್ನ ಬಿನ್ನಹ. ಈ ಸರಿಸಮಾನತೆಯನ್ನು ಕಲ್ಪಿಸದಿದ್ದರೆ ಹಿಂದುಳಿದ ಪಂಗಡದವರಿಗೂ ಮುಂದುವರಿದಿರುವವರಿಗೂ ಅಜಗಜಾಂತರ ವ್ಯತ್ಯಾಸವಿದ್ದು, ಗಜಕ್ಕೂ ಅಜಕ್ಕೂ ಹೋಲಿಕೆಯನ್ನು ಕಲ್ಪಿಸಿದಹಾಗಾಗುತ್ತದೆ.

ಸ್ವಾಮಿ, ನಾವು ಇಂದು ಮೈಸೂರು ಸಂಸ್ಥಾನದಲ್ಲಿ ಒಂದು ಹೊಸ ವಾತಾವರಣದಲ್ಲಿದ್ದೇವೆ. ಈಗ ಯಾವುದೊಂದೂ ಸಹ ಪ್ರಜೆಗಳ ಪ್ರತಿನಿಧಿಗಳ ಅಭಿಪ್ರಾಯದಂತೆ ನಡೆಯಬೇಕು. ಹಾಗೆ ನಡೆಯದಿದ್ದರೆ ದೇಶದ ಹಿತಸಾಧನೆಯಾಗುವುದಿಲ್ಲ ಮತ್ತು ಪ್ರಜಾಪ್ರಭುತ್ವ ತತ್ವ ಪರಿಪಾಲಿಸಿದಂತಾಗುವುದಿಲ್ಲವೆಂದು ಹೇಳಬಯಸುತ್ತೇನೆ. ಈಗ ನಮ್ಮ ಮುಂದಿರಿತಕ್ಕಂಥ ವಿಚಾರದಲ್ಲಿ ನಾವೇನಾದರೂ ಕೇಳಿದರೆ ಸರ್ಕಾರದವರು ತಪ್ಪಾಗಿ ಭಾವಿಸಬಾರದು ಎಂದು ಮುಂಚಿತವಾಗಿಯೇ ಸ್ಪಷ್ಟಪಡಿಸುತ್ತೇನೆ. ರಾಜ್ಯಾಂಗದಲ್ಲಿ ನಿಮ್ನ ವರ್ಗದವರ ಹಿಂದುಳಿದವರ ಅಭಿವೃದ್ಧಿ ವಿಚಾರವಾಗಿ ಪ್ರಸ್ತಾಪಿಸಿದೆ. ಜನ ಸೇವೆಯೇ ಜನಾರ್ಧನ ಸೇವೆಯೆಂಬ ಧ್ಯೇಯವನ್ನು ನಾವು ಮನಸ್ಸಿನಲ್ಲಿಟ್ಟು ಕೊಂಡು ಹಿಂದುಳಿದಿರುವವರ ಪ್ರಗತಿಯಕಡೆ ನಾವಿಂದು ಮುಖ್ಯವಾಗಿ ಗಮನ ಕೊಡಬೇಕಾಗಿದೆ. ಈ ವಿಚಾರದಲ್ಲಿ ಕ್ರಾಂತಿಕಾರಕವಾದ ಬದಲಾವಣೆಯ ಮನೋಭಾವವನ್ನು ತಾಳಿದರೆ ಮಾತ್ರವೇ ಭಾರತವು ಇನ್ನು ಮುಂದೆಯೂ secular state ಆಗಿ ನಿಲ್ಲಲು ಸಾಧ್ಯವೇ ಹೊರತು ಇಲ್ಲದಿದ್ದರೆ ಖಂಡಿತವಾಗಿಯೂ ಸಾಧ್ಯವಿಲ್ಲವೆಂದು ನಾನು ಈಗಾಗಲೇ ಹಲವಾರು ಸಂದರ್ಭಗಳಲ್ಲಿ ತಿಳಿಸಿದ್ದೇನೆ.

ಅದನ್ನು ಮಾಡಬೇಕಾದದ್ದು ಅವರ ಆದ್ಯ ಕರ್ತವ್ಯವೆಂದು ನಾನು ಹೇಳುತ್ತೇನೆ. ಸರ್ಕಾರಿ ಗೆಜೆಟೆಡ್ ಮತ್ತು ನಾನ್‌ಗೆಜೆಟೆಡ್ ಹುದ್ದೆಗಳಲ್ಲಿ ಹಿಂದುಳಿದಿರತಕ್ಕ ಯಾವ ಯಾವ ಕೋಮುಗಳಿಗೆ ಸಾಕಾದಷ್ಟು ಪ್ರಾತಿನಿಧ್ಯವಿಲ್ಲವೋ ಆ ಕೋಮುಗಳಿಗೆ ಆಯಾ ಕೋಮುಗಳ ಪ್ರಜಾಸಂಖ್ಯೆಗನುಗುಣವಾಗಿ ಹುದ್ದೆಗಳನ್ನು ಮೀಸಲಾಗಿಡಬೇಕೆಂಬ ಅಂಶವನ್ನು ಪ್ರಸ್ತಾಪಿಸುವುದಕ್ಕಾಗಿ ಈ ನಿರ್ಣಯವನ್ನು ತಂದಿದ್ದೇನೆ. ಇದನ್ನು ಮಾಡುವಾಗ ಭಾರತ ರಾಜ್ಯಾಂಗದಲ್ಲಿರತಕ್ಕ ಆರ್ಟಿಕಲ್‌ಗಳನ್ನು ತಮ್ಮ ಮಾರ್ಗ ಸೂಚನೆಯನ್ನಾಗಿಟ್ಟು ಕೊಂಡು ಮಾಡಬೇಕೆಂದು ಹೇಳುತ್ತೇನೆ. ಹಾಗೆ ಮಾಡದೇ ಇದ್ದರೆ ಪವಿತ್ರವಾದ ಈ ಭಾರತದ ರಾಜ್ಯಾಂಗಕ್ಕೆ ತಾವು ನಿಜವಾಗಿಯೂ ಸಹ ಗೌರವ ಕೊಟ್ಟಂತೆ ಆಗುವುದಿಲ್ಲ. ಉದಾಹರಣೆಗೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಹನುಮಂತಯ್ಯನವರು ಮೈಸೂರಿನ ಬಾವುಟವನ್ನು ಕೆಳಗಿಳಿಸುವಾಗ ನಾವು ಇಡೀ ಭಾರತ ದೇಶವೇ ಒಂದಾಗಿರುವಾಗ, ಒಂದೇ ರಾಜ್ಯಾಡಳಿತದಲ್ಲಿ ಬೇರೆ ಬೇರೆ ಬಾವುಟಗಳಿರತಕ್ಕದ್ದು ಸರಿಯಲ್ಲ ಎಂದು ಹೇಳಿದ ಮರುಕ್ಷಣದಲ್ಲೇ ಒಂದು ನಿಮಿಷವೂ ತಡಮಾಡದೇ ಯಾವ ರೀತಿ ಅದನ್ನು ಪ್ರೊಸೀಜರ್ ಏನೇ ಇರಲಿ-ಕಾರ್ಯರೂಪಕ್ಕೆ ತಂದರೋ ಅದೇ ರೀತಿ ಭಾರತ ರಾಜ್ಯಾಂಗದಲ್ಲಿರತಕ್ಕ ಇದಕ್ಕೆ ಸಂಬಂಧಪಟ್ಟ ವಿಧಿಗಳನ್ನು ಅದಕ್ಕಿಂತ ಹೆಚ್ಚು ಗಮನ ಕೊಟ್ಟು ಕಾರ್ಯರೂಪಕ್ಕೆ ತರಬೇಕು ಎಂಬುದನ್ನು ಸ್ಪಷ್ಟಪಡಿಸುವುದಕ್ಕೆ ಈ ಸಭೆಯಲ್ಲಿ ಈ ನಿರ್ಣಯವನ್ನು ತಂದಿದ್ದೇನೆ.

ಸ್ವಾಮಿ, ಮೈಸೂರಿನಲ್ಲಾಗಲಿ ಅಥವಾ ಇತರ ದೇಶಗಳಲ್ಲಾಗಲಿ ಇರತಕ್ಕವರ ರಾಜಕೀಯವೆಲ್ಲಾ ಮುಖ್ಯವಾಗಿ ಸರ್ಕಾರಿ ನೌಕರಿಗಳಮೇಲೆ ಅವಲಂಬಿಸಿದೆ. ಅದನ್ನು ಅಧಿಕಾರ ಸೂತ್ರದಲ್ಲಿರತಕ್ಕವರು ಗಮನಿಸಬೇಕು. ಕಾರಣಾಂತರಗಳಿಂದ ಬಹಿರಂಗವಾಗಿ ಅನೇಕರು ಪ್ರಸ್ತಾಪಿಸದೇ ಇದ್ದರೂ ಸಹ ಅವರೆಲ್ಲರ ಮನಸ್ಸಿನಲ್ಲೂ ಒಂದು ವಿಚಾರ ತಾಂಡವವಾಡುತ್ತಿದೆ. ತಾಂಡವಾಡುತ್ತಿರುವುದು ಏನು ? ನ್ಯಾಯ, ಧರ್ಮ ದೊರೆಯಬೇಕು, ಹಿಂದುಳಿದವರು ಮುಂದುವರಿದು ಎಲ್ಲರಂತೆಯೇ ಸರಿಸಮಾನ ಅವಕಾಶ ಹೊಂದಬೇಕು ಎಂಬ ದೃಷ್ಟಿಯಿದೆಯೇ ಹೊರತು ಇನ್ಯಾವ ವಿಧವಾದ ಸ್ವಾರ್ಥದೃಷ್ಟಿಯೂ ಇಲ್ಲ ಎಂಬುದು ವ್ಯಕ್ತವಾಗುತ್ತದೆ. ಎಷ್ಟೇ ಚಿಕ್ಕ ಕೋಮುಗಳಾಗಲಿ ಅದಕ್ಕೆ ಖಂಡಿತವಾಗಿಯೂ ಏನು ಬೆಲೆ ಕೊಡಬೇಕೋ ಅದನ್ನು ಕೊಟ್ಟು ಸರ್ವವಿಧವಾದ ಬೆಂಬಲವನ್ನು ನೀಡಬೇಕಾಗಿದೆ. ಈ ರೀತಿ ಹಿಂದುಳಿದ ಕೋಮುಗಳ ಪ್ರಜಾಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯ ಕೊಡಬೇಕೆಂದು ಎಷ್ಟೋ

ವರ್ಷಗಳಿಂದ ಹೇಳುತ್ತಿದ್ದರೂ ಸಹ ಅದನ್ನು ಸರ್ಕಾರದವರು ಗಮನಿಸಿದ್ದಾರೆಯೇ? ಯಾವ ಸರ್ಕಾರ ಗಮನಿಸಿದೆ? ಉದಾಹರಣೆಗೆ, ಭಾರತ ಸರ್ಕಾರದವರು ನಿಮ್ಮ ತರಗತಿಯವರಿಗೆ ಶೇಕಡಾ ಇಷ್ಟು ಭಾಗ ರಿಸರ್ವೇಷನ್ ಮಾಡಬೇಕೆಂದು ಆರ್ಡರ್ ಮಾಡಿದ್ದಾರೆ. ಯಾವತ್ತಿನ ದಿವಸ ಈ ಆರ್ಡರ್ ಆಯಿತು; ಮೈಸೂರು ಸಂಸ್ಥಾನಕ್ಕೆ ಯಾವತ್ತಿನ ದಿವಸ ಬಂತು ಎಂಬುದನ್ನು ಸರ್ಕಾರದವರು ಗಮನಿಸಿದ್ದಾರೆಯೇ? ಮೊನ್ನೆತಾನೆ ನಾನು ಪೇಪರ್‌ನಲ್ಲಿ ಓದಿದೆ, ಈ ಇಷ್ಟು ಸರ್ಕಾರದವರು ತೆಗೆದುಕೊಂಡಿದ್ದಾರೆ ಎಂದು. ಸರ್ಕಾರದವರು ಇದುವರೆಗೂ ಕೈಕೊಂಡಿರತಕ್ಕ ಕಾರ್ಯಕ್ರಮಗಳಿಗಾಗಿ ನಾನು ವಂದಿಸುತ್ತೇನೆ. ಆದರೆ ಈ ವಿಚಾರದಲ್ಲಿ ತಾವು ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಬೇಕು. Be late than never ಅನ್ನುವ ಹಾಗೆ ಈಗಾಗಲೇ ಸ್ವಲ್ಪ ನಿಧಾನವಾಗಿದ್ದರೂ ಚಿಂತೆಯಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳಿದ್ದು ಯಾವ ಆರ್ಡರು?

ಶ್ರೀ ಎಂ. ಮಾದಯ್ಯ.—Government of Indiaದವರು 'percentage of reservation' ವಿಚಾರದಲ್ಲಿ ಮಾಡಿರುವ ಆರ್ಡರು. ಅದು ತಮಗೆ ಯಾವತ್ತು ಬಂತು? ಪಬ್ಲಿಕ್‌ಸರ್ವೀಸ್ ಕಮಿಷನರವರ ರೂಲ್ಸ್ ಈ ವರದಿಯಲ್ಲಿ ಮುದ್ರಿತವಾಗಿದೆ. ರೂಲ್ಸ್ ಫ್ರೇಂ ಮಾಡಿ 1951ನೇ ಜನವರಿ ತಿಂಗಳಿನಲ್ಲೇ ಸರ್ಕಾರದವರಿಗೆ ಕಳುಹಿಸಿದ್ದೇವೆ ಎಂದು ಹೇಳಿದ್ದಾರೆ. ಎಂದ ಮೇಲೆ ಅವೊತ್ತಿನ ದಿವಸ ರಾಜ್ಯಾಂಗ ಜಾರಿಯಲ್ಲಿರಲಿಲ್ಲವೇ? ರಾಜ್ಯಾಂಗ ಸಂವಿಧಾನ ತಮ್ಮ ಮುಂದಿರಲಿಲ್ಲವೇ? ಅದಕ್ಕೆ ತಾವು ಏನು ಬೆಲೆ ಕೊಟ್ಟಿರಿ? ಅಥವಾ ತಮ್ಮ ಮುಂದಿರತಕ್ಕ ಆರ್ಟಿಕಲ್‌ಗಳು ಅವರು ಹೇಳಿರುವಂತೆ ಮಾಡುವುದಕ್ಕೆ ಏನಾದರೂ ತಮ್ಮನ್ನು ಭಾಧಿಸುತ್ತಿವೆಯೋ? ಈ ರೀತಿ ಕೇಳುತ್ತಿದ್ದೇನೆಂದು ತಾವು ದಯವಿಟ್ಟು ತಪ್ಪಾಗಿ ತಿಳಿದುಕೊಳ್ಳಬೇಡಿರಿ. ಇರತಕ್ಕ ವಿಚಾರವನ್ನು ಸ್ಪಷ್ಟಪಡಿಸಿದ್ದೇನೆ. ನಾವು ಆಡತಕ್ಕ ಮಾತುಗಳಿಂದ ನಮ್ಮ feelings, ಹೃದಯ ಯಾವ ರೀತಿ ಇದೆ ಎಂಬುದನ್ನು ತಾವು ದಯವಿಟ್ಟು ಗಮನಿಸಿ. ಇದುವರೆಗೂ ತಾವು ನಮ್ಮ ಅಭಿಮತವನ್ನು ಗಮನಿಸಿದ್ದೇ ಆದಪಕ್ಷದಲ್ಲಿ 1950ನೇ ಇಸವಿಯಿಂದ ಭಾರತ ರಾಜ್ಯಾಂಗ ಜಾರಿಯಲ್ಲಿದ್ದರೂ ಸಹ 1953ನೆ ಇಸವಿಯವರೆಗೂ 3 ವರ್ಷಗಳ ಕಾಲ ಈ ವಿಚಾರದಲ್ಲಿ ಏಕೆ ತಡಮಾಡಿದಿರಿ; ಯಾವ ಉದ್ದೇಶದಿಂದ ತಡಮಾಡಿದ್ದೀರಿ ಎಂದು ಕೇಳುತ್ತೇನೆ. ಎಷ್ಟೆಷ್ಟು ಜನರನ್ನು ನೇಮಕಮಾಡಲಾಗಿದೆ. ಎಷ್ಟು ಪೋಸ್ಟ್‌ಗಳಿವೆ. ಅದರಲ್ಲಿ ನಿಮ್ಮ ತರಗತಿಯವರು ಎಷ್ಟು ಜನ ಇದ್ದಾರೆ, ಯಾರಿಗೆ ಸಾಕಾದಷ್ಟು ಪ್ರಾತಿನಿಧ್ಯ ಇಲ್ಲ ಎಂಬುದನ್ನು ತಾವು ತಿಳಿಸಿದ್ದೀರಾ? ಹಿಂದುಳಿದ ಪಂಗಡದವರಲ್ಲಿ ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಹುದ್ದೆಗಳಿಗೆ ಯಾವ ಯಾವ ಕೋಮಿನವರು ಎಷ್ಟೆಷ್ಟು ಜನ ಉಮೇದುವಾರರಿದ್ದಾರೆ? ಅವರಿಗೆ ಸಾಕಾದಷ್ಟು ಪ್ರಾತಿನಿಧ್ಯ ಕೊಟ್ಟಿದ್ದೀರಾ? ಈ ವಿಚಾರದಲ್ಲಿ ತಾವು ತಮ್ಮ ನಿರ್ದಿಷ್ಟವಾದ ನೀತಿಯನ್ನು ಏಕೆ ವ್ಯಕ್ತಪಡಿಸಲಿಲ್ಲ? ಇದು ಒಂದು ಗಮನಿಸಬೇಕಾದ ವಿಚಾರ. ನಾನು ರಚನಾತ್ಮಕವಾದ ಸಲಹೆಯನ್ನು ನೀಡುತ್ತೇನೆ. ಸರ್ಕಾರದವರು, ಇನ್ನಾದರೂ ಸಹ ನಮ್ಮ ಮಾತಿಗೆ ಗಮನ ಕೊಡಬೇಕೆಂದು ಮನಸ್ಸಿದ್ದರೆ–ಮನಸ್ಸಿದೆ ಎಂದು ಭಾವಿಸಿಕೊಳ್ಳೋಣ. ಯಾವ ಯಾವ ಕೋಮುಗಳಿಗೆ adequate representation ಇಲ್ಲ ಎಂಬುದನ್ನು ಪರಿಶೀಲನೆಮಾಡಿ ಗೊತ್ತಾದ ಅವಧಿಯಲ್ಲಿ ಅವರಿಗೆ ತಕ್ಕ ಪ್ರಾತಿನಿಧ್ಯ ಕೊಡಬೇಕು. 8 ವರ್ಷ 10 ವರ್ಷ ಎಂಬ ಒಂದು ಗೊತ್ತಾದ ಅವಧಿಯನ್ನಿಟ್ಟುಕೊಂಡು ಆ ಅವಧಿಯೊಳಗೆ ಈ ಕೋಮುಗಳನ್ನು ಒಂದು ಮಟ್ಟಕ್ಕೆ ತಂದುಬಿಡಿ. ಹಾಗೆ ಮಾಡದೇ ಇದ್ದ ಪಕ್ಷದಲ್ಲಿ let me sound a note of warning. ಇವೊತ್ತು ತಾವು ಯಾವ ಅಧಿಕಾರ ಸೂತ್ರ ವಹಿಸಿಕೊಂಡು ಕೆಲಸಮಾಡುತ್ತಿದ್ದೀರೋ ಇದೇನೂ ತಮ್ಮ ಜೊತೆಗೆ ಬರುವುದಿಲ್ಲ. ಆದ್ದರಿಂದ ತಾವು ಇವುಗಳನ್ನೆಲ್ಲಾ ಕೂಲಂಕಷವಾಗಿ ಗಮನಿಸಿ ಹಿಂದುಳಿದ ಪಂಗಡದವರಿಗೆ ಆಯಾ ಕೋಮಿನ ಪ್ರಜಾಸಂಖ್ಯೆಗನುಗುಣವಾಗಿ ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಹುದ್ದೆಗಳು ಸಲ್ಲುವಂತೆ ಏರ್ಪಾಡುಮಾಡಬೇಕೆಂದು ನಾನು ಸರ್ಕಾರದವರಲ್ಲಿ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

10-30 A.M.

ಗೆಜೆಟೆಡ್ ಹುದ್ದೆಗಳಿಗೆ ಸಂಬಂಧಪಟ್ಟಂತೆ ಇರತಕ್ಕ graphನ್ನು ತಾವು ಪರಿಶೀಲನೆಮಾಡುವುದಾದರೆ ಯಾವ ಯಾವ ಕೋಮಿಗೆ ಪ್ರಾತಿನಿಧ್ಯ ಯಾವ ಮಟ್ಟದಲ್ಲಿದೆಯೆಂಬುದು ಸುಲಭವಾಗಿ ವೇದ್ಯವಾಗುತ್ತದೆ. ತಾವೇನೂ ಇದನ್ನು ನೋಡಿಲ್ಲವೆಂದು ನಾನು ಭಾವಿಸುವುದಿಲ್ಲ. ಏಕೆಂದರೆ ಮೊನ್ನೆ ಇದೇ ವಿಚಾರವನ್ನು ಪ್ರಸ್ತಾಪಮಾಡಿದಾಗ ರೆವೆನ್ಯೂ ಮಂತ್ರಿಗಳಿಂದ ಬಂದ ಒಂದು ಮಾತನ್ನು ಕೇಳಿದೆ.—'ಸಾಕಷ್ಟು ಪ್ರಾತಿನಿಧ್ಯ ಈ ಕೋಮಿನವರಿಗೆ ಬಂದಿಲ್ಲವೆಂಬದು ಈಗಲಾದರೂ ಸರ್ಕಾರದವರ ಮನಸ್ಸಿಗೆ ಬಂತೇ' ಎಂದು ಶ್ರೀ ರಾಚಯ್ಯನವರು ಕೇಳಿದ ಒಂದು ಪ್ರಶ್ನೆಗೆ ಉತ್ತರವಾಗಿ ಅವರು ಸಾಕಾದಷ್ಟು ಪ್ರಾತಿನಿಧ್ಯ ಸಿಕ್ಕಿದೆಯೆಂದು ಹೇಳಿದರು.

Sri Kadidal MANJAPPA.—I am sorry; I did not say like that.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—"ಇದುವರೆಗೆ ಅನ್ಯಾಯವಾಗಿಲ್ಲ ಎಂದು ಹೇಳಿದಿರಲ್ಲಾ, ಇಲ್ಲಿ ಕೊಟ್ಟಿರುವ ಅಂಕಿಅಂಶಗಳನ್ನೆಲ್ಲಾ ನೋಡಿದ ಮೇಲಾದರೂ ಅನ್ಯಾಯವಾಗಿದೆಯೆಂಬುದನ್ನು ತಾವು ಒಪ್ಪುತ್ತೀರಾ" ಎಂದು ನಾನು ಕೇಳಿದ್ದಕ್ಕೆ ತಾವು 'ಇಲ್ಲ' ಎಂದು ಹೇಳಿದಿರಿ.

ಶ್ರೀ ಕಡಿದಾಳ್ ಮಂಜಪ್ಪ.—ಅಂದರೆ, ಅನ್ಯಾಯವಾಗಿಲ್ಲ ಎಂದು ಹೇಳಿದೆ, ನಿಜ.

ಶ್ರೀ ಎಂ. ಮಾದಯ್ಯ.—ಆಡಳಿತ ವಿಚಾರದಲ್ಲಿ ನಮ್ಮ ಮೈಸೂರು, ಹಿಂದೆ ಸಿವಿಲಿಯನ್ ಅಡ್ಮಿನಿಸ್ಟ್ರೇಷನ್ ಇದ್ದ ಕಾಲದಲ್ಲೇ ಅಂದರೆ ಜವಾಬ್ದಾರಿ ಸರ್ಕಾರ ಬರುವುದಕ್ಕೆ ಮುಂಚೆಯೇ, ಇತರ ಸಂಸ್ಥಾನಗಳಿಗೆಲ್ಲಾ ಮಾದರಿಯಾಗಿ ನಡೆದುಕೊಳ್ಳುತ್ತಿದ್ದು Model State ಎಂದು ಹೆಸರುವಾಸಿಯಾಗಿತ್ತು. ತಾವೂ ಕೂಡ ಆ ಹೆಸರನ್ನು ದಯವಿಟ್ಟು ಉಳಿಸಿಕೊಂಡು ಹೋಗಬೇಕೆಂದು ಮಾತ್ರ ನಾನು ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಹಿಂದೆ, ಅಂದಿನ ಸರ್ಕಾರ ಶಾಸನ ಸಭೆಗಳಿಗೆ ಜವಾಬ್ದಾರಿಯಾಗಿಲ್ಲದಿದ್ದರೂ ಬಹಳ ಮಟ್ಟಿಗೆ responsive ಆಗಿ ಕೆಲಸಮಾಡುತ್ತಿದ್ದುವೆಂದು ನಾನು ಖಂಡಿತವಾಗಿ ಹೇಳಬಲ್ಲೆ. True, those Governments were not responsible to the then legislatures; but they were certainly responsive. ಅದೇ ರೀತಿ ತಾವು ಈ ನಮ್ಮ ಹೇಳಿಕೆಗಳನ್ನೂ ನಮ್ಮ ಪ್ರಾರ್ಥನೆಗಳನ್ನೂ ಗಮನಿಸಿ ನಮ್ಮ ಕೋರಿಕೆಗಳನ್ನೂ ಈಡೇರಿಸಿಕೊಡುವುದು ತಮ್ಮ ಕರ್ತವ್ಯ. ಇದೇನೋ ಶ್ರೀಮನ್ಮಹಾ

(ಶ್ರೀ ಎಂ. ಮಾದಯ್ಯ.)

ರಾಜರು constitutional monarch ಎಂದು ಹೇಳಿ ಪ್ರಜಾಪ್ರಭುತ್ವಕ್ಕೆ ಕಟ್ಟುಬಿದ್ದು ಶಾಸನ ಸಭೆಗಳ ಅಭಿಪ್ರಾಯದಂತೆ ಹೋಗಬೇಕೆಂದಿದೆಯೆಂಬುದಾದರೂ ಹಿಂದೆಯೂ ನಮ್ಮ ಮಹಾರಾಜರವರ ವಿಷಯದಲ್ಲಿ ಅಂಥ ಯಾವ ಕೊರತೆಯೂ ಇರಲಿಲ್ಲ. ಬಹಳ ಹಿಂದಿನಿಂದಲೂ ಮೈಸೂರು ದೇಶದ ಆಡಳಿತ ಅರಸರು responsive ಆಗಿಯೇ ಇದ್ದರು. ಅವರು ಯಾರಿಗೂ ವ್ಯತಿರಿಕ್ತವಾಗಿ ಹೋಗುತ್ತಿರಲಿಲ್ಲ. ಇವೊತ್ತಿಗೂ ಅವರು ಹಾಗೆಯೇ ಇದ್ದಾರೆಂದು ನಾನು ನಂಬಿದ್ದೇನೆ. ಆದ್ದರಿಂದ ಸರ್ಕಾರದವರು ಈ ನಮ್ಮ ಆಶಯಗಳನ್ನು ಗಮನಕ್ಕೆ ತೆಗೆದುಕೊಂಡು ಯಾರಿಗೆ ಇವೊತ್ತಿನವರೆಗೂ ಸಾಕಾದಷ್ಟು ಪ್ರಾತಿನಿಧ್ಯ ದೊರಕಿಲ್ಲವೋ ಅವರನ್ನು ಮುಂದಕ್ಕೆ ತರಬೇಕಾದ್ದುದು ಅತ್ಯಾವಶ್ಯಕವೆಂಬ ಒಂದು ವಿಶಾಲ ನೀತಿಯನ್ನು ಹಾಕಿ ಎಲ್ಲರ ವಿಶ್ವಾಸಕ್ಕೂ ಪಾತ್ರರಾಗಬೇಕೆಂದು ಬಯಸಿ ನನ್ನ ಈ ಕೆಲವು ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—The House will now rise for lunch and meet again at 11-40 A.M.

The House rose for Lunch at Forty Minutes past Ten of the Clock and reassembled at Forty Minutes past Eleven of the Clock.

[MR. SPEAKER in the Chair.]

ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ—ಅನುಸೂಚಿತ ಜಾತಿಗಳು).—ಸ್ವಾಮಿ, ಮಾನ್ಯ ಶ್ರೀ ಮಾದಯ್ಯನವರು ತಂದಿರತಕ್ಕ ಈ ಠರಾವನ್ನು ಸಂಪೂರ್ಣವಾಗಿ ಸಮರ್ಥಿಸುತ್ತಾ ಒಂದೆರಡು ಅಂಕಿಅಂಶಗಳನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಅಂಕಿ ಅಂಶಗಳ ವಿಚಾರ ಏಕೆ ಎತ್ತಿ ಪ್ರಸ್ತಾಪಿಸುತ್ತೇನೆಂದರೆ, ಈ ನಿರ್ಣಯದಲ್ಲಿ "......in respect of reservation of posts or appointments on population basis to the candidates belonging to the Scheduled Castes and other Backward Classes which are not adequately represented in the gazetted and non-gazetted services " ಎಂದಿದೆ ; ಪಬ್ಲಿಕ್ ಸರ್ವಿಸ್ ಕಮಿಷನ್ ವರದಿಯ ಪ್ರಕಾರ ನಮ್ಮ ಸಂಸ್ಥಾನದಲ್ಲಿ ಇಲ್ಲಿಯವರೆಗೆ ಆಯಾ ಕೋಮುಗಳಿಗೆ ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಹುದ್ದೆಗಳಲ್ಲಿ ಕೋಮುವಾರು ಪ್ರಾತಿನಿಧ್ಯ ಎಷ್ಟಿದೆ ಎಂಬುದನ್ನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

These are the figures of various communities holding non-gazetted posts in the State as per the report of the Public Service Commission :—

	Percentage of population	Percentage of non-gazetted posts held in 1946-47	1951-52
Brahmins ..	4·05	37.5	30·8
Vokkaligars...	20·34		9·8
Lingayets ...	11·65		12·6
Kurubars ...	6·48		1·9
Bedars ...	4·59		1·0
Gangakulas ...	2·69		0·6
Yadavas ...	2·54		0.5
Khastriyas ...	1·54		2·1
Banajigas ...	2·34		2 3
Coming to Depressed Classes, the population is 19·14 and the posts held by them is ...			5·7
Muslims ...	6·29		10·6

I am coming to the gazetted posts and services in relation to the population of these various communities. I bring to your kind notice that the Brahmin community is, to say once again, 4·05 per cent of population and the gazetted ranks they held in 1946-47 is 46·89 and in 1951-52 39·4 per cent of posts.

	Percentage of population	Percentage of gazetted posts held in 1951-52	
Brahmins ...	4·05	46·89 (in 46-47)	39·4
Vokkaligars...	20·34		8·3
Lingayets ...	11.68		11·9
Kurubars ...	6·48		1·7
Bedars ...	4·59		0·3
Gangakulas ...	2·69		0·3
Yadavas ...	2·54		0·3

Coming to the Depressed Classes, the population is 19·14 per cent, whereas the gazetted ranks held by the candidates of this community is only 1·7 per cent.

ಈ ಅಂಕಿಅಂಶಗಳನ್ನು ನಾವು ಅವಲೋಕಿಸುವುದಾದರೆ ಈ ಠರಾವನ್ನು ನಮ್ಮ ಮಾನ್ಯ ಮಿತ್ರರು ತಂದಿರುವುದು ಬಹಳ ಸಮಯೋಚಿತವಾಗಿದೆ ; ಮತ್ತು ಸಾಧುವಾಗಿದೆ ಎನ್ನುವುದರಲ್ಲಿ ಅಭ್ಯಂತರವೇ ಇಲ್ಲ.

ಹಿಂದುಳಿದ ಪಂಗಡಗಳು ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಈ ಎಲ್ಲ ಪಂಗಡಗಳಿಗೂ ಅವರವರ ಜನಸಂಖ್ಯೆಗನುಗುಣವಾಗಿ ಸರ್ಕಾರಿ ಹುದ್ದೆಗಳಲ್ಲಿ, ಅದರಲ್ಲಿಯೂ ಗೆಜೆಟೆಡ್ ಹುದ್ದೆಗಳಲ್ಲಿ, ಸರಿಯಾದ ಪ್ರಾತಿನಿಧ್ಯವಿಲ್ಲ ಎನ್ನುವುದು ಈ ಅಂಕಿಅಂಶಗಳಿಂದ ವ್ಯಕ್ತವಾಗುತ್ತದೆ. ನಮ್ಮ ರಾಜ್ಯಾಂಗಕ್ಕೆ ಈ ಹಿಂದುಳಿದ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಕೋಮುಗಳಿಗೆ ಅವುಗಳ ಪ್ರಜಾಸಂಖ್ಯೆಗನುಗುಣವಾಗಿ ಸರ್ಕಾರಿ ನೌಕರಿಗಳಲ್ಲಿ ಪ್ರಾತಿನಿಧ್ಯ ದೊರಕುವಂತೆ ಮೀಸಲಾಗಿಡಬೇಕೆಂದು ಒಂದು ತಿದ್ದುಪಡಿಯನ್ನು ಕೂಡ ತಂದಿದ್ದಾರೆ. ಈ ಮಾನ್ಯ ಸಭೆಯ ಗಮನಕ್ಕೆ ಒಂದು ವಿಚಾರವನ್ನು ತರುವುದಾದರೆ, 1951ನೆಯ ಇಸವಿಯಲ್ಲಿ ಮದರಾಸಿನಲ್ಲಿ ನಡೆದ ಒಂದು ಪ್ರಸಂಗದಲ್ಲಿ ರಾಜ್ಯಾಂಗಕ್ಕೇ ಒಂದು ತಿದ್ದುಪಡಿ ತಂದು ಹಿಂದುಳಿದ ಪಂಗಡಗಳಿಗೆ ಸರಿಯಾದ ಪ್ರಾತಿನಿಧ್ಯ ದೊರೆಯಬೇಕೆಂಬುದನ್ನು ಅಂಗೀಕಾರ ಮಾಡಿದರು. ಇದನ್ನು ನೋಡಿದರೆ ನಮಗೂ ಇಂಥ ಒಂದು safeguard ಅತ್ಯಾವಶ್ಯಕವೆಂದು ಕಾಣುತ್ತದೆ. ಅಲ್ಲದೆ ಈಗ ಮೈಸೂರು ಸಂಸ್ಥಾನದಲ್ಲಿರತಕ್ಕ ಕೆಲವು ಗೆಜೆಟೆಡ್ ಹುದ್ದೆಗಳಿಗೆ ಕೇಂದ್ರ ಸರ್ಕಾರದವರು ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳನ್ನು ನೇಮಿಸುತ್ತಿದ್ದಾರೆ. ಈ ವಿಷಯವನ್ನೆಲ್ಲಾ ಅವಲೋಕಿಸಿ ನೋಡಿದರೆ, ನಮಗೆ ಇಂಥ ಒಂದು ರಕ್ಷಣೆ ಅತ್ಯಾವಶ್ಯಕವಾಗಿದೆ. ಸರ್ಕಾರದವರು ಇದನ್ನು ಸೂಕ್ತರೀತಿ ಪರಿಶೀಲಿಸಿ, ತಕ್ಷಣ ಕಾರ್ಯಕ್ರಮ ತೆಗೆದುಕೊಂಡು ನಮಗಿರುವ ತೊಂದರೆಯನ್ನು ನಿವಾರಿಸಬೇಕೆಂದು ಹೇಳುತ್ತೇನೆ. ನಮ್ಮ ಸರ್ಕಾರದವರು ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆ ಮಾತ್ರ ಸೇಕಡ 16⅔ ಸ್ಥಾನಗಳನ್ನು ಮೀಸಲಾಗಿಡಬೇಕೆಂದು ಹೇಳಿದ್ದಾರೆ. ಅದೂ in all direct appointments ಎಂದು ಹೇಳಿದ್ದಾರೆ. Is it only for non-gazetted posts or gazetted posts also ಎಂಬ ಪ್ರಶ್ನೆ ಬರುತ್ತದೆ. Whether it includes the I. A. S. and I. P. S. posts or other than those gazetted ranks ಎಂಬ ಪ್ರಶ್ನೆಯೂ ಬರುತ್ತದೆ. ನಮ್ಮ ಸಂಸ್ಥಾನದಲ್ಲಿ ಆ ಯೋಜನೆಯ ಪ್ರಕಾರ ಐ. ಎ. ಎಸ್. ಗೆ 45 ಸ್ಥಾನಗಳನ್ನು ಕೊಟ್ಟಿದ್ದಾರೆ. ಪರೀಕ್ಷೆಯ ಮೂಲಕ 37 ಸ್ಥಾನಗಳನ್ನು ಭರ್ತಿಮಾಡಬೇಕಾಗುತ್ತದೆ. ಪ್ರಮೋಷನ್‌ಗೆ ಉಳಿಯುವುದು ಎಂಟು ಮಾತ್ರ. ಅಸಿಸ್ಟೆಂಟ್ ಕಮಿಷನರ ಗ್ರೇಡಿನಲ್ಲಿ ಸುಮಾರು 120 ಜನರಿದ್ದಾರೆ. ಇವರಿಗೆಲ್ಲಾ ಐ. ಎ. ಎಸ್. ಸ್ಥಾನಗಳು ಇವರು ರಿಟೈರ್ ಆಗುವ ಕಾಲದಲ್ಲಿಯೂ ಸಿಕ್ಕುತ್ತದೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. 37 ಸ್ಥಾನಗಳನ್ನು direct recruitment ನಿಂದ ಭರ್ತಿಮಾಡಬೇಕು. They are open to all communities where we have no safeguard. ಇದನ್ನೆಲ್ಲಾ ನೋಡಿದರೆ ಬಹಳ ಎಚ್ಚರಿಕೆಯಿಂದ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಈ ರೀತಿ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು, it is not repugnant to the Constitution, because there are definite and clear provisions to safeguard the interests of the Backward Classes and Castes. ನಮಗೆ ಕೊಟ್ಟಿರುವ ಪಬ್ಲಿಕ್‌ಸರ್ವಿಸ್ ಕಮಿಷನ್ ವರದಿಯಲ್ಲಿ ಕೆಲವು ವಿಷಯಗಳಿವೆ. According to article 320 (3) of the Constitution, it is obligatory on the part of the Government to refer to the Public Service Commission. But the report says that during the year the Commission was not consulted as regards the suitability of officers for promotion from lower to higher posts as required in clause (*b*) of article 320(3) of the Constitution. Regarding the Backward Communities, there is provision in the Constitution that nothing prevents the State Governments from promoting their welfare. Clause (4) of 320 of the Constitution says : "Nothing in clause (3) shall require a Public Service Commission to be consulted as respects the manner in which any provisions referred to in clause (4) of article 16 may be made or as respects the manner in which effect may be given to the provisions of article 335." ಇನ್ನು ರಾಜ್ಯಾಂಗದ 335ನೆಯ ವಿಧಿಯಲ್ಲಿ ಏನಿದೆಯೆಂದರೆ :

Article 335 of the Constitution reads :

> "The Claims of the members of the Scheduled Castes and the Scheduled Tribes shall be taken into consideration, consistently with the maintenance of efficiency of administration, in the making of appointments to services and posts in connection with the affairs of the Union or of a State."

ಈ ರೀತಿ ಇರುವಾಗ ತಾವು ಪಬ್ಲಿಕ್‌ಸರ್ವಿಸ್ ಕಮಿಷನ್ ಕೇಳದೆ ಈ ಬ್ಯಾಕ್‌ವರ್ಡ್ ಕ್ಲಾಸಸ್, ಅದರಲ್ಲಿಯೂ ಷೆಡ್ಯೂಲ್ಡ್ ಕ್ಲಾಸಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಇವರ ಹಿತವನ್ನು ಕಾಪಾಡುವಂತೆ ಅವರ ಜನಸಂಖ್ಯೆಗನುಸಾರವಾಗಿ ಪ್ರಾತಿನಿಧ್ಯವನ್ನು ಐ. ಎ. ಎಸ್. ಮತ್ತು ಐ.ಪಿ.ಎಸ್ ನಲ್ಲಿ ಕೊಡಲು ಸರ್ಕಾರಕ್ಕೆ ಯಾವ ವಿಧವಾದ ನಿರ್ಬಂಧವೂ ಇಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಈಗ ಅವರು ಹೇಳಿದುದು ನನಗಂತೂ ಅರ್ಥವಾಗಲಿಲ್ಲ !

Mr. SPEAKER.—He refers to the Article of the Constitution.

ಶ್ರೀ ಜಿ. ದುಗ್ಗಪ್ಪ.—ಷೆಡ್ಯೂಲ್ಡ್ ಕ್ಯಾಸ್ಟ್ಸ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ವಿಚಾರದಲ್ಲಿ..........

ಶ್ರೀ ಎಂ. ಮಾದಯ್ಯ.—ಇಂಡಿಯನ್ ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ 320 (3) ಮತ್ತು (4)ರಲ್ಲಿ ಪಬ್ಲಿಕ್ ಸರ್ವೀಸ್ ಕಮಿಷನನ್ನು ಇಂಥಿಂಥ ವಿಚಾರಗಳಲ್ಲಿ ಕನ್‌ಸಲ್ಟ್ ಮಾಡಬೇಕು, ಇಂಥಿಂಥ ವಿಚಾರಗಳಲ್ಲಿ ಕನ್‌ಸಲ್ಟ್ ಮಾಡಬೇಕಾಗಿಲ್ಲ ಎಂಬ ವಿಷಯಗಳನ್ನೆಲ್ಲಾ ತಿಳಿಸಿದೆ. ಇಷ್ಟೇ ಅಲ್ಲದೆ ಈ ಡಿಪ್ರೆಸ್ಡ್ ಕ್ಲಾಸಿನವರನ್ನು ನೌಕರಿಗೆ ಸೇರಿಸಿಕೊಳ್ಳುವ ವಿಚಾರ ಮತ್ತು ಅವರ ಪ್ರಮೋಷನ್, ವರ್ಗಾವರ್ಗಿ ಇತ್ಯಾದಿ ವಿಚಾರ

(ಶ್ರೀ ಎಂ. ಮಾದಯ್ಯ.)

ಗಳನ್ನೂ ಸಹ ತಿಳಿಸಲಾಗಿದೆ. ಅದರೆ ಕ್ಲಾಜ್ (3) ರಲ್ಲಿ "The Public Service Commission shall be consulted" ಎಂದು ಹೇಳಿದ್ದಾಗ್ಯೂ ಆರ್ಟಿಕಲ್ 320 ಒಳಪ್ರಕರಣ (4) ರಲ್ಲಿ ತಿಳಿಸಿರುವ ಪ್ರಕಾರ "need not necessarily be consulted' ಎಂದರೆ 'Consult' ಮಾಡದಿದ್ದರೆ ಅದೊಂದು ತಪ್ಪಾಗುತ್ತದಿಲ್ಲ. ಆದುದರಿಂದ subject to Article 320 clause (3) and (4) and clause (4) of Article 16 and Article 335, ಇವುಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಈ ಜನಾಂಗಗಳಿಗೆ ಸರ್ಕಾರದವರು ಸಹಾಯ ನೀಡಬೇಕೆಂಬುದೇ ಶ್ರೀ ಜಿ. ದುಗ್ಗಪ್ಪನವರ ವಾದ.

Sri G. DUGGAPPA.—Now, Sir, I beg to bring to the notice of the Hon'ble Minister clause (4) of article 16. It states:

> "(4) Nothing in this article shall prevent the State from making any provision for the reservation of appointments or posts in favour of any backward class of citizens which, in the opinion of the State, is not adequately represented in the services under the State."

Sri M. MADIAH.—Backward Classes which are not adequately represented whether depressed or backward, that is what is said there.

Sri G. DUGGAPPA.—That the Backward Classes and Scheduled Classes and Scheduled Tribes are not adequately represented in the Gazetted Service or Non-Gazetted Service is evident from the report of the Public Service Commission. Now it is also clear that nothing prevents a State Government to make adequate provision and also nothing prevents the Government to make reservation for this purpose. I therefore request the Government, Sir, to make provisions for adequate representation of the most inadequate and unrepresented classes in the posts of I. A. S. and I. P. S. and in the Gazetted and Non-Gazetted ranks of the State as also in other posts. ಇಷ್ಟು ಹೇಳಿ ಮಾನ್ಯ ಸದಸ್ಯರು ತಂದಿರತಕ್ಕಂಥ ಠರಾವನ್ನು ಸಂತೋಷದಿಂದ ಸಂಪೂರ್ಣವಾಗಿ ನಾನು ಅನುಮೋದಿಸುತ್ತೇನೆ.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಈಗ ಶ್ರೀ ಎಂ. ಮಾದಯ್ಯನವರು ತಂದಿರತಕ್ಕ ಈ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ಈ ನಿರ್ಣಯದಲ್ಲಿ ಅಡಕವಾಗಿರುವ ಮುಖ್ಯ ವಿಚಾರಗಳು ಎರಡು ಮಾತ್ರ ಇವೆ. ಅವುಗಳು ಯಾವುವೆಂದರೆ ಷೆಡ್ಯೂಲ್ಡ್ ಕ್ಲಾಸಿನವರಿಗೂ ಮತ್ತು ಬ್ಯಾಕ್ ವರ್ಡ್ ಕ್ಲಾಸಿನವರಿಗೂ ಸರ್ಕಾರಿ ನೌಕರಿಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವಿರಬೇಕು, ಮತ್ತು ಆ ಪ್ರಾತಿನಿಧ್ಯವು ಆಯಾ ಕೋಮಿನ ಪ್ರಜಾಸಂಖ್ಯೆಗೆ ಅನುಗುಣವಾಗಿ ಇರಬೇಕು ಎಂಬುವುಗಳೇ ಆಗಿರುತ್ತವೆ. ಆದರೆ ನಿನ್ನೆತಾನೆ ಸರ್ಕಾರದವರು ಈ ಷೆಡ್ಯೂಲ್ಡ್ ಕ್ಲಾಸಿನವರ ವಿಚಾರದಲ್ಲಿ ಒಂದು ಸರ್ಕಾರಿ ಹುಕುಮನ್ನು ಸಾದರು ಮಾಡಿದ್ದೇವೆ ಎಂದು ಹೇಳಿರುತ್ತಾರೆ. ಆದರೆ ನಾನು ಇನ್ನೂ ಆ ಹುಕುಮನ್ನು ನೋಡಿಲ್ಲ. ಆ ಆಜ್ಞೆಯನ್ನು ನಾನಿನ್ನೂ ಪರಿಶೀಲನೆ ಮಾಡಬೇಕಾಗಿದೆ, ಮುಖ್ಯವಾಗಿ ಈ ರೀತಿಯಾಗಿ ಸರ್ಕಾರಿ ನೌಕರಿಗಳಲ್ಲಿ ದೇಶದಲ್ಲಿರತಕ್ಕ ಪ್ರತಿಯೊಂದು ಕೋಮಿನವರಿಗೂ ಮತ್ತು ಜನಾಂಗದವರಿಗೂ ಅವರವರ ಪ್ರಜಾಸಂಖ್ಯೆಗನುಗುಣವಾಗಿ ಅವರೆಲ್ಲರಿಗೂ ಪ್ರಾತಿನಿಧ್ಯವಿರಬೇಕು ಎಂಬುದಾಗಿ ಕೇಳುತ್ತಿರುವುದು ಒಂದು ಹೊಸವಿಚಾರವೇನೂ ಅಲ್ಲ. ಆಗಿನ ಸರ್ಕಾರ ಹಿಂದೆ 1921ನೆಯ ಇಸವಿಯಲ್ಲೇ ಈ ವಿಚಾರವಾಗಿ ಸ್ಥೂಲವಾಗಿಯೂ ಮತ್ತು ಸೂಕ್ಷ್ಮವಾಗಿಯೂ ಪರಿಶೀಲನೆ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸುವ ಸಲುವಾಗಿ 'ಮಿ॥ ಮಿಲ್ಲರ್ ಸಮಿತಿ' ಎಂಬ ಒಂದು ಸಮಿತಿ ನೇಮಕ ಮಾಡಿ ಆ ಸಮಿತಿಯು ಈ ವಿಚಾರವಾಗಿ ಸರ್ಕಾರಕ್ಕೆ ಒಪ್ಪಿಸಿದಂಥ ಶಿಫಾರ್ಸುಗಳ ಮೇಲೆ ಆಗಿನ ಸರ್ಕಾರದವರು 1919ರಲ್ಲಿ ಆ ಅಂಶಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ ತದನಂತರ 1921ರಲ್ಲಿ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದರು. ಆ ಹುಕುಮಿನ ಪ್ರಕಾರ ಆಗ ದೇಶದಲ್ಲಿದ್ದ ಜನಾಂಗಗಳನ್ನೆಲ್ಲಾ 18 ಕೋಮುಗಳಾಗಿ ವಿಭಾಗಮಾಡಿ, ಅವರುಗಳಿಗೆ ಸರ್ಕಾರಿ ನೌಕರಿಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ದೊರೆಕಿಸಿಕೊಡುವ ಸಲುವಾಗಿ ಅವರವರ ಪ್ರಜಾಸಂಖ್ಯೆಗನುಗುಣವಾಗಿ ಅವರಿಗೆ ಅನುಕೂಲವಾಗುವಂತೆ ಮಾಡಲು ಹಿಂದುಳಿದ ಕೋಮುಗಳವರು ಮತ್ತು ಮುಂದುವರದ ಕೋಮಿನವರು ಎಂಬುದಾಗಿ ಎರಡು ಭಾಗಮಾಡಿ, ಆ ರೀತಿ ಅದನ್ನು ಆಚರಣೆಯಲ್ಲಿ ತರುವುದಕ್ಕಾಗಿ 'ಸೆಂಟ್ರಲ್ ರೆಕ್ರೂಟ್‌ಮೆಂಟ್ ಬೋರ್ಡು' ಎಂಬ ಒಂದು ಬೋರ್ಡನ್ನು ನೇಮಕಮಾಡಿ, ಆ ಬಗ್ಗೆ ಕೆಲವು ನಿಯಮಗಳನ್ನೂ ಸಹ ಮಾಡಿದರು. ಆ ನಿಯಮಗಳನ್ನೇ ಈ ಹೊತ್ತಿನವರೆಗೂ ಸಹ ಈಗಿರುವ P. S. C. ಸಹ ಬಳಸಿಕೊಂಡು ಬರುತ್ತಿರುವುದಾಗಿ ಇಂದು ನಮ್ಮೆಲ್ಲರಿಗೂ ಹಂಚಿರತಕ್ಕ P. S. C. ರಿಪೋರ್ಟಿನಲ್ಲಿ ಕೂಡ ಆ ಅಂಶವು ಉಲ್ಲೇಖಿಸಲ್ಪಟ್ಟಿದೆ.

ಆದರೆ ಇತ್ತೀಚೆಗೆ ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸರ್ವರಿಗೂ ಒಂದು ಸಮಾನಾವಕಾಶವಿರಬೇಕೆಂದು ಹೇಳಿರತಕ್ಕದ್ದು ನ್ಯಾಯವಾಗಿದೆ ಮತ್ತು ಹಾಗೆ ಉಂಟುಮಾಡಿ ಕೊಡತಕ್ಕದ್ದು ಅತ್ಯಾವಶ್ಯಕ. ಸಾಮಾನ್ಯವಾಗಿ ಎಲ್ಲರಿಗೂ ಒಂದು ಸಮಾನಾವಕಾಶ ದೊರೆತಮೇಲೆ ಆಗ ಯಾರಲ್ಲೂ ಈ ಕೋಮುವಾರು ಭಾವನೆಗಳು ಬರಲು ಅವಕಾಶವಿರುವುದಿಲ್ಲ. ಆದರೆ ಹಾಗೆ ಮಾಡುವ ದಾರಿಯಲ್ಲಿ ಈಗ ವಿದ್ಯಾಭ್ಯಾಸಕ್ಕೆ ಸರಿಯಾಗಿ ಎಲ್ಲರಿಗೂ ಸರ್ಕಾರದವರು ಸಮನಾದ ಸೌಕರ್ಯಗಳನ್ನು ಒದಗಿಸಿ ಕೊಟ್ಟಿರುವುದಿಲ್ಲ. ಕೇವಲ ಪಟ್ಟಣದಲ್ಲಿರತಕ್ಕವರಿಗೆ ಮಾತ್ರ ಈಗ ಎಲ್ಲ ವಿದ್ಯಾಭ್ಯಾಸದ ಸೌಕರ್ಯಗಳು ದೊರೆಯುತ್ತಿವೆ. ಈಗ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡುತ್ತಿರುವ 4 ಕೋಟಿ ರೂಪಾಯಿಗಳೆಲ್ಲವೂ ಕೇವಲ ಮುಂದುವರಿದಿರುವ ಜನಾಂಗದವರಿಗಾಗಿ ಆಗುತ್ತಿರುವಂಥ ಖರ್ಚಾಗಿದೆ. ಇದು ದೇಶದಲ್ಲಿರತಕ್ಕ ಪ್ರತಿಯೊಬ್ಬರಿಗೂ ಸರಿಯಾಗಿ ವಿನಿಯೋಗವಾಗುತ್ತಿದ್ದರೆ

ಹೀಗೆ ಯಾರೂ ಕೇಳುತ್ತಿರಲಿಲ್ಲ. ಆಶಿಕ್ಷಣಸಮಿತಿಯವರೂ ಸಹ ಈಗ ಸಭೆಯಮುಂದೆ ಇದೇ ಅಭಿಪ್ರಾಯವನ್ನಿಟ್ಟಿದ್ದಾರೆ. ಆದರೆ ಇದನ್ನು ಯಾರೂ ಒಂದು ಕೋಮುವಾರು ಭಾವನೆಯೆಂಬುದಾಗಿ ಭಾವಿಸುವುದು ಸರಿಯಲ್ಲ. ಯಾರು ಹೆಚ್ಚಿಗೆ ಎಂದರೆ ನ್ಯಾಯವಾಗಿ ಅವರಿಗೆ ಎಂದರೆ ನ್ಯಾಯವಾಗಿ ಅವರಿಗೆ ಎಷ್ಟು ದೊರೆಯಬೇಕಾಗಿತ್ತೋ ಅಷ್ಟಕ್ಕಿಂತಲೂ ಹೆಚ್ಚಿನ ಸೌಕರ್ಯಗಳನ್ನು ಅನುಭವಸುತ್ತಿದ್ದಾರೋ ಅವರೇ ಈಗ ಇದನ್ನು ಕೋಮುವಾರು ಭಾವನೆಯೆಂಬುದಾಗಿ ಹೇಳುತ್ತಿದ್ದಾರೆಯೇ ವಿನಾ ಬಾಕಿ ಯಾರೂ ಹಾಗೆ ಹೇಳುತ್ತಿಲ್ಲ. ಆದುದರಿಂದ ನಾನು ಈ ನಿರ್ಣಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಈಗಾಗಲೇ ಶ್ರೀಮಾನ್ ಜಿ. ದುಗ್ಗಪ್ಪನವರು ಆರ್ಟಿಕಲ್ 16ರಲ್ಲಿ ಏನು ಹೇಳಿರುತ್ತದೆಯೆಂಬ ವಿಚಾರ ತಿಳಿಸಿರುತ್ತಾರೆ. ಆ ಆರ್ಟಿಕಲ್‌ನಲ್ಲಿ ಹೇಳಿರುವುದು :

> Article 16 clause (4): " Nothing in this article shall prevent the State from making any provision for the reservation of appointments or posts in favour of any backward class of citizens which, in the opinion of the State, is not adequately represented in the services under the State."

ಹೀಗೆ ಹೇಳಿರುತ್ತದೆ. ಆದುದರಿಂದ ನಾವೂ ಕೂಡ ಈಗ ಹೇಳತಕ್ಕಂಥಾದ್ದು ಇಲ್ಲಿಯವರೆಗೂ ಯಾವಯಾವ ಕೋಮಿನವರುಗಳಿಗೆ ಪ್ರಾತಿನಿಧ್ಯವಿಲ್ಲವೆಂಬುದನ್ನೂ ಮತ್ತು ಯಾವ ಯಾವ ಕೋಮುಗಳು under represented ಮತ್ತು unrepresented ಆಗಿವೆ ಎಂಬುದನ್ನೂ ಮತ್ತು ಯಾವ ಕೋಮು over-represented ಆಗಿದೆ ಎಂಬುದನ್ನೂ ಮತ್ತು ಎಲ್ಲಾ ಕೋಮುಗಳ ಹಿತದೃಷ್ಟಿಯನ್ನು ಕೈಬಿಟ್ಟು ಯಾವ ಕೋಮು ದೇಶದ ಆಡಳಿತ ನಡೆಸುತ್ತಿದೆ ಎಂಬುದು ಅಂಕಿ ಅಂಶಗಳನ್ನು ನೋಡಿದರೆ ಗೊತ್ತಾಗುತ್ತದೆ—ಎಂದು. ಆದರೆ ನಾನೀಗ ಈ ವಿಚಾರವಾಗಿ ಅಷ್ಟು ದೀರ್ಘಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ, ಹಿಂದಿಗಿಂತಲೂ ಈಗ ಕೊಂಚ ಕೊಂಚ ಅನುಕೂಲವಾಗುತ್ತಿದೆಯೆನ್ನಬಹುದು. ಶ್ರೀ ಕೆ. ಪ್ರಭಾಕರ್‌ಅವರು ಮಾತನಾಡುತ್ತಿರುವಾಗ ಒಂದು ವಿಚಾರ ಹೇಳಿದರು. ಆದರೆ ನಾನು ಅದನ್ನು ಒಪ್ಪುವುದಿಲ್ಲ. ಅವರು ಹೇಳಿದುದೇನೆಂದರೆ—'' ಹಿಂದುಳಿದಿದ್ದ ಕೋಮುಗಳ ಪೈಕಿ ಲಂಗಾಯಿತರೂ ಮತ್ತು ಒಕ್ಕಲಿಗರೂ ಈಗ ಮುಂದುವರಿಯುತ್ತಾ, ಅವರು ಬಾಕಿಯವರನ್ನು ಕೈಬಿಟ್ಟಿದ್ದಾರೆ '' ಎಂದು. ಈ ಪ್ರಶ್ನೆಗಾಗಲೇ ಶ್ರೀಮಾನ್ ದುಗ್ಗಪ್ಪನವರು ಜವಾಬ್ ಕೊಟ್ಟಿದ್ದಾರೆ.

ಶ್ರೀ ಕೆ. ಪ್ರಭಾಕರ್.—ನಾನು ಹೇಳಿದುದು ಹಾಗಲ್ಲ. ನಾನು ಹೇಳಿದ್ದು '' ಲಂಗಾಯಿತರೂ ಮತ್ತು ಒಕ್ಕಲಿಗರೂ ಅವರವರ ಜನಸಂಖ್ಯೆಗನುಗುಣವಾಗಿ ವಿದ್ಯಾಸೌಲಭ್ಯಗಳನ್ನೂ ಮತ್ತು ಸರ್ಕಾರಿ ನೌಕರಿಗಳನ್ನೂ ಇತ್ತೀಚೆಗೆ ಪಡೆಯುತ್ತಾ ಅವರು ಅಭಿವೃದ್ಧಿಗೆ ಬರುತ್ತಿದ್ದಾರೆ. ಆ ರೀತಿಯಾಗಿ ಅವರು ಅವರ ಕೋಟ ತೆಗೆದುಕೊಳ್ಳಬೇಕಾದುಧು ನ್ಯಾಯ ಮತ್ತು ಸಹಜವಾಗಿಯೇ ಇರುತ್ತದೆ. ಆದರೆ ಈಗ ಆ ಕೋಮುಗಳವರು ಹೇಗೆ ಈ ಅನುಕೂಲತೆಗಳನ್ನು ಪಡೆಯುತ್ತಿದ್ದಾರೋ ಅದೇ ರೀತಿಯಾಗಿ ಇತರರೂ ಸಹ ಅರ್ಗನೈಜಾಗಲಿ, ಯಾರಿಗೆ ಸಂಖ್ಯಾಬಲವಿಲ್ಲವೋ ಅಂಥವರಿಗೂ ಕೂಡ, ಅವರ ಪ್ರಾರ್ಥನೆಗೆ ಗೌರವಕೊಟ್ಟು, ಅವರ ಕೋಟಾವನ್ನೂ ಅವರಿಗೆ ದೊರೆಯುವಂತೆ ಮಾಡುವುದರ ಬಗ್ಗೆ ಯಾರೂ ಒಂದು ಆಸಕ್ತಿಯನ್ನು ತೋರಿಸುತ್ತಿಲ್ಲ, ನಿಗಾ ಕೊಡುತ್ತಿಲ್ಲ '' ಎಂಬುದಾಗಿ ನಾನು ಹೇಳಿದೆನೇ ಹೊರತು ಲಂಗಾಯಿತರಿಗೂ ಮತ್ತು ಒಕ್ಕಲಿಗರಿಗೂ ದೊರೆತಿರತಕ್ಕ ಪ್ರಾತಿನಿಧ್ಯ ಸಾಕು ಎಂಬುದಾಗಿ ನಾನು ಹೇಳಿರುವುದಿಲ್ಲ ಮತ್ತು ಅವರಿಗೆ ನ್ಯಾಯವಾಗಿ ಸಲ್ಲಬೇಕಾಗಿರುವಂಥ ಹಕ್ಕು ಬಾಧ್ಯತೆಗಳನ್ನು ಅವರು ಬಿಟ್ಟುಕೊಡಬೇಕೆಂತಲೇನೂ ನಾನು ಹೇಳಲಿಲ್ಲ. ಆದರೆ ನಾನು ಹೇಳಿರತಕ್ಕದ್ದಾದರೂ ಏನೆಂದರೆ '' ಈಗ ಹೇಗೆ ಈ ಎರಡು ಕೋಮುಗಳವರೂ ಮುಂದುವರಿಯುತ್ತಿದ್ದಾರೋ ಆ ರೀತಿಯಾಗಿ ಇತರ ಹಿಂದುಳಿದ ಕೋಮುಗಳವರು ಮುಂದುವರಿಯಲು ಅನುಕೂಲವಾಗತಕ್ಕ ರೀತಿಯಲ್ಲಿ ಅವರಿಗೆ ನ್ಯಾಯವಾಗಿ ಸಲ್ಲತಕ್ಕ ಕೋಟಾವನ್ನು ಅವರುಗಳಿಗೆ ಒದಗಿಸುವಂತೆ ಮಾಡುವುದರ ಬಗ್ಗೆ ಎಲ್ಲರೂ ಆಸಕ್ತಿ ವಹಿಸಬೇಕು '' ಎಂದು ಮಾತ್ರ ಹೇಳಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಹಾಗೆ ಆಸಕ್ತಿ ವಹಿಸುವುದರ ಬಗ್ಗೆ ಹಿಂದೆ ಬಿದ್ದಿದ್ದೇವೆಂದು ಹೇಳಿದ್ದನ್ನು ನಾನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಹೇಳುವುದಾದರೂ ಇಷ್ಟೇ—ಕೇವಲ ಹಿಂದುಳಿದಿರತಕ್ಕ ಕೋಮುಗಳ ಪೈಕಿ ಲಂಗಾಯಿತ ಕೋಮು ಅಥವಾ ಒಕ್ಕಲಿಗರ ಕೋಮೊಂದು ಮಾತ್ರ ಮುಂದುವರಿದು ಇತರ ಹಿಂದೆ ಬಿದ್ದಿರುವ ಕೋಮುಗಳು ಮುಂದುವರಿಯಬೇಕಾಗಿಲ್ಲವೆಂದೇನೂ ಹೇಳುತ್ತಿಲ್ಲ. ಹಿಂದುಳಿದಿರತಕ್ಕ ಎಲ್ಲ ಕೋಮುಗಳವರೂ ಮುಂದಕ್ಕೆ ಬರಬೇಕೆಂಬುದೇ ನನ್ನ ಉದ್ದೇಶ. ಅವರ ಹಿತಕ್ಕೆ ವಿರೋಧವಾಗಿ ನಾವು ಮುಂದುವರಿಯೋಣ ಎಂಬುದು ನನ್ನ ಉದ್ದೇಶವಲ್ಲ. ಯಾವಾಗಲೇ ಆಗಲಿ ಈ ಡಿಪ್ರೆಸ್ಡ್ ಕ್ಲಾಸಿನವರ ನೌಕರಿ ವಿಚಾರ ಬಂದಾಗಲೆಲ್ಲಾ ಮತ್ತು ಮೊನ್ನೆ ಕೂಡ ಇವರಿಗೆ $16\frac{3}{4}$ ಭಾಗ ಇಡಬೇಕಾದ್ದು ಸರಿಯೇ, ಅಲ್ಲವೇ ಎಂಬ ವಿಚಾರ ಚರ್ಚೆಗೆ ಬಂದಿದ್ದಾಗ, ನಾನು ಇವರಿಗೆ $16\frac{3}{4}$ ಭಾಗ ಇಡಬೇಕಾದದ್ದು ನ್ಯಾಯವಾಗಿದೆಯೆಂದು ಅದಕ್ಕೆ ಬೆಂಬಲ ನೀಡಿದ್ದೇನೆ. ಈಗ ನಮ್ಮ ಕೈಲಿರತಕ್ಕ ಲೆಕ್ಕದ ಪ್ರಕಾರ ನೋಡಿ ಹೇಳುವುದಾದರೆ, ಲಂಗಾಯಿತರ ಕೋಮಿನವರಿಗೆ ನಾನ್ ಗೆಜೆಟೆಡ್ಡಿನಲ್ಲಿ 12·6% ನೌಕರಿಗಳೂ ಮತ್ತು ಗೆಜೆಟೆಡ್ಡಿನಲ್ಲಿ 11·9% ನೌಕರಿಗಳೂ ಮಾತ್ರ ದೊರೆತಿವೆ. ಅವರ ಜನಸಂಖ್ಯೆ 11·65 ಇದೆ. ಒಕ್ಕಲಿಗರ ಕೋಮಿನವರಿಗೆ ನಾನ್‌ಗೆಜೆಟೆಡ್ ನೌಕರಿಯಲ್ಲಿ 9 8% ಮತ್ತು ಗೆಜೆಟೆಡ್ ನೌಕರಿಗಳಲ್ಲಿ 8·3% ದೊರೆತಿದೆ. ಅವರ ಜನಸಂಖ್ಯೆ 20·34% ಇರುತ್ತದೆ. ಈ ಎರಡು ಕೋಮುಗಳವರಾದರೂ ಕೇವಲ ಇತ್ತೀಚೆಗೆ ಮುಂದುವರಿದು ಬರುತ್ತಿದ್ದಾರೆ. ಆದರೆ ಈಗ ಈ ಅಂಕಿ ಅಂಶಗಳನ್ನೆಲ್ಲಾ ಒದಗಿಸಿರುವ P. S. C. ಅವರ ಲೆಕ್ಕಾಚಾರದ ಪ್ರಕಾರ, ಇದು ಸ್ಥಾಪನೆಯಾದ ಇತ್ತೀಚೆಗೆ ಆರುವರ್ಷಗಳ ಅವಧಿಯಲ್ಲಿ 8·3 per cent ಇದ್ದುದ್ದು ಈಗ 1·6 per cent ಜಾಸ್ತಿಯಾಗಿದೆ. ಅಂದಮೇಲೆ ಇದೇ ದಾಮಾಷಾದಲ್ಲಿ ಒಕ್ಕಲಿಗರು 12 per cent ನೌಕರಿಗಳನ್ನು ಪಡೆಯಬೇಕಾಗಿದ್ದರೆ P.S.C. ಅವರ ಲೆಕ್ಕಾಚಾರದ ಪ್ರಕಾರ ಕನಿಷ್ಠ ಪಕ್ಷ 50 ವರ್ಷಗಳಾದರೂ ಬೇಕಾಗುತ್ತದೆ. ಹಾಗೊಂದುವೇಳೆ ಇದು ಮುಂದುವರಿಯುವುದಾದರೂ ಅದು ಎಷ್ಟರಮಟ್ಟಿಗೆ ಸಾಧ್ಯವೋ ನಾನಂತೂ ನಂಬಲಾರೆ. ಈ ಎಲ್ಲ ಕಾರಣಗಳಿಂದಲೂ ನಾನು ಈ ನಿರ್ಣಯವನ್ನು ಅನುಮೋದಿಸುತ್ತೇನೆ.

(ಶ್ರೀ ಬಿ. ಹುಚ್ಚೇಗೌಡ.)

12 NOON.

"Reservation of posts or appointments on population basis" ಎಂದು ಈ ನಿರ್ಣಯದಲ್ಲಿ ಹೇಳಿದೆ. ಇನ್ನು ಮುಂದಾದರೂ ಜನಸಂಖ್ಯೆಯ ಆಧಾರದಮೇಲೆ ಮೀಸಲಾಗಿಡುತ್ತಾ ಹೋದರೆ 25 ವರ್ಷಗಳಿಗಾದರೂ ಉದ್ದೇಶ ನೆರವೇರಬಹುದು. ಕೆಲವರು ನಿವೃತ್ತರಾದರೆ ಆ ಸ್ಥಾನಗಳಿಗೆ ನೇಮಿಸಲು ಅವಕಾಶವಾಗಬಹುದು. 50 ವರ್ಷಗಳಲ್ಲಾಗುತ್ತಿದ್ದ ಕೆಲಸ 25 ವರ್ಷಗಳಲ್ಲಾದರೂ ಆಗಿ ಪ್ರಾತಿನಿಧ್ಯವಿಲ್ಲದವರಿಗೆ ದೊರೆಯಬಹುದು, ಆದಕ್ಕೆ ಈ ನಿರ್ಣಯ ಸಹಾಯಕವಾಗಬಹುದಾದ್ದರಿಂದ ಸರ್ಕಾರದವರು ಇದನ್ನು ಒಪ್ಪುವುದು ನ್ಯಾಯವಾಗಿದೆಯೆಂದು ಹೇಳುತ್ತೇನೆ.

ಹಿಂದುಳಿದ ಕಮ್ಯೂನಿಟಿಗಳ ಲೆಕ್ಕವನ್ನೆಲ್ಲಾ ಕೊಟ್ಟಿದ್ದಾರೆ. ಎಲ್ಲಾ ಪಂಗಡಗಳಿಗೂ ಅವರ ಪ್ರಜಾ ಸಂಖ್ಯೆಗನುಗುಣವಾಗಿ ಕೊಡಿ, ಮೇಜರ್ ಕಮ್ಯೂನಿಟಿಗಳಿಗೆ ಕೊನೆಯಲ್ಲಿ ಕೊಡಿ, ಮೈನರ್ ಕಮ್ಯೂನಿಟಿಗಳಿಗೆ ಪ್ರಿಫರೆನ್ಸ್ ಕೊಡಿ, ಜನಸಂಖ್ಯೆ ಕಡಮೆಯಿದ್ದರೂ ಮೈನರ್ ಕಮ್ಯೂನಿಟಿಗಳಿಗೆ ಪ್ರಾತಿನಿಧ್ಯ ಕೊಡಿಎಂದು ಹೇಳುತ್ತಾರೆ. ಜನಸಂಖ್ಯೆ ಪ್ರಕಾರ ಕೇಳುವುದೇನೋ ಸರಿಯೆ. ಆದರೆ ಅದಕಿಂತ ಮುಂದೆಹೋಗಿ ಸಣ್ಣಪುಟ್ಟ ಕೋಮುಗಳವರಿಗೆ ಪ್ರಾತಿನಿಧ್ಯವಿಲ್ಲ, ಕೊಡಿ, ಜನಸಂಖ್ಯೆ ಆಧಾರವನ್ನೇ ಮುಖ್ಯವಾಗಿಡುವುದಾದರೆ ಅವರಿಗೆ ಸಾಕಷ್ಟು ಉತ್ತೇಜನ ಸಿಕ್ಕುವುದಿಲ್ಲ ಎಂದು ಹೇಳುವುದು ಸರಿಯಲ್ಲ. ಒಕ್ಕಲಿಗರೂ ಎಷ್ಟೋ ಹಿಂದುಳಿದಿದ್ದಾರೆ. ಬೇಕಾದರೆ ಉದಾಹರಣೆಗೆ ಕೊಡಬಲ್ಲೆ. ಈ ರೀತಿಯಾಗಿ ಅನುಮಾನವಿಟ್ಟುಕೊಳ್ಳಬೇಕಾಗಿಲ್ಲ. ನಮ್ಮ ಜನಾಂಗಕ್ಕೆ ನ್ಯಾಯವಾಗಿ ದೊರೆಯಬೇಕಾದ ಸಹಾಯವನ್ನು ಕೊಡಿಎಂದು ಕೇಳಲಿ. ಆದರೆ ಅದುಬಿಟ್ಟು ಕೆಲವರಿಗೆ ನಿಲ್ಲಿಸಿಎಂದು ಹೇಳಿದರೆ ಹೇಗೆ? ಯಾವ ಕೋಮಿನಲ್ಲೇ ಆಗಲಿ ಪ್ರಾತಿನಿಧ್ಯ ಸರಿಯಾಗಿ ಬಂದಿದ್ದರೆ ಅವರಿಗೆ ಕೊಡುವ ಸಹಾಯ ನಿಲ್ಲಿಸಿ ಪ್ರಾತಿನಿಧ್ಯ ದೊರೆಯದಿರುವವರಿಗೆ ಪ್ರಿಫರೆನ್ಸ್ ಕೊಡುವುದು ಧರ್ಮ, ಆ ರೀತಿ ಕಾನೂನು ಮಾಡಿ ಎಂದು ಹೇಳಿದರೆ ಅದಕ್ಕೆ ಯಾರೂ ಬೇಡವೆಂದು ಹೇಳುತ್ತಿಲ್ಲ. ಯಾರೇ ಆಗಲಿ, ನ್ಯಾಯವಾಗಿ ಎಷ್ಟು ಅವರಿಗೆ ದೊರೆಯಬೇಕೋ ಅಷ್ಟನ್ನು ಕೊಡಿ ಎಂದು ಕೇಳಬಹುದು. ಅದಕ್ಕಿಂತ ಹೆಚ್ಚಾಗಿ ಕೊಡಬೇಕೆಂದು ಕೇಳುವುದು ಸಾಧುವಲ್ಲ. ಕೋಮುವಾರು ಭಾವನೆ ಬೆಳೆಸಬೇಕೆಂಬ ಉದ್ದೇಶ ಯಾರಿಗೂ ಇಲ್ಲ. ಸರ್ಕಾರಿ ಉದ್ಯೋಗಗಳು ಹಿಂದುಳಿದವರು ಮುಂದೆಬರುವುದಕ್ಕೆ ಇರುವ ಒಂದು ಅವಕಾಶ. ಸರ್ಕಾರಿ ನೌಕರನಿಗೆ ವಿದ್ಯಾ ಸೌಕರ್ಯ ಸಿಕ್ಕುತ್ತದೆ ಮತ್ತು ಇತರ ವೃತ್ತಿ ಮಾಡುವವರಿಗಿಂತ ಸ್ವಲ್ಪಮಟ್ಟಿಗಾದರೂ ಖಚಿತವಾದ ಆದಾಯ ದೊರೆಯುತ್ತದೆ; ಇದಲ್ಲದೆ ಸಮಾಜದಲ್ಲಿ ಒಂದು ಸ್ಥಾನಮಾನ ಸಿಕ್ಕುತ್ತದೆ. ಈ ಎಲ್ಲಾ ದೃಷ್ಟಿಯಿಂದಲೂ ಹಿಂದುಳಿದವರು ಮುಂದಕ್ಕೆ ಬರಲು ನೌಕರಿಗಳಲ್ಲಿ ಹೆಚ್ಚು ಪ್ರಾತಿನಿಧ್ಯ ಕೊಡುವುದು ಸರ್ಕಾರದ ಆದ್ಯ ಕರ್ತವ್ಯ. ಒಂದುಸಾರಿ ಆ ದರ್ಜೆಗೆ ಬಂದಮೇಲೆ ಕಾಂಪಿಟೀಷನ್‌ಗೆ ಬಿಡೋಣ. ವಿದ್ಯಾಭ್ಯಾಸದಲ್ಲಿ ಅಥವಾ ಸರ್ಕಾರಿ ನೌಕರಿಯಲ್ಲಿ ಒಂದು ನಿಗದಿಯಾದ ಪ್ರಗತಿ ಹೊಂದಿದಮೇಲೆ ಓಪನ್ ಕಾಂಪಿಟೇಷನ್ನಿಗೆ ಬಿಡಿ, ಯಾರೂ ಕೇಳುವುದಿಲ್ಲ. ಎಲ್ಲಾ ವಿದ್ಯಾರ್ಥಿಗಳಿಗೂ ಸೌಲಭ್ಯ ಕೊಡದೇ ಇರುವಾಗ, ಪ್ರತಿಯೊಬ್ಬ ಮನುಷ್ಯನಿಗೂ ಸಾಕಾಗುವಷ್ಟು ಪ್ರೈಮರಿ ಸ್ಕೂಲುಗಳನ್ನು ಒದಗಿಸದಿರುವಾಗ ರಿಸರ್ವೇಷನ್ ಕೂಡ ಇಲ್ಲವೆಂದರೆ ತುಂಬಾ ಅನ್ಯಾಯವಾಗುತ್ತದೆ. ಆದ್ದರಿಂದ ಸರ್ಕಾರದವರು ಈ ನಿರ್ಣಯವನ್ನು ಅಂಗೀಕಾರಮಾಡಿ ಎಲ್ಲಾ ಆಚರಣೆಗೆ ತರುವುದು ಅವರ ಆದ್ಯ ಕರ್ತವ್ಯವೆಂದು ಒತ್ತಾಯ ಪಡಿಸುತ್ತೇನೆ.

ಆಮೇಲೆ ಐ.ಎ.ಎಸ್. ನಲ್ಲಿ ಅವಕಾಶ ತಪ್ಪಿಹೋಗಿದೆ, ಇದರಿಂದ ವಿಶೇಷ ನಷ್ಟವಾಗಿದೆ ಎಂದು ಹೇಳಿದರು. ಇಂಡಿಯಾ ಸರ್ಕಾರದವರೂ ಇದನ್ನು ಒಪ್ಪಿದ್ದಾರೆ. ಫೆಡರಲ್ ಪಬ್ಲಿಕ್ ಸರ್ವಿಸ್ ಕಮೀಷನ್ ರೂಲ್ಸ್‌ನಲ್ಲೂ ಕೂಡ ನಿಮ್ನ ವರ್ಗದವರಿಗೆ ರಿಸರ್ವ್ ಮಾಡುವ ವಿಷಯ ನಮೂದಾಗಿದೆಯೆಂಬ ಭಾವನೆಯಿದೆ. ಅದನ್ನು ಮಾನ್ಯ ಮಂತ್ರಿಗಳು ವಿಶದಪಡಿಸುತ್ತಾರೆಂದು ನಂಬುತ್ತೇನೆ. ಇಷ್ಟು ಹೇಳಿ ಈ ನಿರ್ಣಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಇದರಲ್ಲಿ ಯಾರಿಗೂ ಅನ್ಯಾಯ ಮಾಡಬೇಕೆಂದಿಲ್ಲ. ಎಲ್ಲರಿಗೂ ಸಮಾನ ಅವಕಾಶ ಕೊಡಬೇಕು ಎಂಬ ದೃಷ್ಟಿಯಿಂದ ನೋಡಿ ಈ ನಿರ್ಣಯವನ್ನು ಪುಷ್ಟೀಕರಿಸುತ್ತೇನೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ (ಹೊಸಕೋಟೆ-ಆನೆಕಲ್).—ಮಾನ್ಯ ಅಧ್ಯಕ್ಷರೇ, ಹಿಂದುಳಿದ ಜನಾಂಗದವರಿಗೆ ಅವರ ಜನಸಂಖ್ಯೆಗನುಗುಣವಾಗಿ ಸಾಕಾದಷ್ಟು ಪ್ರಾತಿನಿಧ್ಯವನ್ನು ಇಂಡಿಯಾ ರಾಜ್ಯಾಂಗಕನುಸಾರವಾಗಿ ಕೊಡಬೇಕೆಂದು ತಂದಿರುವ ನಿರ್ಣಯಕ್ಕೆ ನನ್ನ ಪೂರ್ಣ ಬೆಂಬಲ ಕೊಡುತ್ತಾ ಒಂದೆರಡು ಮಾತುಗಳನ್ನು ಮಾತ್ರ ಆಡಲು ಬಯಸುತ್ತೇನೆ. ಈ ಹಿಂದುಳಿದ ಜನರಿಗೆ ಸಾಕಾದಷ್ಟು ಪ್ರಾತಿನಿಧ್ಯ ಕೊಡಬೇಕೆಂಬ ಪ್ರಯತ್ನ ಆಗಲೇ ಬಹಳ ಹಿಂದೆಯೇ ಪ್ರಾರಂಭವಾಗಿದೆ. 1918ರಿಂದ ಕೂಡ ಹಿಂದುಳಿದ ಜನಾಂಗಕ್ಕೆ ಸಂಸ್ಥಾನದಲ್ಲಿರುವ ಎಲ್ಲ ನೌಕರಿಗಳಲ್ಲಿಯೂ ಅವಕಾಶ ಮಾಡಬೇಕೆಂದು ಹೇಳಿ ಹಿಂದೆ ಸರ್ ಮಿಲ್ಲರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಮಾಡಿ ಆ ಸಮಿತಿಯ ಅಭಿಪ್ರಾಯದಂತೆ 1921ನೆಯ ಇಸವಿಯಲ್ಲಿ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡನ್ನು ಸ್ಥಾಪಿಸಿ ನಾನ್-ಗೆಜೆಟೆಡ್ ಅಧಿಕಾರಿಗಳಿಗೆ ಮಾತ್ರ ಆಗಿನಿಂದ ಪ್ರಾತಿನಿಧ್ಯ ಕೊಡುವ ಪ್ರಯತ್ನ ಇದುವರೆಗೆ ನಡೆದು ಪಬ್ಲಿಕ್ ಸರ್ವಿಸ್ ಕಮೀಷನ್ ಬಂದನಂತರ ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡನ್ನು ರದ್ದುಗೊಳಿಸುವ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ಆಗಿನಿಂದ ಇದುವರೆಗೆ ಅಂದರೆ ಸುಮಾರು 32 ವರ್ಷಗಳ ಸತತ ಪ್ರಯತ್ನದಿಂದ ಈ ಹಿಂದುಳಿದ ಜನಾಂಗಗಳಿಗೆ ಎಷ್ಟರಮಟ್ಟಿಗೆ ಸರ್ಕಾರದಲ್ಲಿ, ಅಧಿಕಾರಗಳಲ್ಲಿ ಪ್ರಾತಿನಿಧ್ಯ ದೊರೆತಿದೆ ಯೆಂಬುದನ್ನು ನೋಡೋಣ ಸುಮಾರು 32 ವರ್ಷಗಳ ಸತತ ಪ್ರಯತ್ನದಿಂದ ಸೇಕಡ 62.5 ಇದ್ದಂಥ ನಾನ್-ಗೆಜೆಟೆಡ್ ಅಧಿಕಾರಿಗಳ ಸಂಖ್ಯೆ ಈಗ 69.2 ಆಗಿದೆ. ಮುಂದುವರಿದ ಜನಾಂಗಗಳಲ್ಲಿ ಸೇಕಡ 37.5 ಇದ್ದ ನಾನ್ ಗೆಜೆಟೆಡ್ ಹುದ್ದೆಗಳ ಪ್ರಾತಿನಿಧ್ಯ ಈಗ 30.8 ಕ್ಕೆ ಇಳಿದಿದೆ. ಅಂದರೆ 32 ವರ್ಷಗಳಲ್ಲಿ ಸುಮಾರು ಶೇಕಡ ಏಳರಷ್ಟು ಮಾತ್ರ ಈ ಅಧಿಕಾರಿಗಳಲ್ಲಿ ಪ್ರಾತಿನಿಧ್ಯ ಹೆಚ್ಚಲು ಸಾಧ್ಯವಾಗಿದೆ. ಇದರಿಂದ ಬಹಳ ಜನರಿಗೆ ಒಂದು ವಿಧವಾದ ಅಸಮಾಧಾನ, ಅತೃಪ್ತಿ ಉಂಟಾಗುವುದು ಸ್ವಾಭಾವಿಕವಾಗಿದೆ. ಒಬ್ಬ ತಾಯಿಗೆ ಹತ್ತು ಮಕ್ಕಳು, ಮೊಮ್ಮಕ್ಕಳು ಇದ್ದರೆ ಆಕೆ ತನ್ನ ಮಕ್ಕಳು ಮತ್ತು ಮೊಮ್ಮಕ್ಕಳಲ್ಲಿ ಒಂದೇ ವಿಧವಾದ ವಿಶ್ವಾಸ, ಪ್ರೀತಿ ತೋರಿಸದಿದ್ದರೆ ಅದನ್ನು ಪ್ರಕಟಪಡಿಸುವುದು ಅಸೂಯೆಯೆಂದು ಹೇಳುವುದಕ್ಕಾಗುವುದಿಲ್ಲ. ನಾವೂ ಉಳಿದವರಂತೆ ಚೆನ್ನಾಗಿ ಬಾಳಬೇಕು ಎಂಬ ಆಸೆಯಿಟ್ಟುಕೊಳ್ಳುವುದು ಧರ್ಮ, ಸಹಜ ಮತ್ತು ನ್ಯಾಯ ಎಂದು ನನಗಾದರೂ ಅನ್ನಿ

ಸುತ್ತದೆ. ಈ ಹೊತ್ತಿನ ದಿವಸ ಸಂಸ್ಥಾನದಲ್ಲಿ ಗೆಜೆಟೆಡ್ ಹುದ್ದೆಗಳು, ನೌಕರಿಗಳು ಇರುವುದನ್ನು ಹಿಂದುಳಿದ ಜನಾಂಗಗಳವರಿಗೆ ಮತ್ತು ನಿಮ್ನ ತರಗತಿಗಳವರಿಗೆ ಜನಸಂಖ್ಯೆಗನುಗುಣವಾಗಿ ಕೊಟ್ಟರೆ ಸಾಮಾನ್ಯವಾಗಿ ಈ ಭೇದಭಾವ ಹೋಗಲು ಅವಕಾಶವಾಗುವುದು. ಆದರೂ ಕೂಡ ಶೇಕಡ ಏಳರಷ್ಟು ಮಾತ್ರ ಇದುವರೆಗೆ ಪಡೆದುಕೊಂಡಿರುವುದು ಕಂಡುಬರುತ್ತದೆ. ಈ ಹೊತ್ತಿನ ದಿನ ಗೆಜೆಟೆಡ್ ಹುದ್ದೆಗಳಲ್ಲಿ ಯಾವ ಯಾವ ಕೋಮಿಗೆ ಪ್ರಾತಿನಿಧ್ಯ ಎಷ್ಟುಮಟ್ಟಿಗಿದೆ ಎಂಬುದನ್ನು ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ದಯೆಯಿಟ್ಟು ಅಂಕಿ ಅಂಶಗಳೊಂದಿಗೆ ನಮಗೆ ಒದಗಿಸಿ ಉಪಕಾರ ಮಾಡಿದ್ದಾರೆಂದು ಹೇಳುವುದಕ್ಕೆ ನನಗೆ ಸಂತೋಷವಾಗುತ್ತದೆ. 150 ರೂಪಾಯಿಗಳಿಂದ 300 ರೂಪಾಯಿಗಳವರೆಗಿರುವ ಒಟ್ಟು 560 ಹುದ್ದೆಗಳಲ್ಲಿ ಯಾವ ಯಾವ ಕೋಮಿಗೆ ಪ್ರಾತಿನಿಧ್ಯ ಎಷ್ಟೆಷ್ಟಿದೆ ಎಂಬುದನ್ನು ಹೇಳಲು ಇಷ್ಟಪಡುತ್ತೇನೆ. ಒಕ್ಕಲಿಗರಲ್ಲಿ ಶೇಕಡ 10 ಮಂದಿ ಮಾತ್ರ 150 ರಿಂದ 300 ರೂಪಾಯಿಗಳವರೆಗಿರುವ ಹುದ್ದೆಗಳಲ್ಲಿದ್ದಾರೆ. ಲಿಂಗಾಯಿತ ಕೋಮಿನಲ್ಲಿ ಸೇಕಡ 13.9, ಕುರುಬರಲ್ಲಿ ಸೇಕಡ 4.1, ಬೇಡರಲ್ಲಿ ಸೇಕಡ. 7, ಬ್ರಾಹ್ಮಣರಲ್ಲಿ ಸೇಕಡ 36.9, ಗಂಗ ಕುಲದಲ್ಲಿ ಸೇಕಡ. 4, ಯಾದವರಲ್ಲಿ ಸೇಕಡ. 4, ಬಣಜಿಗರಲ್ಲಿ ಸೇಕಡ 1.9 ವಿಶ್ವಕರ್ಮರಲ್ಲಿ ಸೇಕಡ. 5, ಉಪ್ಪಾರರಲ್ಲಿ ಸೇಕಡ. 4, ಕುಂಚಿಟಿಗರಲ್ಲಿ ಸೇಕಡ. 9, ಅಗಸರಲ್ಲಿ ಸೇಕಡ, 2, ಕ್ಷತ್ರಿಯರಲ್ಲಿ ಸೇಕಡ. 2.8, ಇತರ ಹಿಂದುಳಿದ ಹಿಂದುಗಳಲ್ಲಿ ಸೇಕಡ 14.5, ಡಿಪ್ರೆಸ್ಡ್ ಕ್ಲಾಸಿನಲ್ಲಿ ಸೇಕಡ. 2.1 ಮಂದಿ 150 ರೂಪಾಯಿಗಳಿಂದ 300 ರೂಪಾಯಿಗಳವರೆಗಿರುವ ಹುದ್ದೆಗಳಲ್ಲಿದ್ದಾರೆ,

ಈ ರೀತಿ ಶೇಕಡಾವಾರು ಕೆಲವು ಪ್ರಾತಿನಿಧ್ಯವಿದೆ. ಇದೇರೀತಿ ಸರ್ಕಾರಿ ನೌಕರಿಗಳಲ್ಲಿ ಕೆಲವು ಕೋಮುಗಳಿಗೆ ಪ್ರಾತಿನಿಧ್ಯವಿಲ್ಲ'ವೆಂಬುದನ್ನು ಸಹ ಅಂಕಿಅಂಶಗಳಿಂದ ತಿಳಿಸಬೇಕಾಗಿದೆ. ತಿಂಗಳಿಗೆ 150 ರೂಪಾಯಿ ಸಂಬಳದಿಂದ 850 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿರುವವರಲ್ಲಿ ಒಕ್ಕಲಿಗರು ಶೇಕಡಾ 8.31, ಲಿಂಗಾಯಿತರು ಶೇಕಡಾ 11.9, ಕುರುಬರು ಶೇಕಡ 2, ಬೇಡರು ಶೇಕಡ, 3, ಬ್ರಾಹ್ಮಣರು ಶೇಕಡ 39.4, ಗಂಗ ಕುಲದವರು ಶೇಕಡ 1, ಯಾದವರು ಶೇಕಡ 3, ಬಣಜಿಗರು ಶೇಕಡ 1.5, ವಿಶ್ವಕರ್ಮ ಶೇಕಡ 4, ಕುಂಚಿಟಿಗರು ಶೇಕಡ 9, ಅಗಸರು ಶೇಕಡ 1 ಈ ರೀತಿ ಪ್ರಾತಿನಿಧ್ಯವಿದೆ ಯೆಂಬುದು ಕಂಡುಬರುತ್ತದೆ. ಅಲ್ಲದೆ, ತಿಂಗಳಿಗೆ 300 ರೂಪಾಯಿನಿಂದ 800 ರೂಪಾಯಿ ಸಂಬಳ ಬರುವವರಲ್ಲಿ ಕೆಲವು ಕೋಮಿನಿಂದ ಯಾರೊಬ್ಬರೂ ಇಲ್ಲದಿರುವುದು ಶೋಚನೀಯ ಪರಿಸ್ಥಿತಿಯಾಗಿದೆ. ಹೀಗಾದರೆ ಆ ಕೋಮಿನ ಜನರ ಮನಸ್ಸು ಎಷ್ಟು ನೋಯುತ್ತದೆಂಬುದನ್ನು ನಾವು ಅರಿಯಬೇಕು. ಇದರ ಸಲುವಾಗಿ ಅನೇಕ ಕೋಮಿನ ಜನರಲ್ಲಿ ಅತೃಪ್ತಿ ಇದೆ. ಇದಕ್ಕೆ ಅವಕಾಶವಿಲ್ಲದಂತೆ ಮಾಡುವುದು ಸರ್ಕಾರದ ಕರ್ತವ್ಯ. ಸರ್ವರಿಗೂ ಸಮಾನ ಅವಕಾಶವನ್ನು ಕಲ್ಪಿಸಿ ಎಲ್ಲರೂ ದೇಶದ ಹಿತಕ್ಕಾಗಿಯೇ ದುಡಿಯುವವರು ಎಂಬುದನ್ನು ಅರಿತು ಅವರಿಗೆ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿ ಕೊಡಬೇಕು. ಈ ಬಗ್ಗೆ ಪಬ್ಲಿಕ್ ಸರ್ವಿಸ್ ಕಮಿಷನ್ ನಿಯಮಾವಳಿಯನ್ನು ಸೂಕ್ತರೀತಿಯಲ್ಲಿ ಬದಲಾವಣೆ ಮಾಡಿ ಸರ್ವರಿಗೂ ಸಮಾನ ಅವಕಾಶವನ್ನು ಕಲ್ಪಿಸಿ ಕೊಡಬೇಕು. ಈ ಅನುಕೂಲತೆಯನ್ನು ಸರ್ಕಾರದವರು ಕಲ್ಪಿಸಿಕೊಡುತ್ತಾರೆಂದು ನಂಬಿ ನಾನು ಇದಕ್ಕೆ ನನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಚಿಕ್ಕಮಗಳೂರು-ಮೂಡಿಗೆರೆ-ಅನುಸೂಚಿತ ಜಾತಿಗಳು).—ಅಧ್ಯಕ್ಷರೇ, ಈಗಾಗಲೇ ನಮ್ಮ ಮುಂದೆ ಇರುವ ಈ ನಿರ್ಣಯದ ವಿಚಾರದಲ್ಲಿ ಹಲವಾರು ಸದಸ್ಯರು ತಮ್ಮ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿರುತ್ತಾರೆ. ಕೆಲವರು ಅಂಕಿ ಅಂಶಗಳನ್ನು ಬೇರೆ ಶೃತಪಡಿಸಿ ಹಿಂದುಳಿದ ಜನಾಂಗಕ್ಕೆ ಎಷ್ಟುಮಟ್ಟಿಗೆ ಅನ್ಯಾಯವಾಗಿದೆ ಎಂಬುದನ್ನು ಸೂಚಿಸಿರುತ್ತಾರೆ. ಈ ಸಂಬಂಧದಲ್ಲಿ ಸರ್ಕಾರಕ್ಕೆ ನೆರವಾಗಿ ಕೆಲವು ರಚನಾತ್ಮಕ ಸಲಹೆಗಳನ್ನು ಕೊಡುವುದು ಅತ್ಯಾವಶ್ಯಕ. ಈ ವಿಚಾರದಲ್ಲಿ ಸರ್ಕಾರಕ್ಕಿರುವ ಅಡ್ಡಿ ಆತಂಕಗಳಾದರೂ ಏನು ಎಂಬುದನ್ನು ನಾವು ಪರಿಶೀಲಿಸಬೇಕಾಗಿದೆ. ಹಿಂದುಳಿದ ಕೋಮಿನವರಿಗೆ ಸರ್ಕಾರಿ ನೌಕರಿಗಳಲ್ಲಿ ಪ್ರಾತಿನಿಧ್ಯವನ್ನು ಆಯಾ ಕೋಮಿನ ಪ್ರಜಾ ಸಂಖ್ಯೆಗೆ ಅನುಗುಣವಾಗಿ ಕೊಟ್ಟರೆ ಅದು ಪ್ರಜಾಭಿಪ್ರಾಯಕ್ಕೆ ವಿರೋಧವಾಗುತ್ತದೆಂಬ ಶಂಕೆ ಸರ್ಕಾರಕ್ಕೆ ಇದ್ದರೆ, ಆ ಭಾವನೆಗೆ ಪ್ರಜಾಪ್ರಭುತ್ವದಲ್ಲಿ ಅವಕಾಶವಿಲ್ಲವೆಂದು ತಿಳಿಯುತ್ತೇನೆ. ಇಷ್ಟೇ ಅಲ್ಲದೆ, ರಾಜ್ಯಾಂಗದಲ್ಲಿಯೂ ಸಹ ಹಿಂದುಳಿದ ಪಂಗಡದವರಿಗೆ ಸಮಾನ ಅವಕಾಶ ಕಲ್ಪಿಸಿಕೊಡಬೇಕೆಂಬುದು ವಿಧಿತವಾಗಿದೆ. ಭಾರತ ರಾಜ್ಯಾಂಗವೆಂಬುದು ಒಂದು ಪವಿತ್ರಗ್ರಂಥ, ಅದನ್ನು ಎಲ್ಲರೂ ಗೌರವದಿಂದ ಕಾಣಬೇಕು ಎಂಬುದಾಗಿ ಈ ಹಿಂದೆ ಈಗಿನ ನಮ್ಮ ಮಾನ್ಯ ಮುಖ್ಯಮಂತ್ರಿಗಳು; ಹೇಳಿದರು; ನನಗೆ ಈಗಲೂ ಜ್ಞಾಪಕವಿದೆ. ಆದುದರಿಂದ ರಾಜ್ಯಾಂಗದನಿಯಮದಂತೆ ಕಾರ್ಯಗಳನ್ನು ಪಾಲಿಸಿ ರಾಜ್ಯಾಂಗಕ್ಕೆ ಮನ್ನಣೆ ಕೊಡಬೇಕಾದುದು ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಈಗ Services in the State include I. A. S. and I. P. S. ಎಂದು ಹೇಳುವುದಾದರೆ, ಅದರಲ್ಲಿಯೂ ಹಿಂದುಳಿದ ಕೋಮಿನವರಿಗೆ ಸಮಾನ ಅವಕಾಶ ಕಲ್ಪಿಸಿಕೊಡಬೇಕಾದುದು ಅಗತ್ಯ. ಹಾಗೆ ಕಲ್ಪಿಸಲು ಈಗ ಜಾರಿಯಲ್ಲಿರುವ ನಿಯಮಾವಳಿಗಳಲ್ಲಿ ಅವಕಾಶವಿಲ್ಲದಿದ್ದರೆ, ಅದಕ್ಕೆ ಅವಕಾಶವನ್ನು ನಮ್ಮ ಸರ್ಕಾರದವರು ಕಲ್ಪಿಸಿಕೊಂಡು ಸೂಕ್ತ ರೀತಿಯ ಬದಲಾವಣೆಯನ್ನು ಮಾಡಿಕೊಳ್ಳಬೇಕಾದುದು ಅಗತ್ಯವೆಂದು ತಿಳಿಸುತ್ತೇನೆ.

Mr. SPEAKER.—This resolution is about recruitment and appointments, not about other facilities referred to by you.

ಶ್ರೀ ಜಿ. ಪುಟ್ಟಸ್ವಾಮಿ.—ಈಗ ನೌಕರಿಗಳನ್ನು ಆಯಾ ಕೋಮಿನ ಪ್ರಜಾ ಸಂಖ್ಯೆಗನುಗುಣವಾಗಿ ಹಂಚಬೇಕೆಂಬುದೇ ನನ್ನ ಮುಖ್ಯ ಉದ್ದೇಶ. ಈಗಿನ latest census ಪ್ರಕಾರ ಹಿಂದುಳಿದ ಕೋಮಿನ ಪ್ರಜಾಸಂಖ್ಯೆ 1/5 ಭಾಗವಾಗಿರುತ್ತದೆ. ಅಂದರೆ ಶೇಕಡಾ 20 ರಷ್ಟು ಪ್ರಾತಿನಿಧ್ಯ ನೌಕರಿಗಳಲ್ಲಿ ಇವರಿಗೆ ದೊರಕಬೇಕು. ಅಲ್ಲದೆ ನೌಕರಿಗಳಲ್ಲಿ ಗೆಜೆಟೆಡ್ ಮತ್ತು ನಾನ್ ಗೆಜೆಟೆಡ್ ಹುದ್ದೆಗಳನ್ನು ಬೇರೆ ಬೇರೆಯಾಗಿ ಪರಿಗಣಿಸಿ ಅದರಲ್ಲಿ ಪ್ರಾತಿನಿಧಿಗಳನ್ನು ಬೇರೆ ಬೇರೆಯಾಗಿ ವಿಂಗಡಿಸಬೇಕೆಂದು ಕೋರುತ್ತೇನೆ. ಈ ಹುದ್ದೆಗಳನ್ನು ಸರ್ಕಾರದವರು, ಈಗಾಗಲೇ ಸರ್ಕಾರಿ ನೌಕರಿಯಲ್ಲಿರುವವರ ಸೌಲಭ್ಯಕ್ಕೂ ಕೂಡ ಸ್ಥಾನಗಳನ್ನು ಮೀಸಲಾಗಿಡಬೇಕು. ಅಲ್ಲದೆ direct recruitment vacancies ಬೇರೆ, promotional vacancies ಬೇರೆ ಎಂದು ಪರಿಗಣಿಸಬೇಕೆಂದು ಕೋರುತ್ತೇನೆ. ಹಿಂದುಳಿದ ಕೋಮಿಗೆ ಮುಂದೆ

(ಶ್ರೀ ಜಿ. ಪುಟ್ಟಸ್ವಾಮಿ.)

ಪ್ರಜಾಸಂಖ್ಯೆಗೆ ಅನುಗುಣವಾಗಿಯೇ ನೌಕರಿಗಳನ್ನು ಹಂಚುವ ವ್ಯವಸ್ಥೆ ಮಾಡಬೇಕೆಂದು ಕೋರುತ್ತೇನೆ.

ಅಲ್ಲದೆ ಈಗ ಉದಾಹರಣೆಗೆ ಉಪ್ಪಾರ ಕೋಮಿನವರು ಒಬ್ಬರೂ ಸಹ ಒಂದು ಗೆಜೆಟೆಡ್ ಹುದ್ದೆಯಲ್ಲೂ ಇಲ್ಲ ಎಂದು ಹೇಳುತ್ತೇನೆ. ಹೀಗೆ ಕೆಲವು ಕೋಮುಗಳು ಬಿಟ್ಟುಹೋಗುವುದಾದರೆ, ಅವರಿಗೆ ಪ್ರಾತಿನಿಧ್ಯ ಇಲ್ಲದೇಯಿರುವುವಾದರೆ ಸರ್ಕಾರದವೇಲೆ ಒಂದು ಅತೃಪ್ತಿ, ಅಸಮಾಧಾನವುಂಟಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಇದಕ್ಕೆ ಅವಕಾಶವಿರಬಾರದು ಎಂದು ನಾನು ಸೂಚಿಸುತ್ತೇನೆ, ಸ್ವಾಮಿ. ಈ ವಿಚಾರದಲ್ಲಿ ನಾನು ಹೆಚ್ಚು ಹೇಳುವುದಕ್ಕೆ ಬಯಸುವುದಿಲ್ಲ. ತವ್ಮು ಅಮೂಲ್ಯವಾದ ಕಾಲವನ್ನು ತೆಗೆದುಕೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ಈ ಹಿಂದುಳಿದ ಕೋಮುಗಳವರಿಗೆ ಯಾವ್ಯಾವ ಅವಕಾಶಗಳನ್ನು ಮಾಡಿಕೊಡಬೇಕೋ ಅವುಗಳನ್ನೆಲ್ಲಾ ಅತಿ ಜಾಗ್ರತೆಯಾಗಿ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಸರ್ಕಾರಿ ಆಡಳಿತದಲ್ಲಿ ದಕ್ಷತೆ ಹೆಚ್ಚಿ ದೇಶದ ಅಭಿವೃದ್ಧಿಯಾಗುತ್ತದೆ. ಅದುದರಿಂದ ಬಹಳ ಪ್ರಯೋಜನವಿದೆ ಎಂಬುದನ್ನು ನಾನು ಇನ್ನೊಮ್ಮೆ ಹೇಳಿ ನಮ್ಮ ಮುಂದಿರುವ ನಿರ್ಣಯವನ್ನು ಪುಷ್ಟೀಕರಿಸಿ ಇಷ್ಟು ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ನಾನು ವಂದಿಸುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ (ದಾವಣಗೆರೆ).—ಸ್ವಾಮಿ ಇದುವರೆಗೂ ನಮ್ಮ ಸಹೋದರರು ಮತ್ತು ಸಹೋದರಿಯರು ಮಾತನಾಡಿದುದರವೇಲೆ ಎಲ್ಲಾ ವಿಷಯವೂ ಚೆನ್ನಾಗಿ ಅರ್ಥವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ವಿವರಣೆ ಮಾಡುವುದು ಅಷ್ಟು ಅವಶ್ಯಕವಲ್ಲ ಎಂದು ಕಾಣುತ್ತದೆ. ಏಕೆಂದರೆ ಪಬ್ಲಿಕ್ ಸರ್ವೀಸ್ ಕಮಿಷನ್‌ನವರ ಪುಸ್ತಕದಲ್ಲಿ ಅಡಕವಾಗಿರುವುದನ್ನು ಎಲ್ಲರೂ ಚನ್ನಾಗಿ ಓದಿ ತಿಳಿದುಕೊಂಡಿದ್ದಾರೆ. ಕಾಲಕ್ಕನುಸರಿಸಿ ಈಗ ಏನು ಒಂದು ಠರಾವನ್ನು ತಂದಿದ್ದಾರೆ ಇದನ್ನು ಬಹಳ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಮಾತ್ರ ಹೇಳಬೇಕೆಂದು ಇಷ್ಟಪಡುತ್ತೇನೆ. ಏನೆಂದರೆ, ನಾವು ಕಾಂಗ್ರೆಸ್‌ನಲ್ಲಿ ಸೇರಿ, ಆ ಸಂಸ್ಥೆಯಿಂದ ಅನೇಕ ಕೆಲಸಕಾರ್ಯಗಳನ್ನು ಮಾಡಿ, ಆ ಸಂಸ್ಥೆಯಲ್ಲಿ ಒಂದು ಗೌರವವನ್ನು ಇಟ್ಟುಕೊಂಡು ಬಂದಿದ್ದೇವೆ. ಇದನ್ನು ನಮ್ಮ ಸರ್ಕಾರದವರು ಮರೆಯುವಹಾಗಿಲ್ಲ. ಇವೊತ್ತು ಇರುವುದು ಅದೇ ಸರ್ಕಾರ ಎಂದವೇಲೆ ನಾವು ಜನರಿಗೆ ಯಾವ ಒಂದು ಮಾತು, ವಚನ ಕೊಟ್ಟಿದ್ದೇವೆ ಅದರಂತೆ ನಡೆದುಕೊಂಡು ಹೋಗಬೇಕಾದದ್ದು ನಮ್ಮ ಕರ್ತವ್ಯ, ಅದೇ ಧರ್ಮ, ಅದನ್ನು ಅಲ್ಲಗಳೆದರೆ ಮಾತ್ರ ಧರ್ಮಕ್ಕೆ ಚ್ಯುತಿ ಬರುತ್ತದೆ. ಧರ್ಮಕ್ಕೆ ಚ್ಯುತಿ ಬರದಂತೆ ನಡೆದುಕೊಂಡು ಹೋಗಬೇಕೆಂದು ಅರಿಕೆಮಾಡಿಕೊಳ್ಳಬೇಕಾಗಿದೆ. ನಾವು ದೇವರ ದೃಷ್ಟಿಯಲ್ಲಿ ಅಥವಾ ನಮ್ಮ ದೇಶದ ಸಾಮಾನ್ಯ ವ್ಯವಹಾರ ದೃಷ್ಟಿಯಲ್ಲಿ ನೋಡುವುದಾದರೆ, ನಾವೆಲ್ಲ ಒಂದು ತಾಯಿಯ ಮಕ್ಕಳು, ಬೇರೆಯಲ್ಲ. ಆದರೆ ಆಡುವುದು ಒಳ್ಳೆಯಮಾತು, ಅರೆಯುವುದು ಮೆಣಸಿನಕಾಯಿ ಎಂದು ಹೇಳುವಹಾಗೆ ಮಾತ್ರ ಆಗಬಾರದು. ಯಾವ ಕೆಲಸ ಮಾಡಿದರೂ ಭಗವಂತನು ಮೆಚ್ಚುವಂತೆ ಮಾಡಬೇಕು. ಸಮಾಜದಲ್ಲಿ ಅನ್ಯಾಯಮಾತ್ರ ಯಾರಿಗೂ ಆಗಬಾರದು. ಸರಿ ಸಮಾನವಾಗಿ ನಾವು ನಮ್ಮ ನಮ್ಮ ಹಕ್ಕುಬಾಧ್ಯತೆಗಳನ್ನು ಕೇಳಿ ತೆಗೆದುಕೊಳ್ಳುವುದು ಉತ್ತಮ ಹಾಗೆ ನಮ್ಮ ನಮ್ಮ ಹಕ್ಕುಬಾಧ್ಯತೆಗಳು ದೊರೆಯದೇ ಹೋದರೆ ಅದು ಮನುಷ್ಯ ಧರ್ಮದಲ್ಲಿ, ನ್ಯಾಯವೂ ಅಲ್ಲ. ಧರ್ಮ, ನ್ಯಾಯಕ್ಕನುಸರಿಸಿ ಅದರಂತೆ ಹೋಗಬೇಕಾಗಿದೆ. ನುಡಿದಂತೆ ನಡೆ, ನಡೆದಂತೆ ನುಡಿ ಎಂಬುದಾಗಿ ಹೇಳುವಂತೆ ರಾಷ್ಟ್ರದ ಅಭ್ಯುದಯಕ್ಕೆ, ರಾಷ್ಟ್ರದ ಉನ್ನತಿಗೆ ದುಡಿಯುತ್ತೇವೆ ಎಂದು ಹೇಳಿ ವಾಗ್ದಾನಮಾಡಿರಬೇಕಾದರೆ ಅದನ್ನು ಸಾಧಿಸಬೇಕಾದಂಥ ಪ್ರಸಂಗ ಇವತ್ತು ನಮ್ಮ ಸರ್ಕಾರದವರ ಪಾಲಿಗೆ ಬಂದಿದೆ. ಅದರಂತೆ ಈ ದಿವಸ ನಡೆದುಕೊಂಡು ಎಲ್ಲಾ ಜನಗಳಿಗೂ ನ್ಯಾಯ ದೊರಕುವಂತೆ ಮಾಡಬೇಕು. ಯಾರಿಗೂ ಅನ್ಯಾಯವಾಗಬಾರದು ಎಂದು ಹೇಳಿ ಈ ಠರಾವಿನಲ್ಲಿ ಸೂಚಿಸಿರುವಂತೆ ಅದನ್ನು ಕಾರ್ಯಗತ ಮಾಡಲು ಹಿಂತೆಗೆಯಬಾರದೆಂದು ಹೇಳಿ ಇದಕ್ಕೆ ಬೆಂಬಲ ಕೊಡುತ್ತೇನೆ. ಮುಖ್ಯವಾಗಿ ಯಾರಿಗೆ ಅನ್ಯಾಯವಾದರೂ ಈ ರಾಜ್ಯ ಉಳಿಯುವುದಿಲ್ಲ. ಈ ಸರ್ಕಾರ ಉಳಿಯುವುದಿಲ್ಲ. ಇದಕ್ಕೆ ಚ್ಯುತಿ ಬರದಂತೆ ನಡೆದುಕೊಳ್ಳಬೇಕೆಂದು ಇಷ್ಟು ಮಾತ್ರ ಅರಿಕೆ ಮಾಡಿಕೊಂಡು ಹೆಚ್ಚು ವಿವರಣೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಠರಾವಿನಲ್ಲಿ ಸೂಚಿಸಿರುವಂತೆ ಮಾಡುವುದು ಅನುಚಿತ ಎಂದು ತಿಳಿದುಕೊಳ್ಳಬಾರದು. ಹಾಗೆ ತಿಳಿದರೆ ಭಗವಂತನೇ ನೋಡಿಕೊಳ್ಳಲಿ, ಅದಕ್ಕೆ ಅವಕಾಶಕೊಡಬಾರದು ಎಂದು ಹೇಳಿ ಮುಗಿಸುತ್ತೇನೆ.

ಶ್ರೀ ವಿ. ಮಸಿಯಪ್ಪ (ಹಿರಿಯೂರು).—ಶ್ರೀಮಾನ್ ಮಾದಯ್ಯನವರು ಸೂಚಿಸಿರತಕ್ಕ ಈ ನಿರ್ಣಯವನ್ನು ಸಮರ್ಥಿಸುತ್ತಾ ಈಗಾಗಲೇ ಅನೇಕ ಮಾನ್ಯ ಮಿತ್ರರು ಹೇಳಿರುವುದಲ್ಲದೆ ಒಂದು ವಿಷಯವನ್ನು ಮಾತ್ರ ಸ್ಪೆಷಲ್ ಆಗಿ ನಾನು ಹೇಳಬೇಕಾಗಿದೆ. ಬಹುಶಃ ಇದನ್ನು ಈಗಾಗಲೇ ಯಾರಾದರೂ ಹೇಳಿದ್ದಾರೆಯೋ ಏನೋ ನನಗೆ ಗೊತ್ತಿಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಕೊಟ್ಟಿರತಕ್ಕ ಈ ಒಂದು ಚಾರ್ಟನ್ನು ಎಲ್ಲರೂ ಸಹ ತಮ್ಮ ಗಮನಕ್ಕೆ ತಂದಿದ್ದಾರೆ. ಇದರಲ್ಲಾಗಿರತಕ್ಕ ಅನ್ಯಾಯದ ಪರಮಾವಧಿಯನ್ನು ತಪ್ಪಿಸಲಿಕ್ಕೆ ಸರ್ಕಾರದವರು ಕೂಡಲೇ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಪ್ರಯತ್ನಪಟ್ಟು ಪಬ್ಲಿಕ್ ಸರ್ವೀಸ್ ಕಮಿಷನ್‌ನವರನ್ನು ಕೇಳಿ ಅವರು 1952ನೇ ಇಸವಿ ಜನವರಿಯಲ್ಲೇ ಸಲಹೆ ಕೊಟ್ಟಿದ್ದರೂ ಕೂಡ ಇನ್ನೂ ಆ ಬಗ್ಗೆ ಯಾವ ನಿರ್ಧಾರವನ್ನೂ ಮಾಡಿಲ್ಲ ಎಂದು ಹೇಳಿದರೆ ಅದು ಬಹಳ ಶೋಚನೀಯವಾದ ವಿಚಾರ.

ಶ್ರೀ ಕಡಿದಾಳ್ ಮಂಜಪ್ಪ.—ಯಾವುದು ?

Sri V. MASIYAPPA.—It is mentioned in the Report of the Public Service Commission on page 16 :

> "Under Article 16 (4) of the Constitution, provision may be made for the reservation of appointments or posts in favour of any Backward Classes of citizens which, in the opinion of the State, are not adequately represented in the services of the State. At the instance of the Government, the Commission tendered its advice on the question of representation of Backward Classes, Scheduled Castes and

Scheduled Tribes in the State Services. Orders of Government on the proposals made by the Commission in this behalf on 21st January 1952 are awaited.''

If the Government have not come to any decision on this point and if they could not come to any proper decision on this matter, I do not understand how the backward classes interests or scheduled classes interests could be safeguarded by the Government and how far the provisions of the Constitution could be given effect to and the fundamental rights of these particular classes of people could be safeguarded. In this connection, I would like to draw your attention and the attention of the House to provisions of the Constitution under article 312 (2) and 16 (4) and 15 (4), Sir, where the Constitution guarantees the right to the proportional representation according to their population in the State Services as well as in the Central Services and also in all educational and other institutions, whichever is conducive to the growth and development and advancement of all communities. When such is the provision of the Constitution, if the Government have not been able to implement it, I do not know how they can safeguard our interests and the interests of these backward communities.

ಈ ಸಂದರ್ಭದಲ್ಲಿ ನಾನು ಒಂದು ಅಂಶವನ್ನು ಹೇಳಬೇಕಾಗಿದೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಐ. ಎ. ಎಸ್. ಮತ್ತು ಐ. ಪಿ. ಎಸ್. ಸರ್ವಿಸ್ಸಿಗೆ ಅರ್ಹರಾದವರು ಅನೇಕರಿದ್ದಾರೆ. ಅವರ ಪೈಕಿ ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಷೆಡ್ಯೂಲ್ಡ್ ಕ್ಲಾಸ್‌ನವರಿಗೆ......

Mr. SPEAKER.—That was discussed yesterday or day before yesterday.

Sri V. MASIYAPPA.—Only one suggestion, Sir, while speaking on this resolution.

ಅನೇಕ ಮಾನ್ಯ ಮಿತ್ರರು ಹೇಳಿರುವ ಹಾಗೆ ಮೆರಿಟ್ ಎಫಿಷೆಯನ್ಸಿ ಎಂದು ಹೇಳಿ ಪಬ್ಲಿಕ್ ಸರ್ವೀಸ್ ಕಮೀಷನ್ ಮುಖಾಂತರ ಪ್ರಥಮ ದರ್ಜೆಯವರನ್ನೇ ನೇಮಕಮಾಡುವ ಪಕ್ಷದಲ್ಲಿ ಆಗ ಬ್ಯಾಕ್ ವರ್ಡ್ ಕ್ಲಾಸ್ ಮತ್ತು ಷೆಡ್ಯೂಲ್ಡ್ ಕ್ಲಾಸ್‌ನಲ್ಲಿರತಕ್ಕ ಪದವೀಧರರಿಗೆ ಬಹಳ ವಿಧವಾಗಿ ಧಕ್ಕೆ ತಗಲುತ್ತದೆ. ಆ ರೀತಿ ಧಕ್ಕೆ ತಗಲಿ ಮೈಸೂರು ಸಂಸ್ಥಾನದ ಡಿಸ್ಟ್ರಿಕ್ಟುಗಳಲ್ಲಾಗಲಿ, ಸೆಕ್ರೆಟೇರಿಯಟ್‌ನಲ್ಲಾಗಲಿ ಬ್ಯಾಕ್ ವರ್ಡ್ ಕ್ಲಾಸ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಯಾರನ್ನು ಕೂಡ ಇಟ್ಟುಕೊಳ್ಳಲಿಕ್ಕೆ ಆಗುವುದಿಲ್ಲ. ಸಾಮಾನ್ಯವಾಗಿ ಮೆರಿಟ್ ಎಂದು ಹೇಳಿದರೆ ಯಾರು ಬರುತ್ತಾರೆ ಎಂಬುದನ್ನು ನಾನು ಹೇಳಬೇಕಾಗಿಲ್ಲ ತಮಗೆಲ್ಲಾ ಗೊತ್ತೇ ಇದೆ. ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ, ಶ್ರೀ ಹುಚ್ಚೇಗೌಡರು ಆಗಲೇ ಹೇಳಿದಹಾಗೆ, ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡುವದನ್ನು ಕೂಡ ಪ್ರಪೋರ್ಷನಲ್ ಆಗಿ in accordance with the population of each community ಮಾಡಿ ಆಯಾ ಹುದ್ದೆಗಳಿಗೆ ನೇಮಕಮಾಡಬಹುದು. ಇಲ್ಲದೇ ಇದ್ದರೆ ಬಹಳ ಅನ್ಯಾಯವಾಗುತ್ತದೆ. ಅದನ್ನು ಯಾವ ರೀತಿಯಲ್ಲೂ ಸರಿಪಡಿಸಿಕೊಳ್ಳಲಿಕ್ಕೆ ಆಗುವುದಿಲ್ಲ ಎಂಬ ಒಂದು ವಿಚಾರವನ್ನು ಹೇಳಬೇಕಾಗಿದೆ.

12-30 P.M.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು-ದಕ್ಷಿಣ ತಾಲ್ಲೂಕು).—ಶ್ರೀ ಮಾದಯ್ಯನವರು ಸಭೆಯ ಮುಂದೆ ಈ ನಿರ್ಣಯವನ್ನು ಮಂಡಿಸಿ ತುಂಬ ಉಪಕಾರ ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಹಾಗೂ ಇದು ಸಕಾಲದಲ್ಲಿ ಬಂದಿದೆ. ಇಷ್ಟು ಹೊತ್ತೂ ನಮ್ಮ ಮಿತ್ರರು ಕೊಟ್ಟಿರತಕ್ಕ ಸಲಹೆಗಳಲ್ಲಿರುವ ಅಂಶಗಳನ್ನು ಸರ್ಕಾರದವರು ತೀವ್ರವಾಗಿ ಆಲೋಚನೆ ಮಾಡತಕ್ಕದ್ದು ಅವಶ್ಯಕ. ನಮ್ಮ ರಾಜ್ಯಾಂಗ ರಚನೆಯಾಗಲಿ ಅಥವಾ ಅದನ್ನನುಸರಿಸಿ ಮಾಡಿರತಕ್ಕ ಪಬ್ಲಿಕ್ ಸರ್ವಿಸ್ ಕಮಿಷನ್ ರೂಲ್ಸ್ ಆಗಲಿ ಸಮಾನ್ಯ ಪ್ರಾತಿನಿಧ್ಯವನ್ನು ಕೊಡುವ ವಿಷಯದಲ್ಲಿ ಅಡ್ಡಿ ಮಾಡುವುದಿಲ್ಲವೆಂಬುದು ಸ್ಪಷ್ಟವಾಗಿದೆ. ನಾವ್ ಪ್ರತಿನಿಧಿಗಳಾಗಿದ್ದೂ ಜನಗಳ ಹಿತವನ್ನು ಕಾಪಾಡಬೇಕಾದರೆ ಅವರಲ್ಲಿ ತೃಪ್ತಿಯುಂಟಾಗುವಂತೆ ಮಾಡಬೇಕಾದದ್ದು ಅವಶ್ಯಕ. ಆದ್ದರಿಂದ ಸರ್ಕಾರದವರು ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಹಾಕಿಕೊಂಡು ನಮ್ಮ ರಾಜ್ಯಾಂಗರಚನೆಯಂತೆ ಜನಸಂಖ್ಯೆಗನುಗುಣವಾದ ರೀತಿಯಲ್ಲಿ, ಬರೀ ಸರ್ಕಾರಿ ಹುದ್ದೆಗಳ ವಿಷಯದಲ್ಲೇ ಅಲ್ಲ ವಿದ್ಯಾ ಇಲಾಖೆಯಲ್ಲಿ ವಿದ್ಯಾರ್ಥಿಗಳಿಗೆ ಸ್ಥಳ ಸೌಲಭ್ಯಗಳನ್ನು ಕಲ್ಪಿಸಿಕೊಡುವುದರಲ್ಲೂ ಕೂಡ ಸೂಕ್ತ ಏರ್ಪಾಡನ್ನು ಮಾಡಿ ತೃಪ್ತಿಯನ್ನುಂಟುಮಾಡಬೇಕಾಗಿದೆ. ಆದ್ದರಿಂದ ಸರ್ಕಾರದವರು ಇನ್ನು ಮುಂದಾದರೂ ಈ ದಾರಿಯಲ್ಲಿ ಹೋಗಿ ನಿರ್ದಿಷ್ಟವಾದ ಒಂದು ಕಾಲ ಪರಿಮಿತಿಯನ್ನು ಗೊತ್ತುಮಾಡಿಕೊಂಡು ನ್ಯಾಯವನ್ನು ಸಲ್ಲಿಸುವ ಪ್ರಯತ್ನಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri M. LINGANNA (Nanjangud).—It is said that the State should be a secular State, but at the same time it is a fact well known to us that the Constitution itself has several provisions by which the representation of the scheduled castes and even backward classes in the services and their well-being should be protected, and I for one would have been glad if the Constitution has been amended so as to provide no such provision as such. But to my mind and as every one of this august House knows, the social structure of the Indian society as such is one which warrants the framers of the constitution to provide safeguards

(SRI M. LINGANNA.)

for the scheduled castes and backward classes. I believe that the reservation or safeguard that is being provided and that their claims have been accepted unanimously, are the features which we have to welcome from this point of view. As I have said in the preliminary sentence, the social structure that is prevailing in our land is one that paramountly necessitates the particular safeguards. If the same is characterised as an evil, I say it is an evil which we will have to digest and after digesting throw the blame on that ideal of caste and society. From this point of view, I whole-heartedly support this Resolution.

Several Members of this House referred to certain percentages that have been allotted to the backward classes and scheduled castes in the State and, of course, this is not merely the phenomenon prevailing in this State alone; it is also a phenomenon that is prevailing almost in the south of India. Whether a decision is taken by this House or whether a decision is taken by the Backward Class Commission that is set up by the Government of India or when anybody who is responsible for the public opinion were to take a decision, it shall be in the particular behalf of improving not merely the social status, not merely the lot of the people who are backward and not merely their economic conditions but also their representation in the services of the States concerned. The people who are called as scheduled castes, of course form the bulk of the masses.

But that apart, because of so many social disabilities that were weighing on them, they could not come up to the level of other communities that had opportunities to march ahead. The time has come when we should recognise their claim, not merely because they are large in numbers, but because they had no opportunities so far to come forward; they should not now be neglected. If they are neglected now, we will be jeopardising the structure of the whole society by retaining an evil part of it, of which we are accredited representatives. It is the duty of one and all of us to see that that particular class comes up to the level of the other communities.

So far as backward classes are concerned, I do not want to hazard any opinion. As already indicated, a commission has been appointed by the Government of India, I hope that Commission will take into consideration all the aspects that have been represented by the representatives of several States, representations made by several committees and representations made by several institutions, and then give a proper direction to the Government of India, which will be a beacon light to the several States. Here, I want to mention one particular aspect concerning the backward classes. They are also put on the same level as backward castes. Socially they may enjoy some status; economically and educationally they are as backward as the Scheduled Castes. It is our paramount duty and also of the Government to make certain provisions, in spite of the Commission being there, as per the Constitution, by which their representation in the services should be properly and adequately represented. With these few words, I whole-heartedly support this resolution.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈ ನಿರ್ಣಯವನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ನಾನಂತೂ ಹಿಂದುಳಿದ ಪಂಗಡಕ್ಕೆ ಸೇರಿದವನಲ್ಲ. Classification apart, personally speaking, I do not belong to a backward class. ಹೀಗೆ ಹೇಳುವುದಕ್ಕೆ ನನಗೆ ಎರಡು ಮೂರು ಮುಖ್ಯ ಕಾರಣಗಳಿವೆ. ಅರ್ಥಿಕ ದೃಷ್ಟಿಯಿಂದ ನಾನು ತುಂಬ ಐಶ್ವರ್ಯವಂತನಲ್ಲದಿದ್ದರೂ ತುಂಬ ಹಿಂದುಳಿದವನಲ್ಲ. ಇತರ ಅನೇಕ ಜನರ ಆರ್ಥಿಕ ಸ್ಥಿತಿಗತಿಗಳೊಡನೆ ಹೋಲಿಸಿದರೆ ನಾನು ಹಿಂದುಳಿದವನಲ್ಲ. ಸಾಮಾಜಿಕ ಮತ್ತು ರಾಜಕೀಯ ದೃಷ್ಟಿಯಿಂದಲೂ ನಾನು ಹಿಂದುಳಿದಿಲ್ಲ. ಹೀಗೆಂದ ಮಾತ್ರಕ್ಕೇ ನನ್ನ ಪಂಗಡಕ್ಕೆ ಸೇರಿದ ಕ್ಷತ್ರಿಯರು ಅಥವಾ ಅರಸುಗಳು ಎಲ್ಲರೂ ನನ್ನ ಹಾಗೆಯೇ ಇದ್ದಾರೆಂದು ಭಾವಿಸಬಾರದು. ಮೈಸೂರು ದೇಶದಲ್ಲಿ ಬಹುಶಃ ಅರಸುಗಳೆಂದರೆ, ಅವರು ರಾಜ ಮನೆತನಕ್ಕೆ ಸೇರಿದವರು, ಮಹಾರಾಜರೂ ಇದೇ ಜಾತಿಗೆ ಸೇರಿದವರೆಂದು ಒಂದು ವಿಧದಲ್ಲಿ ಭಾವಿಸಬಹುದು. ವಸ್ತುಸ್ಥಿತಿ ಏನಾಗಿದೆಯೆಂದರೆ, ಸುಮಾರು ಐನೂರು ಆರುನೂರು ವರ್ಷಗಳಿಂದ ಮೈಸೂರಿನಲ್ಲಿ ಅರಸುಗಳೇ ದೊರೆಗಳಾಗಿದ್ದರೂ ಹಳ್ಳಿಗಳಲ್ಲಿ ವಾಸವಾಗಿರುವ ಈ ಜಾತಿಗೆ ಸೇರಿದ ಕೇವಲ ಹತ್ತಾರು ಸಾವಿರ ಜನರ ಆರ್ಥಿಕ ಸ್ಥಿತಿಗತಿಗಳನ್ನು ಮುಂದುವರಿಸುವುದಕ್ಕೆ,

ಅಥವಾ ಉತ್ತಮಗೊಳಿಸುವುದಕ್ಕೆ ಸಾಧ್ಯವಾಗಿಲ್ಲವೆಂದರೆ ತಾವು ಆಶ್ಚರ್ಯಪಡಬಹುದೆಂದು ಭಾವಿಸುತ್ತೇನೆ. ಇದಕ್ಕೆ ಕಾರಣ ಇಷ್ಟು ಹೇಳಬಹುದು. ಯಾವುದೇ ಒಂದು ಸಮಾಜವಾಗಲೀ ಅಥವಾ ಕೋಮಾಗಲೀ ಅದರಲ್ಲಿ ಯಾರೋ ಕೆಲವು ವ್ಯಕ್ತಿಗಳು ದೊಡ್ಡ ದೊಡ್ಡ ಹುದ್ದೆಗಳನ್ನು ಸಂಪಾದನೆ ಮಾಡಿಕೊಂಡು ಮುಂದುವರಿದ ಮಾತ್ರಕ್ಕೇ ಆ ಇಡೀ ಸಮಾಜವೇ ಮುಂದುವರಿದಿದೆ ಎಂದು ಹೇಳುವುದಕ್ಕಾಗುವುದಿಲ್ಲವೆಂಬುದನ್ನು ಹೇಳುತ್ತಿದ್ದೇನೆ. ತರ್ಕಶಾಸ್ತ್ರವನ್ನು ನಾನು ಹೆಚ್ಚಾಗಿ ಓದದೇ ಇದ್ದರೂ, ಅದರಲ್ಲಿ ಮತ್ಸ್ಯನ್ಯಾಯ ಎಂದು ಬರುತ್ತದೆ. ಇದು ಎಲ್ಲರಿಗೂ ತಿಳಿದಿರುವುದೇ ಆಗಿದೆ. ದೊಡ್ಡ ಮೀನು ಸಣ್ಣ ಮೀನನ್ನು ನುಂಗುತ್ತದೆ.

ಹೀಗೆ ಜಾತೀಯ ವಾದದಮೇಲೆ ಸರ್ಕಾರಿ ನೌಕರಿಗಳನ್ನು ಹಂಚಬೇಕೆಂದು ನಾವು ವಾದಮಾಡುತ್ತಿದ್ದೇವೆ. ಆಯಾ ಜಾತಿಯ ಜನಸಂಖ್ಯೆಗನುಗುಣವಾಗಿ ನೌಕರಿಗಳನ್ನು ಹಂಚಬೇಕೆಂದು ಹೇಳುವುದರಲ್ಲಿ ಒಂದು ಎಲ್ಲೆಯನ್ನಿಟ್ಟುಕೊಂಡು ಯೋಚನೆ ಮಾಡುವುದು ಒಳ್ಳೆಯದೆಂದು ನಾನು ಅಭಿಪ್ರಾಯ ಪಡುತ್ತೇನೆ. ಹಾಗೆ ನೌಕರಿಗಳಿಗೆ ಜನರನ್ನು ನೇಮಕಮಾಡಿಕೊಳ್ಳುವ ವಿಚಾರದಲ್ಲಿಯೂ ಕೂಡ ಈಗಾಗಲೇ ಸಮಾಜದಲ್ಲಿ ಯಾರು ಯಾರು ದೊಡ್ಡ ದೊಡ್ಡ ಸ್ಥಾನಗಳನ್ನು ಗಳಿಸಿರುತ್ತಾರೋ ಮತ್ತು ಯಾರು ಯಾರ ಆರ್ಥಿಕಸ್ಥಿತಿಗಳು ಉತ್ತಮಗೊಂಡಿರುತ್ತವೋ ಅಂಥವರ ಮಕ್ಕಳುಗಳಿಗೆ ಮತ್ತು ಸಂಬಂಧಿಗಳಿಗೆ ಹಂಚುವುದಕ್ಕೋಸ್ಕರ ಇದುವರೆಗೂ ನಾವು ಕಾರ್ಯಕಲಾಪಗಳನ್ನು ನಡೆಸುತ್ತಿರುವ ಹಾಗೆ ನನಗೆ ಭಾಸವಾಗುತ್ತಿದೆ. ಆದರೆ ಆ ರೀತಿಯಾಗದೆ ಇರಲಿ ಎಂಬುದೇ ನನ್ನ ಉದ್ದೇಶ. ಹಿಂದುಳಿದ ಜನಾಂಗದವರು ಎಂದು ಹೇಳಿಕೊಳ್ಳುವ ಕಾಲದಲ್ಲಿ—ಮೈಸೂರು ದೇಶದಲ್ಲಿ ಬ್ರಾಹ್ಮಣ ಜನಾಂಗ ಒಂದನ್ನು ಬಿಟ್ಟು ಬಾಕಿ ಎಲ್ಲ ಕೋಮುಗಳವರೂ ಹಿಂದುಳಿದವರೆಂದೇ ಇಲ್ಲಿಯತನಕ ನಾವು ಒಂದು ರೀತಿಯಾಗಿ ವಿಂಗಡಣೆಮಾಡಿಕೊಂಡು ಬಂದಿದ್ದೇವೆ. ಆದರೆ ಈಗ ನಮಗೆ ಸ್ವರಾಜ್ಯ ಲಭಿಸಿದನಂತರ ನಾವು ಇದನ್ನು ಬೇರೊಂದು ದೃಷ್ಟಿಯಿಂದ ನೋಡುವುದು ಒಳ್ಳೆಯದೆಂದು ನಾನು ಅಭಿಪ್ರಾಯ ಪಡುತ್ತೇನೆ.

ನಾವು 'ಹಿಂದುಳಿದ ಜನಾಂಗ' ಎಂದು ಯಾವ ಒಂದು ಜನಾಂಗವನ್ನೇ ಕರೆಯಬೇಕಾಗಿದ್ದರೂ—ಆ ಬಗ್ಗೆ ನಾವು ಅದನ್ನು ಮೂರು ಆಧಾರಗಳ ಮೇಲೆ ಪರಿಶೀಲನೆಮಾಡಿ ನೋಡಬೇಕಾಗಿದೆ. ಮೊದಲನೆಯದಾಗಿ ಅವರ ಆರ್ಥಿಕ ಸ್ಥಿತಿಗತಿ ಏನಿದೆ ಸಮಾಜದಲ್ಲಿ ಅವರ ಸ್ಥಾನಮಾನಗಳೇನಿವೆ. ಮತ್ತು ರಾಜಕೀಯದಲ್ಲಿ ಅವರು ಹಿಂದುಳಿದಿದ್ದಾರೆಯೋ ಅಥವಾ ಮುಂದುವರಿದಿದ್ದಾರೆಯೋ ಎಂಬೀ ಅಂಶಗಳನ್ನು ಆಲೋಚನೆ ಮಾಡತಕ್ಕದ್ದು ಅಗತ್ಯವಾಗಿದೆ.

ಮೊದಲನೆಯದಾಗಿ ಹೇಳಬೇಕೆಂದರೆ—ಈಗ ನಾವು ಹರಿಜನರೆಂದು ಯಾರಿಗೆ ಹೇಳುತ್ತಿದ್ದೇವೆಯೋ ಅವರಿಗೆ ಈಗ ನಮ್ಮ ಹೊಸ ರಾಜ್ಯಾಂಗದಲ್ಲಿ ಒಂದು ರಕ್ಷಣೆಯನ್ನು ಕೊಟ್ಟಿರುವುದರಿಂದ ಅವರು ಈ ದಿವಸ ಒಂದು ಹೆಜ್ಜೆ ಈ ರಾಜಕೀಯದಲ್ಲಿ ಮುಂದೆ ಬರಲು ಸಾಧ್ಯವಾಗಿರುತ್ತದೆ. ಹಾಗೆ ನಾವು ಅವರಿಗೊಂದು ಆ ರೀತಿ ರಕ್ಷಣೆಯನ್ನು ಕೊಡದೆ ಹೋಗಿದ್ದರೆ ಬಹುಶಃ ಈ ಮಾನ್ಯ ಸಭೆಯೊಳಗೆ ಇಂದು ಈ 18 ಜನ ಅನುಸೂಚಿತ ಜಾತಿಯ ಸದಸ್ಯರು ಬಂದು ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುತ್ತಿತ್ತೋ ಇಲ್ಲವೋ ಎಂಬುದನ್ನು ನಾನು ಹೇಳಲಾರೆ. ಹಾಗೆ ರಾಜ್ಯಾಂಗದ ಚೌಕಟ್ಟಿನಲ್ಲಿ ಒಂದು ರಕ್ಷಣೆಗೆ ಅವಕಾಶವನ್ನುಂಟುಮಾಡಿಕೊಟ್ಟಿರುವುದರಿಂದ ಅವರು ಈ ಹೊತ್ತು ಇಲ್ಲಿ ಬಂದು ಕುಳಿತುಕೊಳ್ಳಲು ಅವಕಾಶವಾಯಿತು; ಮತ್ತು ಅವರು ರಾಜಕೀಯದಲ್ಲಿ ಒಂದು ಹೆಜ್ಜೆ ಮುಂದೆ ಬರಲು ಅವಕಾಶವಾಯಿತೆಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಆದರೆ ಮಿಕ್ಕ ಎರಡು ವಿಚಾರಗಳಲ್ಲಿ ಅವರ ಸ್ಥಿತಿಗತಿಗಳೇನಾಗಿರುತ್ತವೆಂಬುದನ್ನು ನೋಡೋಣ. ಆರ್ಥಿಕಸ್ಥಿತಿಗತಿಯಲ್ಲೇ ಆಗಲಿ ಅಥವಾ ಸಮಾಜದಲ್ಲಿ ಒಂದು ಸರಿಯಾದ ಸ್ಥಾನಮಾನವನ್ನು ಗಳಿಸಿಕೊಳ್ಳುವುದರಲ್ಲೇ ಆಗಲಿ ಅವರಿನ್ನೂ ಮುಂದುರಿದಿಲ್ಲವೆಂದು ನನಗಂತೂ ಖಚಿತವಾಗಿ ಅರ್ಥವಾಗಿದೆ. ಇದೆಲ್ಲ ದಿನಚರಿಯಲ್ಲಿ ನಡೆದುಬರುತ್ತಿರುವ ವಿಚಾರ. ಆದರೆ ಇದೇ ರೀತಿಯಾಗಿ ಬಾಕಿ ಜನಾಂಗಗಳವರು "ನಾವೂ ಕೂಡ ಹಿಂದುಳಿದ ಪಂಗಡದವರಾಗಿದ್ದೇವೆ" ಎಂದು ಹೇಳಿಕೊಳ್ಳುತ್ತಿರುವ ವಿಚಾರವೇ ನನಗೆ ಅರ್ಥವಾಗದೆ ಇರುವುದು. ಹೀಗೆ, ಈ ದಿವಸ ಸರ್ಕಾರದವರು ಆ 18 ಜನರನ್ನು ಕರೆತಂದು ಈ ಸಭೆಯಲ್ಲಿ ಕುಳ್ಳಿರಿಸಿದಾಕ್ಷಣಕ್ಕೇ ಅವರ ಬಾಕಿ ಸ್ಥಿತಿಗತಿಗಳೆಲ್ಲಾ ಉತ್ತಮಗೊಂಡವೆಂದು ಹೇಳುವುದಕ್ಕಾಗುವುದಿಲ್ಲ; ಮತ್ತು ಹಳ್ಳಿಗಳಲ್ಲಿರತಕ್ಕವರು ಈ ಹರಿಜನರನ್ನು ಕರೆದುಕೊಂಡುಹೋಗಿ ಮನೆಗಳಲ್ಲಿ ಕುಳ್ಳಿರಿಸಿಕೊಳ್ಳುವುದಿಲ್ಲ. ಸಮಾಜದಲ್ಲಿ ಅವರ ಸ್ಥಿತಿಗತಿಗಳು ಇನ್ನೂ ಹಾಗೆಯೇ ಬಹಳ ಹೀನಸ್ಥಿತಿಯಲ್ಲಿರುತ್ತವೆ. ಅವರಿನ್ನೂ ಬಹಳ ಕೆಳಮಟ್ಟದಲ್ಲೇ ಇದ್ದಾರೆ. ಹಾಗೆ ಇವರಷ್ಟು ಕೀಳುಮಟ್ಟದಲ್ಲಿರತಕ್ಕ ಕೋಮು ಮತ್ತೊಂದಿಲ್ಲವೆಂದು ಹೇಳಬಹುದು.

Sri G. A. THIMMAPPA GOWDA (Arkalgud).—There are other minor communities also.

ಶ್ರೀ ಡಿ. ದೇವರಾಜ ಅರಸ್.—ಇಂದು ದೇಶದಲ್ಲಿ ಇವರಿಗೆ ಇರತಕ್ಕ ಸ್ಥಿತಿ ಎಂದರೆ ಸಮಾಜದಲ್ಲಿ ಇವರಿಗೆ ತೋರಿಸತಕ್ಕಂಥ ಗೌರವ ಅಥವಾ ಒಂದು ಸ್ಥಾನವೇನೆಂಬುದನ್ನು ಯೋಚಿಸಿದರೆ, ಮಿಕ್ಕ ಎಲ್ಲ ಪಂಗಡಗಳವರಿಗೂ ಏನೊಂದು ಸ್ಥಾನಮಾನ ಈ ನಮ್ಮ ಸಮಾಜದಲ್ಲಿ ಲಭಿಸಿದೆಯೋ ಅದು ಇವರಿಗೆ ಎಂದರೆ ಇವೊತ್ತೂ ಸಹ ಹಳ್ಳಿಗಳಲ್ಲಿ ಮಾದಿಗರನ್ನು ಮನೆಯೊಳಗೆ......

Sri B. HUTCHE GOWDA.—Who disputed that fact?

Sri D. DEVARAJ URS.—I have got some object in speaking about these things. Please wait and see what it is. ಹಾಗೆ ಯಾರೂ ಈ ದಿವಸ ಈ ಹರಿಜನರನ್ನು ಕರೆದುಕೊಂಡು ಬಂದು ಮನೆಗಳಲ್ಲಿ ಕುಳ್ಳಿರಿಸಿಕೊಳ್ಳುತ್ತಿಲ್ಲ. ಆ ದೃಷ್ಟಿಯಿಂದ ಹರಿಜನರು ಎಲ್ಲರಿಗಿಂತಲೂ ಹಿಂದುಳಿದಿರತಕ್ಕವರೆಂದು ನಾವೀಗ ಭಾವಿಸಬೇಕಾಗಿದೆ.

ಇನ್ನು ಜನಸಂಖ್ಯೆಯ ಆಧಾರದ ಮೇಲೆ ನೌಕರಿಗಳನ್ನು ಹಂಚುವ ವಿಚಾರ. ಆರ್ಥಿಕ ಸ್ಥಿತಿಗತಿಗಳಲ್ಲಿ ಕೆಲವರು ಹಿಂದುಳಿದಿದ್ದಾರೆ, ಇನ್ನು ಕೆಲವರು ಮುಂದುವರಿದಿದ್ದಾರೆ. ಆದರೆ ಯಾರುಯಾರು ಆರ್ಥಿಕ ಸ್ಥಿತಿಗತಿಗಳಲ್ಲಿ ಮುಂದುವರಿದಿದ್ದಾರೋ ಅಂಥವರೂ ಕೂಡ ಈಗ "ನಾವೂ ಸಹ ಎಲ್ಲ ವಿಚಾರಗಳಲ್ಲಿಯೂ ಹರಿಜನರಂತೆಯೇ ಹಿಂದುಳಿದಿದ್ದೇವೆ" ಎಂದು ಹೇಳುವುದಕ್ಕೆ ಹೊರಟರೆ ಅದು ಸರಿಹೋಗುವುದಿಲ್ಲ. ಅವರೆಲ್ಲರೂ ರಾಜಕೀಯದಲ್ಲೂ ಮತ್ತು ಸಾಮಾಜಿಕದಲ್ಲೂ ಮುಂದುವರಿದವರಾಗಿರುತ್ತಾರೆ. ಆದರೆ ಆರ್ಥಿಕ ವಿಚಾರ ಒಂದರಲ್ಲಿ ಮಾತ್ರ ಮುಂದುವರಿಯದೆ ಹರಿ

(SRI D. DEVARAJ URS)

ಜನರಿಗೆ ಸರಿಸಮಾನರಾಗಿರಬಹುದು. ಹೀಗೆ ಸಮಾಜದಲ್ಲಿ ಇರತಕ್ಕ ಏರುಪೇರುಗಳೇನು ಎಂಬುದನ್ನು ಯೋಚಿಸದೆ ಕೈಬಿಟ್ಟುಕೊಂಡು ಬರಿಯ ಜನ ಸಂಖ್ಯೆಯ ಆಧಾರದ ಮೇಲೆಯೇ ಈ ಸರ್ಕಾರಿ ನೌಕರಿಗಳನ್ನು ಹಂಚುವಂತೆ ಮಾಡಿದಾಕ್ಷಣಕ್ಕೇ ಎಲ್ಲವೂ ಸರಿಹೋಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ನಾವು ಹೊಸ ರಾಜ್ಯಾಂಗದಲ್ಲಿ ಹೇಳಿರುವ ಪ್ರಕಾರ ಜಾತ್ಯಾತೀತ ರಾಷ್ಟ್ರವನ್ನು ನಿರ್ಮಾಣಮಾಡಬೇಕೆಂದು ಒಪ್ಪಿಕೊಂಡಿದ್ದೇವೆ. ಹಾಗೆ ಅದನ್ನು ಒಪ್ಪಿಕೊಂಡನಂತರ ಈ ವಾದವನ್ನು ಪ್ರತಿಪಾದನೆ ಮಾಡಿದರೆ ಒಂದು ಸರಿಯಾದ ಹೊಂದಾವಣಿ ಆಗುವುದಿಲ್ಲ ಮತ್ತು ಸಾಧುವಾದದ್ದೂ ಅಲ್ಲವೆಂದು ಅಭಿಪ್ರಾಯ ಪಡುತ್ತೇನೆ.

ಈ ಷೆಡ್ಯೂಲ್ಡ್ ಪಂಗಡಗಳೆಂದೇನು ಹೇಳುತ್ತೇವೋ ಆ ಒಂದು ಜನಾಂಗಕ್ಕೆ ಒಂದು ಕ್ಲಾಸಿಫಿಕೇಷನ್ ಮಾಡುವಾಗ, ಒಂದು ಸ್ಪೆಷಲ್ ಪ್ರಾವಿಷನ್ ಮಾಡಿ ಉನ್ನತ ಮಟ್ಟಕ್ಕೆ ಅವರನ್ನು ತರಬೇಕೆಂದು ಹೇಳುವಾಗ ಶ್ರೀ ಮಾದಯ್ಯನವರು ಜನಸಂಖ್ಯೆ ಆಧಾರದ ಮೇಲೆ ಪ್ರಾತಿನಿಧ್ಯ ಕೊಡಬೇಕೆಂದು ಹೇಳುವುದಕ್ಕಿಂತ ಇನ್ನೂ ಒಂದು ಹಜ್ಜೆ ಮುಂದೆ ಹೋಗಿದ್ದರೆ ಚೆನ್ನಾಗಿತ್ತು.

ಶ್ರೀ ಎಂ. ಮಾದಯ್ಯ.—On a point of clarification, Sir. ರಾಜ್ಯಾಂಗದ ಮ್ಯಾಂಡೇಟರಿ ವಿಧಿ ಪ್ರಕಾರ ಸಾಕಷ್ಟು ಪ್ರಾತಿನಿಧ್ಯ ವಿಲ್ಲದಿರುವವರಿಗೆ ಮಾತ್ರ ಹುದ್ದೆಗಳನ್ನು ಮೀಸಲಾಗಿಡಬೇಕೆಂದು ಹೇಳಿದೆ. ಎಕನಾಮಿಕ್ ಮತ್ತು ಸೋಷಿಯಲ್ ಕಂಡೀಷನ್ಸ್ ವಿಚಾರ ಹೇಳಿಲ್ಲ. Classes which are not adequately represented in the State services, to that extent alone ಎಂದು ಮಾತ್ರ ಹೇಳಿದೆ.

Sri D. DEVARAJ URS.—That does not bind me to say we may not go a step further instead of on their population only so much *x* or *y*.

ಶ್ರೀ ಎಂ. ಮಾದಯ್ಯ.—ಯಾವುದೇ ಮಾಡಬೇಕಾದರೂ ಜನಾಂಗದ ಆಧಾರದ ಮೇಲೆ ಕೆಲವು ಕಾಲ ಮಾಡಿ ಆ ಮೇಲೆ ನಿಲ್ಲಿಸಬಹುದು.

ಶ್ರೀ ಡಿ. ದೇವರಾಜ ಅರಸ್.—I am going a step further; let my friend understand that. ''ಹೆಚ್ಚಾಗಿ ಮೂರು ವಿಧದಲ್ಲಿ ಹಿಂದುಳಿದಿರುವ ಪ್ರಜೆಗಳು'' ಎಂದು 'ಜನಾಂಗ' ಎಂಬುದಕ್ಕೆ ಬದಲಾಗಿ ಹೇಳಿದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಒಂದು ಮಾತನ್ನು ಈ ಸಭೆಯ ಗಮನಕ್ಕೆ ತರುವುದು ಅನುಚಿತವಾಗಲಾರದು. ಇಂಡಿಯಾದೇಶದಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಎಂದು ಯಾವುದಿದೆಯೋ ಅದರ ಛೇರ್ಮನ್ನರಾದ ಕಾಕಾ ಕಾಳೇಲ್ಕರ್ ಎಂಬುವರು ಬಂದಿದ್ದಾಗ ಒಂದು ವಿಚಾರಹೇಳಿದ್ದರು. ಹಿಂದುಳಿದವರನ್ನು ಮುಂದಕ್ಕೆ ತರುವುದಕ್ಕೆ ಅಥವಾ ಅವರಿಗೆ ಮುಂದಕ್ಕೆ ಬರತ್ತೇವೆಂಬ ನಂಬಿಕೆ ಹುಟ್ಟುವಂತೆ ಮಾಡುವುದಕ್ಕೆ thy need is greater than mine ಎಂಬ ತತ್ವದ ಮೇಲೆ ಮುಂದುವರಿದರೆ ನಾವು ಎಲ್ಲರಿಗೂ ಉತ್ತೇಜನ ಕೊಟ್ಟಂತಾಗುತ್ತದೆ, ಎಲ್ಲರೂ ಮುಂದುವರಿಯುವುದಕ್ಕೆ ಸಾಧ್ಯವಾಗುತ್ತದೆ ಎಂದು ಒಂದು ದೊಡ್ಡ ಮಾತು ಹೇಳಿದ್ದರು. ಅದನ್ನು ಮರೆಯುವಹಾಗಿಲ್ಲ. ಆದ್ದರಿಂದ ಜನಾಂಗದ ಆಧಾರದ ಮೇಲೆ ಮಾಡುವುಕ್ಕಿಂತ ಮುಂದೆ ಹೋಗಬೇಕೆಂದು ಹೇಳುತ್ತೇನೆ.

ಈ ನೌಕರಿಗಳನ್ನು ಹಂಚುವಾಗ ಹಳ್ಳಿಗಾಡಿನಿಂದ ಬರುವವರ ಪ್ರಾತಿನಿಧ್ಯ ಯಾವರೀತಿಯಿದೆ, ಅವರ ಆರ್ಥಿಕ ಸ್ಥಿತಿಗತಿ ಹೇಗಿದೆಯೆಂಬುದನ್ನು ಗಮನದಲ್ಲಿಟ್ಟು, ಯಾರಿಗೆ ದೊಡ್ಡ ದೊಡ್ಡ ಹುದ್ದೆಗಳಲ್ಲಿರುವವರ ಸಂಬಂಧವಿಲ್ಲವೋ, ಪ್ರಭಾವ ಬೀರಿ ಹುದ್ದೆಗಳನ್ನು ಕೊಡಿಸುವವರ ಸಂಬಂಧ ಯಾರಿಗಿಲ್ಲವೋ ಅಂಥವರಿಗೆ, ಹಿಂದುಳಿದಿರುವ ಹಳ್ಳಿಗಾಡಿನ ಜನರಿಗೆ ಈ ಹುದ್ದೆಗಳ ಹಂಚಿಕೆಯಾಗಬೇಕು, ಯಾರ ಪ್ರಭಾವಕ್ಕೂ ಒಳಗಾಗಿ ನೌಕರಿಗಳನ್ನು ಹಂಚಬಾರದು ಎಂದು ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಈ ನಿರ್ಣಯದ ವಿಚಾರವಾಗಿ ನಾನು ಮೊದಲು ಮಾತನಾಡಬೇಕೆಂದಿರಲಿಲ್ಲ. ಆದರೆ ಈಗ ಈ ವಿಷಯ ಮಾತನಾಡಬೇಕಾದುದು ಅವಶ್ಯಕವೆಂದು ಕಂಡುಬಂದುದರಿಂದ ಒಂದೆರಡು ಅಂಶಗಳನ್ನು ತಿಳಿಸಲಿಚ್ಛಿಸುತ್ತೇನೆ. ನಾವು ಈ ಸಭೆಗೆ ಪ್ರತಿನಿಧಿಯಾಗಿ ಬಂದಿರುವುದು ಯಾವುದೋ ಒಂದು ಕೋಮಿನ ಪ್ರತಿನಿಧಿಯಾಗಲ್ಲ. ಎಲ್ಲಾ ಕೋಮಿನ ಪ್ರತಿನಿಧಿಯಾಗಿ, ಎಲ್ಲರ ಹಿತಸಾಧನೆಗಾಗಿ, ಸಂಸ್ಥಾನದ ಹಿತ, ದೇಶದ ಹಿತ ಮುಂದಿಟ್ಟುಕೊಂಡು ನಮ್ಮ ನಮ್ಮ ಚುನಾಯಿತ ಕ್ಷೇತ್ರಗಳಿಂದ ಕೆಲವು ಮೂಲೋದ್ದೇಶಗಳ ಸಾಧನೆಯ ದೃಷ್ಟಿಯಿಂದ ಚುನಾಯಿತರಾಗಿ ಬಂದಿರುತ್ತೇವೆ. ಈ ನಿರ್ಣಯದ ಸಂಬಂಧವಾಗಿ Scheduled Castes ಮತ್ತು Backward Classes ವಿಚಾರದಲ್ಲಿ ನಮಗೆ ಸಂಪೂರ್ಣ ಸಹಾನುಭೂತಿ ಇದೆ. ನಾವು ಈ ಆಶೋತ್ತರಗಳನ್ನು ಸಾಧಿಸಲು ಯಾವ ಭಾವನೆಗಳನ್ನಿಟ್ಟುಕೊಂಡು, ಯಾವ ಮಾರ್ಗವನ್ನು ಅನುಸರಿಸುತ್ತೇವೆ ಎಂಬುದನ್ನು ನೋಡಬೇಕು. ಮೊದಮೊದಲು ಪ್ರತಿಯೊಂದು ಕೋಮಿನವರಿಗೂ ನೌಕರಿಗಳಲ್ಲಿ ಸಮಾನ ಅವಕಾಶವಿರಬೇಕೆಂಬುದು ಗೋಚರವಾಗಿ ಈಗೀಗ ಆಯಾ ಕೋಮಿನ ಪ್ರಜಾಸಂಖ್ಯೆಗನುಗುಣವಾಗಿ ನೌಕರಿಗಳು ಹಂಚಿಕೆಯಾಗಬೇಕೆಂಬ ಕೂಗು ಬರುತ್ತಿದೆ. ಇದೇ ಸಂದರ್ಭದಲ್ಲಿ ವಿದ್ಯಾಭ್ಯಾಸದಲ್ಲಿಯೂ ಪ್ರತಿಯೊಬ್ಬರಿಗೂ ಸಮಾನ ಅವಕಾಶ ದೊರೆಯಬೇಕು, ವಿದ್ಯಾ ಅರ್ಹತೆಯಲ್ಲಿ ಪ್ರತಿಯೊಬ್ಬರೂ ಸಮಾನತೆ ಪಡೆದಿರಬೇಕು ಎಂಬುದೂ ಮುಖ್ಯವೆಂಬುದನ್ನು ನಾವು ಮನಗಾಣಬೇಕಾಗಿದೆ. ಈಗ ವಿದ್ಯಾ ಅರ್ಹತೆಯಲ್ಲಿ ಎಲ್ಲಾ ಕೋಮಿನ ಜನರಿಗೂ ಸರಿಸಮಾನತೆ ಇಲ್ಲದಿರುವುದರಿಂದ ಈ ಬಗ್ಗೆ ವ್ಯತ್ಯಾಸ ಕಂಡುಬರುತ್ತಿದೆ. ಹಿಂದೆ ಈ ವಿಚಾರದಲ್ಲಿ ಸರ್ಕಾರದನೀತಿ ಸರಿಯಾಗಿಲ್ಲವೆಂದು ಸಹ ಸರ್ ಎಂ. ವಿಶ್ವೇಶ್ವರಯ್ಯನವರು ಟೀಕೆಮಾಡಿದ್ದರು. ಎಲ್ಲಾ ಕೋಮಿನವರಿಗೂ ವಿದ್ಯಾಭ್ಯಾಸದ ವಿಚಾರದಲ್ಲಿ ಮುಂದೆ ಬರುವಹಾಗೆ ಬೇಕಾದಷ್ಟು ಸೌಲಭ್ಯ ಕೊಡಬೇಕು, ಹೀಗಾದರೇ ಬಂದಾನೊಂದು ಕಾಲದಲ್ಲಿ ಅಂದರೆ 25-30 ವರ್ಷಗಳ ಮೇಲಾದರೂ ಅವರೆಲ್ಲರಲ್ಲಿಯೂ ಸರಿಸಮಾನತೆಯೆಂಬುದು ಬರುತ್ತದೆ ಎಂಬುದು ಅವರ ಅಭಿಪ್ರಾಯವಾಗಿತ್ತು. ಸರ್ಕಾರದ ನೌಕರಿಗಳಲ್ಲಿ ಕೋಮುವಾರು ದಾಮಾಷಾ ತತ್ವವು ಸರಿಯಾದುದಲ್ಲವೆಂದು ವಿರೋಧಿಸಿ ತಮ್ಮ ದಿವಾನಗಿರಿಗೆ ಸರ್ ಎಂ. ವಿಶ್ವೇಶ್ವರಯ್ಯನವರು ರಾಜೀನಾಮೆ ಕೊಟ್ಟ ಅಂಶವನ್ನೇ ಈ ಸಮಯದಲ್ಲಿ ಈ ಸಭೆಯ ನೆನಪಿಗೆ ತರುತ್ತೇನೆ. ಎಲ್ಲಾ ಕೋಮಿಗೂ ವಿದ್ಯಾಭ್ಯಾಸ ಸೌಕರ್ಯದ ವಿಚಾರದಲ್ಲಿ ಒಂದೇವಿಧವಾದ ಸೌಲಭ್ಯವಿರಬೇಕು. ಪ್ರತಿಕೋಮಿಗೂ, ಈ ಅರ್ಹತೆಯನ್ನು ದೃಷ್ಟಿಯಲ್ಲಿಟ್ಟುಕೊಂಡರೆ ಆಯಾ ಜನಸಂಖ್ಯೆಗೆ ಅನುಗುಣವಾಗಿ ಪ್ರಾತಿನಿಧ್ಯ ದೊರಕಿಸಿಕೊಡುವುದು practicable ಆಗಿರುತ್ತದೆಯೇ ಎಂಬುದನ್ನು ನಾವು

ಮಾನಗಾಣಬೇಕಾದರೆ ಈ ಸಮಸ್ಯೆಯನ್ನು ಬಗೆಹರಿಸಲೋಸುಗವೇ ಇಂಡಿಯಾ ಸರ್ಕಾರದವರು Backward Classes Commission ಎಂಬುದನ್ನು ಕಳುಹಿಸಿದ್ದುದು.

ಇದರಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು. ಷೆಡ್ಯೂಲ್ಡ್ ಕ್ಲಾಸ್ ವಿಷಯವನ್ನು ಪರ್ಯಾಲೋಚಿಸುವಾಗ ಹರಿಜನರು ಮತ್ತು ಕ್ಯಾಸ್ಟ್ ಹಿಂದೂಗಳು ಎಂಬುದಾಗಿ ಎರಡು ವಿಧದಲ್ಲಿ ನಾವು ಭಾವನೆ ಮಾಡಬೇಕು. ಪಂಚಮರು ಆದಿಕರ್ನಾಟಕರು ಅಥವಾ ಹರಿಜನರು ಎನ್ನುವವರದು ಒಂದು ಪಂಗಡ, Caste Hindus ಎನ್ನುವವರದೇ ಬೇರೆ ಒಂದು ಗುಂಪು. ನಮ್ಮ ಜನಾಂಗದಲ್ಲಿ ಶೇಕಡ 20 ಭಾಗಯಿರತಕ್ಕ ಈ ಜನರು ಎಲ್ಲಾ ರೀತಿಯಿಂದಲೂ, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ವಿದ್ಯಾಭ್ಯಾಸದಲ್ಲಿ ಬಹಳ ಹಿಂದುಳಿದಿದ್ದಾರೆ ಎಂದು ಹೇಳಿ ಅವರು ಇತರರಂತೆಯೇ ಒಂದು ಸ್ಥಾನವನ್ನು ಸಂಪಾದನೆಮಾಡಿಕೊಳ್ಳಬೇಕೆಂಬ ದೃಷ್ಟಿಯಿಂದ ನಮ್ಮ ರಾಜ್ಯಾಂಗದಲ್ಲಿ ಅವರಿಗೆ 10 ವರ್ಷ ಕಾಲ ರಿಸರ್ವೇಷನ್ ಕೊಟ್ಟರು. ಇವೊತ್ತಿನ ದಿವಸ ನಾವು ನಮ್ಮ ಸಂಸ್ಥಾನದಲ್ಲಿ ಶೇಕಡ 20 ಭಾಗ ಈ ಜನ ಇದ್ದಾರೆಯೆಂದರೆ ಪ್ರಜಾಪ್ರಭುತ್ವ ಪದ್ಧತಿಗನುಗುಣವಾಗಿ ಲೆಜಿಸ್ಲೆಟಿವ್ ಅಸೆಂಬ್ಲಿ ಮತ್ತು ಪಾರ್ಲಿಮೆಂಟಿನಲ್ಲಿ ಶೇಕಡ 20 ರಷ್ಟು ಸ್ಥಾನ ಅವರಿಗಿರಬೇಕೆಂಬ ತತ್ವವನ್ನು ಸಾಧಿಸಿದ್ದೇವೆ. ಮುಂದೆ 10 ವರ್ಷ ಆದಮೇಲೆ ಇದೇ ರೀತಿ ರಿಸರ್ವೇಷನ್ ಕೊಡುವುದಕ್ಕೆ ಸಾಧ್ಯವಿಲ್ಲ. ತಮ್ಮಪಕ್ಷಕ್ಕೆ ತಾವೇ ಇತರರ ಮಟ್ಟಕ್ಕೆ ಬರಬೇಕೆಂಬುದಾಗಿ ಮುಖಂಡರು ಹೇಳಿದ್ದಾರೆ. ಆದ್ದರಿಂದ ಈ ವಿಷಯವನ್ನು ಆಲೋಚನೆ ಮಾಡುವಾಗ ನಾವು ಈ ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಷೆಡ್ಯೂಲ್ಡ್ ಕ್ಲಾಸ್ ಇವೆರಡನ್ನೂ ಒಟ್ಟಿಗೆ ಸೇರಿಸಬಾರದು. ಷೆಡ್ಯೂಲ್ಡ್ ಕ್ಲಾಸನ್ನು ಪ್ರತ್ಯೇಕವಾಗಿಟ್ಟುಕೊಂಡು ಅವರಿಗೆ ವಿಶೇಷವಾದ ಸೌಲಭ್ಯಗಳನ್ನು ಕೊಡುವುದು ಅತ್ಯಂತ ಅಗತ್ಯ. ಇದು ನಮ್ಮ ರಾಜ್ಯಾಂಗದಲ್ಲಿ ಸ್ಪಷ್ಟವಾಗಿ ತಿಳಿಸಿದೆ.

ಇನ್ನೊಂದು ವಿಷಯವನ್ನು ಆಲೋಚನೆ ಮಾಡಬೇಕು. ಸರ್ಕಾರಿ ನೌಕರಿ ವಿಷಯದಲ್ಲಿ ಈಗ ಪೂರ್ವದ ಭಾವನೆ ನಮಗೆ ಇಲ್ಲವೇ ಇಲ್ಲ. ಪೂರ್ವದಲ್ಲಿ ಇದ್ದದ್ದು ಡೆಮಾಕ್ರೆಸಿ ಅಲ್ಲ, ಬ್ಯೂರಾಕ್ರೆಸಿ. ಆ ಕಾಲದಲ್ಲಿ ಒಬ್ಬ ಸರ್ಕಾರಿ ನೌಕರ, ಎಂದರೆ, ಉದಾಹರಣೆಗೆ ಒಬ್ಬ ಶೇಕದಾರ ಅಥವಾ ಅಮಲ್ದಾರನಿಗೆ ವಿಶೇಷವಾದ ಅಧಿಕಾರವಿತ್ತು. ಅದೇ ಇವೊತ್ತಿನ ದಿವಸ Heads of Departments ತೆಗೆದುಕೊಳ್ಳೋಣ. 1,500 ರೂಪಾಯಿ ಸಂಬಳ ತೆಗೆದುಕೊಳ್ಳುವ ಸರ್ಕಾರಿ ಅಧಿಕಾರಿಗೆ ಏನು ಅಧಿಕಾರ ಇದೆ? ಹೆಚ್ಚಿನ ಅಧಿಕಾರ ಏನೇನೂ ಇಲ್ಲ. ನಮ್ಮ ಸಮಾಜದಲ್ಲಿ ಅಸೆಂಬ್ಲಿ ಮೆಂಬರಿಗೆ ಇರತಕ್ಕ ಒಂದು ಸ್ಥಾನವೂ ಸಹ ಸರ್ಕಾರಿ ಅಧಿಕಾರಿಗೆ ಇಲ್ಲ. ಅಷ್ಟೇ ಅಲ್ಲದೆ ಆರ್ಥಿಕವಾಗಿಯೂ ಕೂಡ ಅವರಿಗೆ ಹಣ ಕಡಿಮೆಯಾಗಿದೆ. ಇವೊತ್ತಿನ ದಿವಸ ಸಾಮಾನ್ಯವಾದ ಒಬ್ಬ ವ್ಯಾಪಾರಿ ಬುದ್ಧಿವಂತಿಕೆಯಿಂದ ವ್ಯಾಪಾರ ಮಾಡಿದರೆ ಅವರು 10 ವರ್ಷದಲ್ಲಿ ಮಾಡುವ ಸಂಪಾದನೆಯನ್ನು ಒಂದೇವರ್ಷದಲ್ಲಿ ಇವನು ಸಂಪಾದನೆ ಮಾಡುತ್ತಾನೆ.

Sri A. BHEEMAPPA NAIK (Molakalmuru).—Does Sri P. R. Ramaiya want the Minister to answer ?

Sri P. R. RAMAIYA.—I am on my legs, Sir, I can only be controlled by the Speaker. ಅದ್ದರಿಂದ ನಮ್ಮ ಜನಗಳ ಮನಸ್ಸನ್ನು ತಿರುಗಿಸಬೇಕು. ಸರ್ಕಾರಿ ನೌಕರಿ ವಿಷಯದಲ್ಲಿ ಯಾವ ಒಂದು ಅಭಿಪ್ರಾಯ ಇದೆ ಅದನ್ನು ತಿರುಗಿಸಿದ ಹೊರತು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಉದ್ಧಾರವಾಗುವುದಿಲ್ಲ. ಇವೊತ್ತಿನ ದಿವಸ ಅಧಿಕಾರಿಗಳ ಸಂಬಳ, ಅವರಿಗೆ ಇರತಕ್ಕ ಅಧಿಕಾರ......

Sri A. BHEEMAPPA NAIK.—Sir, the House closes at One of the Clock. It is only one minute more.

Sri P. R. RAMAIYA.—I do not want to be interrupted, Sir. ಈ ವಿಷಯದಲ್ಲಿ ನಾವು ಒಂದು ನೂತನವಾದ ಮನೋಭಾವ ಹೊಂದದಿದ್ದರೆ ಈ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕಾಗುವುದಿಲ್ಲ ಮತ್ತು ಸರ್ಕಾರಿ ನೌಕರಿ ವಿಷಯದಲ್ಲಿರತಕ್ಕ ಮೋಹವನ್ನು ಕಡಮೆಮಾಡಿದ ಹೊರತು ನಮ್ಮ ಡೆಮಾಕ್ರೆಸಿ ಉದ್ಧಾರವಾಗುವುದಿಲ್ಲ. ಆದ್ದರಿಂದ ಸರ್ಕಾರಿ ನೌಕರಿ ವಿಷಯದಲ್ಲಿ ಹಿಂದೆ ಯಾವ ಒಂದು ಮೋಹ ಇತ್ತೋ ಆ ಮೋಹ ಕಡಮೆಯಾಗಬೇಕು. ಆ ಉದ್ದೇಶವನ್ನು ನೆರವೇರಿಸುವುದಕ್ಕೆ ಯಾವ ನೀತಿಯನ್ನನುಸರಿಸಬೇಕೆಂಬುದನ್ನು ಈ ಸಭೆ ಪುನರ್ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲಿರುವುದು ಎರಡು ವಿಷಯ. ಬ್ಯಾಕ್ ವರ್ಡ್ ಕ್ಲಾಸ್ ಎಂಬುದನ್ನು ಷೆಡ್ಯೂಲ್ಡ್ ಕ್ಲಾಸ್‌ಗೆ ಸೇರಿಸಬಾರದು. ಷೆಡ್ಯೂಲ್ಡ್ ಕ್ಲಾಸ್‌ನ್ನೇ ಪ್ರತ್ಯೇಕವಾಗಿಟ್ಟು ಅವರಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಸೌಲಭ್ಯಗಳನ್ನು ಒದಗಿಸಿ ಅವರನ್ನು ಮೇಲಕ್ಕೆ ತರುವುದು ನಮ್ಮ ಕರ್ತವ್ಯ. ಅದೇ ರೀತಿ ಬ್ಯಾಕ್‌ವರ್ಡ್ ಕ್ಲಾಸ್ ಇತ್ಯಾದಿಯಾಗಿ ಪ್ರತಿಯೊಂದು ಕೋಮಿಗೂ ಜನಸಂಖ್ಯೆಗನುಗುಣವಾಗಿ ದಾಮಾಷಾ ಪ್ರಕಾರ ಸರ್ಕಾರಿ ನೌಕರಿಯನ್ನೊದಗಿಸುವುದಕ್ಕಾಗುವುದಿಲ್ಲ. ಹಾಗೆ ಒದಗಿಸಬೇಕಾದರೆ ಇನ್ನೂ ಹತ್ತು ವರ್ಷ ಬೇಕಾಗುತ್ತದೆ. ನಾನು ಈ ನಿರ್ಣಯದಲ್ಲಿ ಅಡಕವಾಗಿರುವ ವಿಷಯದ ಬಗ್ಗೆ ಬಹಳ ಸಹಾನುಭೂತಿಯನ್ನು ಹೊಂದಿದ್ದೇನೆ. ನಾವು ನಮ್ಮ ರಾಜ್ಯಾಡಳಿತದಲ್ಲಿ, ನಮ್ಮ ದೇಶದಲ್ಲಿ casteless society ಎಂಬ ಒಂದು ಹೊಸ ಜನಾಂಗವನ್ನೇ ನಿರ್ಮಾಣಮಾಡಬೇಕೆಂದು ಸಂಕಲ್ಪಮಾಡಿದ್ದೇವೆ. ಆ ಉದ್ದೇಶವನ್ನು ನೆರವೇರಿಸಬೇಕಾದರೆ ಜನಗಳಲ್ಲಿ ವಿದ್ಯಾಭ್ಯಾಸದ ಮಟ್ಟವನ್ನು ಹೆಚ್ಚುಮಾಡುವುದರ ಕಡೆಗೆ ಗಮನ ಕೊಡಬೇಕು. ಮುಖ್ಯವಾಗಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರ ವಿಷಯದಲ್ಲಿ ಅವರಿಗೆ ಎಲ್ಲರೂ ಸೇರಿ ಆದಷ್ಟು ಮಟ್ಟಿಗೆ ಪ್ರೋತ್ಸಾಹ ಕೊಡಬೇಕೆಂಬುದಾಗಿ ಒತ್ತಾಯಮಾಡಿ ಹೇಳುತ್ತೇನೆ.

1 P.M.

*ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ–ಅನುಸೂಚಿತ ಜಾತಿಗಳು).—ಸ್ವಾಮಿ, ಈ ನಿರ್ಣಯದ ವಿಚಾರವಾಗಿ ಮಾತನಾಡುತ್ತಾ ಮಾನ್ಯ ಸದಸ್ಯರುಗಳು ಹರಿಜನರ ವಿಷಯದಲ್ಲಿ ತೋರಿಸಿರತಕ್ಕ ಸಹಾನುಭೂತಿಗೆ ನಾನು ಅವರಿಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಮಾನ್ಯ ಸದಸ್ಯರುಗಳೆಲ್ಲರೂ ಬೇಕಾದಹಾಗೆ ಎಲ್ಲಾ ವಿವರಗಳನ್ನೂ ತಿಳಿಸಿದ್ದಾರೆ. ಆದ್ದರಿಂದ ನಾನು ಮತ್ತೆ ಅವುಗಳನ್ನು ಹೇಳದೆ, ಸರ್ಕಾರದವರು ಈಬಗ್ಗೆ ಯಾವರೀತಿ ಪ್ರಯತ್ನಪಡಬೇಕೆಂಬ ವಿಷಯದಲ್ಲಿ ಮಾತ್ರ ಒಂದು ಮಾತು ಹೇಳಬಯಸುತ್ತೇನೆ. ಈಗ ಪಬ್ಲಿಕ್ ಸರ್ವಿಸ್‌ನಲ್ಲಿ ಶೇಕಡಾವಾರು ಎಷ್ಟು ಸಂಖ್ಯೆಯದೆಯೆಂಬ ಬಗ್ಗೆ ಅಂಕಿಅಂಶಗಳನ್ನು ತಿಳಿಸಿದ್ದಾಗಿದೆ. ಅದರ ಪ್ರಕಾರ 1921ನೆಯ ಇಸವಿಯಲ್ಲಿ ಪ್ರಾರಂಭ

(ಶ್ರೀ ಎಂ. ಚಿಕ್ಕಲಿಂಗಯ್ಯ.)

ಹಾದುದು ಈವರೆಗೆ 31 ವರ್ಷಗಳಾದರೂ ಶೇಕಡಾ ವಾರು ಯಾವ ಮಟ್ಟಕ್ಕೆ ಬಂದಿದೆ ಎಂಬುದನ್ನು ಯೋಚನೆ ಮಾಡಿದರೆ, ಶ್ರೀ ಹುಚ್ಚೇಗೌಡರು ಹೇಳಿದ ಹಾಗೆ, ನಮ್ಮ ಜನಸಂಖ್ಯೆಯ ದಾಮಾಷಾ ಅಂಕಿ ಯನ್ನು ಮುಟ್ಟಬೇಕಾದರೆ ಇನ್ನೂ ಎಷ್ಟೋ ವರ್ಷ ಗಳು ಬೇಕಾಗುತ್ತವೆ ; ಆ ಮಟ್ಟವನ್ನು ಮುಟ್ಟುತ್ತೇ ವೆಯೇ ಎಂಬ ಅನುಮಾನ ಬಂದಿದೆ. ಈ ಅಂಶವನ್ನು ಮನಗಂಡು ನೀವುಗಳು ದೂರಾಲೋಚನೆ ಮಾಡಿ ಆದಷ್ಟು ಇವರುಗಳಿಗೆ promotion ಕೊಟ್ಟು ಇವರಲ್ಲಿ ಶೇಕಡಾವಾರು ಸಂಖ್ಯೆಯನ್ನು ಜಾಸ್ತಿಮಾಡಬೇಕು ; ಹೀಗೆ ಮಾಡಿದರೇನೇ ಅವರಲ್ಲಿ ತೃಪ್ತಿ ಬರುತ್ತದೆಂಬ ಅಂಶವನ್ನು ನಿಮ್ಮ ಮುಂದಿಡುತ್ತಾ ಒಂದಂಶವನ್ನು ಹೇಳಬಯಸುತ್ತೇನೆ. ಈಗ ನೀವು ಪರದೇಶಕ್ಕೆ ಹೋಗಿ ಓದಿಕೊಂಡು ಬಂದಿರುವವರಿಗೆ ಎಷ್ಟೋ ವಿಷಯ ಗಳಲ್ಲಿ ವಿಶೇಷ ಗಮನವನ್ನು ಕೊಟ್ಟು ಸ್ಪೆಷಲ್ ಗ್ರೇಡು ಗಳನ್ನು ದಯಪಾಲಿಸಿಲ್ಲವೇ ? ಐ. ಎ. ಎಸ್. ಸ್ಥಾನ ಗಳಿಗೆ ತೆಗೆದುಕೊಳ್ಳುವಾಗ 8 ವರ್ಷ, 9 ವರ್ಷ ಕೆಲಸ ಮಾಡಿರುವ ಡೆಪ್ಯುಟಿ ಕಮಿಷನರುಗಳನ್ನು ಐ.ಎ.ಎಸ್‌ಗೆ ತೆಗೆದುಕೊಂಡು 25 ವರ್ಷ ಕೆಲಸಮಾಡಿರುವವರ ನ್ನೆಲ್ಲಾ ಡೆಪ್ಯುಟಿ ಕಮಿಷನರಾಗಿ ಮಾಡಿದ್ದಾರೆ. ಅತೃಪ್ತಿಯುಂಟಾಗುವುದಿಲ್ಲವೇ ? ಇವನ್ನೆಲ್ಲಾ ತಾವು ಕೂಲಂಕಷವಾಗಿ ಆಲೋಚನೆ ಮಾಡಬೇಕು. ಆದ್ದ ರಿಂದ ನಮ್ಮಲ್ಲಿ ಶೇಕಡಾವಾರು ಸಂಖ್ಯೆಯನ್ನು ಜಾಸ್ತಿ ಮಾಡಬೇಕಾದರೆ, ಅವರಿಗೆ ಪ್ರಮೋಷನ್‌ನಲ್ಲಿ ರಿಯಾ ಯಿತಿ ತೋರಿಸುವ ಹಾಗೆ ಸ್ಪೆಷಲ್ ರೂಲ್ಸ್‌ಗಳನ್ನು ಮಾಡಬೇಕು. ಬರೀ ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಂದು ಇಲ್ಲ ಹೇಳಿದ್ದರೂ ಬೇರೆ ನಿಮ್ನ ಪಂಗಡಗಳವರಿಗೂ ಸ್ಪೆಷಲ್ considerationನ್ನು ತೋರಿಸಿ, ರಿಕ್ರೂಟ್‌ಮೆಂಟ್ ವಿಷಯದ ಜೊತೆಗೆ ಪ್ರಮೋಷನ್ ವಿಷಯದಲ್ಲೂ ಕೂಡ ರಿಯಾಯಿತಿ ತೋರಿಸುವ ಹಾಗೆ ಸ್ಪೆಷಲ್‌ರೂಲ್ಸ್ ಮಾಡಿ ಇವರನ್ನೂ ಒಂದು ಮಟ್ಟಕ್ಕೆ ತರಬೇಕೆಂದು ಹೇಳಿ ಸಲಹೆಕೊಡುತ್ತೇನೆ.

Sri M. MADIAH.—On a point of information. In the end the mover of the resolution will have to reply.

Mr. SPEAKER.—If the mover so desires, he may reply at this stage, not after the Minister's reply. Though the resolution stands in your name, it was moved by Sri Prabhakar.

Sri M. MADIAH.—On behalf of the mover, I want to reply.

Mr. SPEAKER.—I have no objection, but this will not be creating a good precedent. Sri Prabhakar, if you want to make a reply, you may do so now.

ಶ್ರೀ ಕೆ. ಪ್ರಭಾಕರ್.—ಸ್ವಾಮಿ, ಇದುವರೆಗೂ ಈ ಸಭೆಯಲ್ಲಿ ಈ ನಿರ್ಣಯದ ವಿಷಯದಲ್ಲಿ ನಡೆದಿರತಕ್ಕ ಭಾಷಣಗಳನ್ನು ಸಾಧ್ಯವಾದಮಟ್ಟಿಗೂ ನಾನು ಅರ್ಥಮಾಡಿಕೊಂಡಿದ್ದೇನೆ. ಅದನ್ನು ಕೇಳಿದ್ದರಲ್ಲಿ, ಸರ್ಕಾರದವರು ಈ ನಿರ್ಣಯವನ್ನು ಅನುಸರಿಸಿ ಕಾರ್ಯಗತಮಾಡುವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲವೆಂದು ತಿಳಿದುಬಂದಿದೆ. ಅದೇ ಪ್ರಕಾರ ಅವರು ಬೇಗ ಕಾರ್ಯಗತ ಮಾಡುತ್ತಾರೆಂಬ ಆಶೋತ್ತರವ ನ್ನಿಟ್ಟುಕೊಂಡು ಇನ್ನು ಹೆಚ್ಚಿಗೆ ತರ್ಕದ ಅವಶ್ಯಕತೆ ಯಿಲ್ಲವೆಂದು ಭಾವಿಸಿ ನಾನೇನೂ ಈ ವಿಷಯದಲ್ಲಿ ಹೇಳಬಯಸುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಒಂದು ಗಂಟೆಯಾಗಿದೆ. ಆದುದರಿಂದ ನಾನು ಹೇಳಬೇಕಾದುದನ್ನು ಬಹಳ ಸಂಕ್ಷೇಪವಾಗಿ ಹೇಳಬೇಕೆಂದಿದ್ದೇನೆ. ರಾಜ್ಯಾಂಗದ ವಿಧಿಯ ಪ್ರಕಾರ, ಈಗ ನಿಮ್ನ ತರಗತಿಯವರಿಗೆ ಸರ್ಕಾರಿ ನೌಕರಿಯಲ್ಲಿ ಸಾಕಷ್ಟು ಪ್ರಾತಿನಿಧ್ಯವಿಲ್ಲ. ಹಿಂದುಳಿದ ಕೋಮಿನ ವರಿಗೂ ಇಲ್ಲ. ಆದಕಾರಣ ಅವರವರ ಪ್ರಜಾಸಂಖ್ಯೆ ಗನುಗುಣವಾಗಿ ನೌಕರಿಗಳನ್ನು ಕೊಡಬೇಕೆಂಬುದೇ ಈ ನಿರ್ಣಯದ ಸಾರಾಂಶ. ಹಿಂದುಳಿದ ಪಂಗಡದವ ರಿಗೂ ಮತ್ತು ನಿಮ್ನತರಗತಿಯವರಿಗೂ ಸರ್ಕಾರಿ ನೌಕರಿಯಲ್ಲಿ ಸರಿಯಾದ ಪ್ರಾತಿನಿಧ್ಯ ಕೊಡುವ ವಿಚಾರ ದಲ್ಲಿ ರಾಜ್ಯಾಂಗದಲ್ಲಿ ಕೆಲವು ನಿಯಮಗಳು ಅಡಕ ವಾಗಿವೆ. ಮೊದಲನೆಯದಾಗಿ ರಾಜ್ಯಾಂಗದ 16 ಮತ್ತು 38ನೆಯ ವಿಧಿಗಳನ್ನು ನೋಡುವುದಾದರೆ, 16ನೆಯ ವಿಧಿಯ ಪ್ರಕಾರ ಹಿಂದುಳಿದ ಜನಾಂಗದವ ರಿಗೆ ಸರ್ಕಾರಿ ನೌಕರಿಯಲ್ಲಿ ಸರಿಯಾದ ಪ್ರಾತಿನಿಧ್ಯ ವಿಲ್ಲದಿದ್ದರೆ, ಅಂಥವರಿಗೆ ಸರ್ಕಾರದವರು ಕೆಲವು ನೌಕರಿಗಳನ್ನು ಮೀಸಲಾಗಿಡಬಹುದೆಂದಿದೆ. 335ನೆಯ ವಿಧಿಯಲ್ಲಿ ಸರ್ಕಾರಿ ನೌಕರಿಗಳಿಗೆ ನೇಮಕಮಾಡು ವಾಗ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಜನಾಂಗಗಳಿಗೆ ಸೇರಿದ ಜನರ ಹಕ್ಕುಬಾಧ್ಯತೆ ಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ವಿಧಾಯಕ ವಾಗಿದೆ. ಮೈಸೂರು ಸರ್ಕಾರದವರು ಮೊದಲ ನಿಂದಲೂ ಹಿಂದುಳಿದವರಿಗೆ ಮತ್ತು ಷೆಡ್ಯೂಲ್ಡ್ ಪಂಗಡ ದವರಿಗೆ ಸಾಕಷ್ಟು ಪ್ರಾತಿನಿಧ್ಯಕೊಡುವುದರಲ್ಲಿ ಸಹಾನು ಭೂತಿಯುತವಾದ ನೀತಿಯನ್ನನುಸರಿಸಿಕೊಂಡುಬರು ತ್ತಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಮಾದಯ್ಯ ನವರೂ, ಶ್ರೀ ಪ್ರಭಾಕರ್ ಅವರೂ ಮಾತನಾಡ ಬೇಕಾದರೆ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವ ದಕ್ಕಿಂತ ಮುಂಚೆ ಹಿಂದಿದ್ದ ಸರ್ಕಾರಗಳು ನಿಮ್ನ ತರಗತಿಯವರು ಮತ್ತು ಹಿಂದುಳಿದ ಪಂಗಡ ಗಳವರ ವಿಚಾರದಲ್ಲಿ ಸಹಾನುಭೂತಿಯುತ ವಾದ ನೀತಿಯನ್ನನುಸರಿಸಿಕೊಂಡು ಬರುತ್ತಿದ್ದರು, ಆದರೆ ಈಗ ಅದು ಕಡಮೆಯಾಗಿದೆ ಎಂಬ ಭಾವನೆ ಯನ್ನು ವ್ಯಕ್ತಪಡಿಸಿದರು.....

ಶ್ರೀ ಕೆ. ಪ್ರಭಾಕರ್.—ಕಡಮೆ ಎಂದಲ್ಲ, ಹೆಚ್ಚಾ ಗಿಲ್ಲ ಎಂಬುದು ನನ್ನ ಅಭಿಪ್ರಾಯ.

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಹಾಗೆ ಅರ್ಥ ವಾಯಿತು. ಹರಿಜನರು ಯಾವಾಗಲೂ ಕಾಂಗ್ರೆಸ್ಸಿಗೆ ಚಿರಋಣಿಗಳಾಗಿರಬೇಕಾಗಿರುವುದಕ್ಕೆ ಸಾಕಷ್ಟು ಕಾರಣಗಳಿವೆ. ಕಾಂಗ್ರೆಸ್‌ನಿಂದ ಈ ದಿವಸ...

Sri M. MADIAH.—They have discharged their duty and in turn we are grateful to all of them.

ಶ್ರೀ ಕಡಿದಾಳ್ ಮಂಜಪ್ಪ.—ಕಾಂಗ್ರೆಸ್ ಸಂಸ್ಥೆ ಮಹಾತ್ಮಾ ಗಾಂಧಿಯವರ ನಾಯಕತ್ವದಲ್ಲಿ......

ಶ್ರೀ ಬಿ. ಹುಚ್ಚೇಗೌಡ.—By their right they are here. ಪ್ರತಿಯೊಬ್ಬನಿಗೂ ಓಟು ಕೊಡುವ ಹಕ್ಕಿದೆ. ಯಾರೂ ದತ್ತಿಯನ್ನು ಕೊಡ ಬೇಕಾಗಿಲ್ಲ......

Mr. SPEAKER.—When the Hon'ble Minister is making a speech, unless he

yields, no other Hon'ble Member can interrupt, unless there is a point of order.

ಶ್ರೀ ಕಡಿದಾಳ್ ಮಂಜಪ್ಪ.— I am not yielding. ಮಹಾತ್ಮಾ ಗಾಂಧಿಯವರ ನಾಯಕತ್ವದಲ್ಲಿ ಸ್ವಾತಂತ್ರ್ಯ ಸಂಗ್ರಾಮವನ್ನು ಪ್ರಾರಂಭಮಾಡಿದಾಗಿನಿಂದಲೂ ಕಾಂಗ್ರೆಸ್‌ನವರು ಹರಿಜನರ ವಿಷಯದಲ್ಲಿ ಬಹಳ ಆಸಕ್ತಿ ವಹಿಸಿದ್ದಾರೆ. ಯಾವ ಶಾಸನ ಸಭಾ ಸದಸ್ಯರೂ ಕಾಂಗ್ರೆಸ್ಸಿಗೆ ಉಪದೇಶ ಮಾಡಿರಲಿಲ್ಲ. ಸ್ವಯಂಪ್ರೇರಿತರಾಗಿ ಮೊದಲಿನಿಂದಲೂ ಕಾಂಗ್ರೆಸ್ಸು ಹರಿಜನರ ಉನ್ನತಿಗಾಗಿ ಚಳುವಳಿ ನಡೆಸಿದೆ. ಹಾಗೆಯೇ ಈ ಹೊತ್ತಿಗೂ ಕಾಂಗ್ರೆಸ್ ಸರ್ಕಾರದವರು ನಿಮ್ನ ತರಗತಿಯವರ ವಿಚಾರದಲ್ಲಿ, ಹಿಂದುಳಿದವರ ವಿಚಾರದಲ್ಲಿ ಸಹಾನುಭೂತಿಯ ನೀತಿಯನ್ನನುಸರಿಸಿಕೊಂಡು ಬರುತ್ತಿದ್ದಾರೆ.

ಇತ್ತೀಚೆಗೆ ಸಾದರಾಗಿರತಕ್ಕ ಸರ್ಕಾರಿ ಆಜ್ಞೆಯ ವಿಚಾರವನ್ನೆತ್ತಿ, ಆ ಆಜ್ಞೆಯಲ್ಲಿ ನಿಮ್ನ ತರಗತಿಗಳಿಗೆ ಶೇಕಡ 16 2/3ರಷ್ಟು ಸ್ಥಾನಗಳನ್ನು ಮೀಸಲಾಗಿಟ್ಟಿದ್ದಾರೆ, ಇದರಲ್ಲಿ ಗೆಜೆಟೆಡ್ ಹುದ್ದೆಗಳೂ ಸೇರಿವೆಯೇ ಇಲ್ಲವೆ ಎಂಬ ಬಗ್ಗೆ ಶ್ರೀಗಳಾದ ದುಗ್ಗಪ್ಪನವರೂ ಪ್ರಭಾಕರ್‌ರವರೂ ಪ್ರಸ್ತಾಪಿಸಿದ್ದಾರೆ. ಈಗ ಆಗಿರತಕ್ಕ ಆಜ್ಞೆ, ನೇರವಾಗಿ ನೇಮಕಮಾಡತಕ್ಕ ಎಲ್ಲಾ ಹುದ್ದೆಗಳಿಗೂ ಕೂಡ ಅನ್ವಯಿಸುತ್ತದೆ. ಈ ಎಲ್ಲಾ ಸ್ಥಾನಗಳಲ್ಲಿಯೂ ಶೇಕಡ 16 2/3 ರಷ್ಟು ಸ್ಥಾನಗಳನ್ನು ನಿಮ್ನ ತರಗತಿಯವರಿಗೆ ಮೀಸಲಾಗಿಡಬೇಕೆಂದು ಸರ್ಕಾರಿ ಆಜ್ಞೆಯಾಗಿರುವುದು.

ಇನ್ನು I. A. S. ಸ್ಕೀಮಿನ ವಿಚಾರವಾಗಿ ಪ್ರಸ್ತಾಪ ಮಾಡಿ ಕೆಲವು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಈ I. A. S. ಹುದ್ದೆಗಳೆಲ್ಲಾ ಕೇಂದ್ರ ಸರ್ಕಾರದವರು ಮಾಡಿರತಕ್ಕ ರೂಲ್ಸು ಪ್ರಕಾರ ನೇಮಕ ಮಾಡಲ್ಪಡತಕ್ಕವುಗಳಾಗಿವೆ. ಈ I. A. S. ನೌಕರಿಗಳನ್ನು ಕೊಡತಕ್ಕ ಬಗ್ಗೆ ಪರೀಕ್ಷೆಗಳನ್ನು ಏರ್ಪಡಿಸಿ, ಅವುಗಳಲ್ಲಿ ಯಾರು ಯಾರು ಉತ್ತೀರ್ಣರಾಗುತ್ತಾರೋ ಅಂಥವರಿಗೆ ಮಾತ್ರವೇ ಡೈರೆಕ್ಟ್ ರೆಕ್ರೂಟ್‌ಮೆಂಟಿನಲ್ಲಿ ಸ್ಥಾನಗಳನ್ನು ಕೊಡತಕ್ಕದ್ದೆಂದು ಹೇಳಲಾಗಿದೆ.

ಶ್ರೀ ಕೆ. ಚಿಕ್ಕಲಿಂಗಯ್ಯ.—ಹಾಗೆ ಮಾಡಬೇಕೆಂದು ಹೇಳಿರುವುದು ಇನ್ನು ಮುಂದಕ್ಕೆ.

ಶ್ರೀ ಕಡಿದಾಳ್ ಮಂಜಪ್ಪ.—ಇದುವರೆಗೂ ಇರತಕ್ಕ ರೂಲ್ಸು ಪ್ರಕಾರ ಕೂಡ ಹಾಗೆ ಮಾಡಲಾಗುತ್ತಿತ್ತು. ಆದರೆ ಮೈಸೂರು ದೇಶದಲ್ಲಿ ಈ I. A. S. ಯಾವ ರೀತಿ ಜಾರಿಗೆ ಬಂದಿತು ಎಂಬುದನ್ನು ನಾನು ಮೊನ್ನೆಯೇ ತಿಳಿಸಿದ್ದೇನೆ. ಈ I. A. S. ಸ್ಕೀಮನ್ನು ಮೈಸೂರಿಗೆ ಅನ್ವಯಿಸತಕ್ಕ ಸಂದರ್ಭ ಬಂದಿದ್ದಾಗ ಒಂದು ಸ್ಪೆಷಲ್ ರೆಕ್ರೂಟ್‌ಮೆಂಟ್ ಬೋರ್ಡ್ ನೇಮಕ ಮಾಡಲ್ಪಟ್ಟಿದ್ದು, ಅದು ಮೈಸೂರಿಗೆ ಬಂದಿದ್ದಾಗ ಆ ಬೋರ್ಡಿನವರು ಇಲ್ಲಿದ್ದ ಆಫೀಸರುಗಳನ್ನು ಬರಮಾಡಿಕೊಂಡು ಹಾಗೆ ನಡೆದ ಒಂದು ಇಂಟರ್‌ವ್ಯೂನಲ್ಲಿ ಕೆಲವರನ್ನು ಆರಿಸಿಕೊಂಡರು. ಹಾಗೆ ಆರಿಸಿಕೊಂಡಾಗ ಆ ಬೋರ್ಡಿನವರು ಅವರ ಅರ್ಹತೆಗಳನ್ನೂ ಮತ್ತು ಯೋಗ್ಯತೆಗಳನ್ನೂ ಗಣನೆಗೆ ತೆಗೆದುಕೊಂಡಿದ್ದಾರೆ. ಆದರೆ ಆ ವೇಳೆಯಲ್ಲಿ ಅವರು ಈ ನೌಕರಿಗಳನ್ನು ಪ್ರಜಾಸಂಖ್ಯೆಗನುಗಣವಾಗಿಕೊಡಬೇಕೆಂಬ ನಿಯಮವನ್ನೇನೂ ಹಾಕಿಕೊಂಡಿರಲಿಲ್ಲ. ರಾಜ್ಯಾಂಗದ ಆರ್ಟಿಕಲ್ 16ರಲ್ಲಿ ಹಿಂದುಳಿದ ಪಂಗಡದವರಿಗೆ ಸರಿಯಾದ ಪ್ರತಿನಿಧ್ಯವನ್ನು ದೊರಕಿಸಿಕೊಡಬೇಕೆಂದು ವಿಧಾಯಕವಾಗಿರುವುದು ನಿಜ. ಇಂದು ನಮ್ಮ ರಾಜ್ಯಾಂಗದಲ್ಲಿರತಕ್ಕ ವಿಧಿಗೂ ಮತ್ತು ಹಾಲಿ ಈ I. A. S. ನೌಕರಿಗಳಿಗೆ ಜನರನ್ನು ಭರ್ತಿಮಾಡಿಕೊಳ್ಳತಕ್ಕ ಬಗ್ಗೆ ಇಟ್ಟುಕೊಂಡಿರತಕ್ಕ ನಿಯಮಾವಳಿಗಳಿಗೂ ಒಂದಕ್ಕೊಂದು ವ್ಯತ್ಯಾಸವಾಗಿರುವುದೇನೋ ನಿಜ. ಆದರೆ ಇದನ್ನು ಮುಂದಕ್ಕೆ ಹೇಗೆ ಸರಿಪಡಿಸಬೇಕು ಎಂಬುದು ಕೇಂದ್ರ ಸರ್ಕಾರದವರು ಪರ್ಯಾಲೋಚನೆ ಮಾಡತಕ್ಕಂಥ ವಿಚಾರವಾಗಿದೆ. ಬಹುಶಃ ಈಗ ಅವರು ನೇಮಕಮಾಡಿರತಕ್ಕ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ನಿನವರು ಅವರ ವರದಿಯನ್ನೂ ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದ ನಂತರ ಈ ವಿಚಾರದಲ್ಲಿ ಒಂದು ಆಖೈರು ತೀರ್ಮಾನಕ್ಕೆ ಬರಬಹುದೆಂದು ನಾನು ಭಾವಿಸಿದ್ದೇನೆ.

ಒಬ್ಬಿಬ್ಬರು ಮಾನ್ಯ ಸದಸ್ಯರುಗಳು ಸರ್ಕಾರದವರು ಇತ್ತೀಚೆಗೆ ಮಾಡಿರುವ ರೂಲ್ಸು ಪ್ರಕಾರ ಇನ್ನು ಮುಂದೆ ನೇಮಕಮಾಡಲ್ಪಡತಕ್ಕ ನೌಕರಿಗಳ ಬಗ್ಗೆ ಹೊಸಬರಿಗೆ ಮಾತ್ರ ಅನುಕೂಲವಾಗುತ್ತದೆಯೇ ಹೊರತು ಇದರಿಂದ ಈಗಾಗಲೇ ನೌಕರಿಯಲ್ಲಿರತಕ್ಕವರಿಗೇನೂ ಅನುಕೂಲವಾಗುವುದಿಲ್ಲ ಎಂಬುದಾಗಿ ಹೇಳಿದರು. ಅದುನಿಜ. ಪ್ರಮೋಪನಲ್ ವೇಕೆನ್ಸಿಗಳನ್ನು ಭರ್ತಿಮಾಡುವಾಗ ಸರ್ಕಾರದವರು ಕೆಲವು ನಿಯಮಗಳನ್ನು ಪರಿಶೀಲಿಸುತ್ತಿದ್ದಾರೆ. ಈ ಹಿಂದೆ ಈ ಪ್ರಮೋಷನಲ್ ವೇಕೆನ್ಸಿಗಳನ್ನು ಭರ್ತಿಮಾಡತಕ್ಕ ಕಾಲದಲ್ಲಿ ಕೆಲವು ಕಾಲ ಹಿಂದುಳಿದಿದ್ದ ಪಂಗಡಗಳವರಿಗೆ ಒಂದು ಸರಿಯಾದ ಪ್ರಾತಿನಿಧ್ಯವನ್ನು ಕೊಡಬೇಕೆಂಬ ಉದ್ದೇಶದಿಂದ ಕೆಲವು ದಾಮಾಷಾಗಳನ್ನು ಇಟ್ಟುಕೊಂಡಿದ್ದರು. ಆದರೆ ಇತ್ತೀಚೆಗೆ ನಮ್ಮ ಹೊಸ ರಾಜ್ಯಾಂಗ ಜಾರಿಗೆ ಬಂದ ನಂತರ ಆ ಹಿಂದಿನ ನೀತಿಯನ್ನು ಇಂದು ಲನುಸರಿಸುವುದು ಕಷ್ಟವೆಂದು ತೋರುತ್ತದೆ. ಆರ್ಟಿಕಲ್ 311 ರ ಪ್ರಕಾರ ಪ್ರಮೋಷನಲ್ ವೇಕೆನ್ಸಿಗಳನ್ನು ಭರ್ತಿಮಾಡಬೇಕಾಗಿ ಬಂದಾಗ ಬರಿ ಕೋಮುವಾರು ದೃಷ್ಟಿಯೊಂದನ್ನೇ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗಲಾರದೆಂದು ನನ್ನ ಭಾವನೆ. ಆ ಆರ್ಟಿಕಲ್ 311 ರಲ್ಲಿ ಈ ರೀತಿಯಾಗಿ ಹೇಳಲಾಗಿದೆ:

> "311 (1) No person who is a member of a civil service of the Union or all-India service or a civil service of a State or holds a civil post under the Union or a State shall be dismissed or removed by an authority subordinate to that by which he was appointed.
>
> (2) No such person as aforesaid shall be dismissed or removed or reduced in rank until he has been given a reasonable opportunity of showing cause against the action proposed to be taken in regard to him."

ಆದ್ದರಿಂದ ಪ್ರಮೋಷರ್ಷ ವೇಕೆನ್ಸಿಗಳನ್ನು ಭರ್ತಿ ಮಾಡಬೇಕಾದರೆ ನಾವು ಕೋಮುವಾರು ಆಧಾರವನ್ನಿಟ್ಟುಕೊಂಡರೆ ಒಂದು ವಿಧದಲ್ಲಿ ವಿರೋಧವಾಗುತ್ತದೆ ಎಂಬುದು ನನ್ನ ಭಾವನೆ. 50 ಜನರ ಕೆಳಗಿದ್ದವರನ್ನು ಆ 50 ಜನರ ಮೇಲೆ ಹಾಕಿದರೆ ಇದರ ಪ್ರಕಾರ ಮೇಲಿದ್ದ 49 ಜನರ ರ್‍ಯಾಂಕ್ ರೆಡ್ಯೂಸ್ ಆಗುವುದಿಲ್ಲವೆ ಎಂಬುದು ನನ್ನ ಪ್ರಶ್ನೆ. ಇದು ಆ ರೀತಿಯಾಗಿದೆ. ಆದ್ದರಿಂದ ಮೇಲಿದ್ದವರನ್ನು ಕೆಳಗೆ ಹಾಕಬೇಕಾದರೆ

(ಶ್ರೀ ಕಡಿದಾಳ್ ಮಂಜಪ್ಪ.)

ಸರಿಯಾದ ಸಮಾಜಾಯಿಷಿಯನ್ನು ರಾಜ್ಯಾಂಗದ ಪ್ರಕಾರ ಕೊಡಬೇಕಾಗುತ್ತದೆ ಎಂಬುದು ನನ್ನ ಭಾವನೆ, ಯಾವುದಾದರೂ ಪ್ರಾಂತದಲ್ಲಿ ಈ ಆಧಾರದ ಮೇಲೆಅಥವಾ ಯಾವುದಾದರೂ ಒಂದು ಕಾರಣದಿಂದ ಪ್ರಮೋಷನ್ ವೇಕೆನ್ಸಿಗಳನ್ನು ಕೂಡ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಭರ್ತಿಮಾಡುವ ಹಾಗಿದ್ದರೆ ಇಲ್ಲಿ ಮಾಡುವುದಕ್ಕೂ ನನ್ನ ಅಡ್ಡಿಯೇನೂ ಇರುವುದಿಲ್ಲ.

ಆಮೇಲೆ ಕೇಂದ್ರ ಸರ್ಕಾರದಿಂದ ಮೈಸೂರು ಸರ್ಕಾರಕ್ಕೆ ಈ ಪರ್ಸೆಂಟೇಜ್ ನಿರ್ಧಾರ ಮಾಡತಕ್ಕ ವಿಚಾರದಲ್ಲಿ ಬಹಳ ಹಿಂದೆಯೇ ಒಂದು ಸೂಚನೆ ಬಂದಿದೆ, ಆ ಸೂಚನೆಯನ್ನು ಬಹಳ ಕಾಲ ಸರ್ಕಾರದವರು ಬದಿಗಿಟ್ಟು ಬಿಟ್ಟಿದ್ದರು ಎಂದು ಆಪಾದನೆ ಮಾಡಿದ್ದಾರೆ.—ಇಷ್ಟು ಪರ್ಸೆಂಟೇಜ್ ಫಿಕ್ಸ್‌ಮಾಡಬೇಕೆಂದು ಕೇಂದ್ರ ಸರ್ಕಾರದಿಂದ ಯಾವ ಸೂಚನೆಯೂ ಮೈಸೂರು ಸರ್ಕಾರಕ್ಕೆ ಬಂದಿಲ್ಲ. 1952ನೆಯ ಇಸವಿ ಮಾರ್ಚಿ ತಿಂಗಳಲ್ಲಿ ಕೇಂದ್ರ ಸರ್ಕಾರದವರು ಮೈಸೂರು ಸರ್ಕಾರಕ್ಕೆ ಒಂದು ಕಾಗದ ಬರೆದಿದ್ದರು. ಅದರಲ್ಲಿ ರಾಜ್ಯಾಂಗದ ಪ್ರಕಾರ ನಿಮ್ಮ ತರಗತಿಯವರಿಗೆ ಶೇಕಡಾವಾರು ನಿರ್ಧಾರ ಮಾಡುವ ಆವಶ್ಯಕತೆಯಿಲ್ಲದಿದ್ದರೂ ಕೂಡ ಸಾಂಪ್ರದಾಯಕವಾಗಿ ಒಂದು ವಿಷಯ ನಮೂದು ಮಾಡಿದ್ದಾರೆ. ಹೀಗೆ ಕೆಲವು ಸ್ಥಾನಗಳನ್ನು ಮೀಸಲಾಗಿಡುವುದು ಸೂಕ್ತ, ಈ ರೀತಿ ನಿಮಗೆ ಮಾಡುವುದಕ್ಕೆ ಸಾಧ್ಯವೆ ಎಂದು ಮೈಸೂರು ಸರ್ಕಾರದವರನ್ನು ಕೇಳಿದ್ದರು. 1952 ನೆಯ ಇಸವಿ ಜನವರಿ ತಿಂಗಳಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್‌ನವರು ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಅವರ ಸಲಹೆಗಳಲ್ಲಿ ಹಿಂದುಳಿದ ಪಂಗಡದವರಿಗೆ ಮತ್ತು ನಿಮ್ಮ ತರಗತಿಯವರಿಗೆ ಸ್ಥಾನಗಳನ್ನು ಮೀಸಲಾಗಿಡುವ ವಿಚಾರವೂ ನಮೂದಾಗಿದೆ. ಸುಮಾರು ಒಂದು ವರ್ಷದಿಂದ ಅವರ ಸಲಹೆ ಸರ್ಕಾರದ ಪರ್ಯಾಲೋಚನೆಯಲ್ಲಿತ್ತು. ಒಂದು ವರ್ಷ ಏಕಾಯಿತು ಎಂದು ಪ್ರಶ್ನಿಸುವುದು ಸ್ವಾಭಾವಿಕವಾಗಿದೆ. ಆ ಸಲಹೆಯಲ್ಲಿ ಬರೀ ನಿಮ್ಮ ತರಗತಿಯವರ ಪ್ರಶ್ನೆ ಮಾತ್ರ ಅಡಕವಾಗಿರಲಿಲ್ಲ. ಹಿಂದುಳಿದ ಪಂಗಡದವರ ವಿಚಾರವೂ ಕೂಡ ಅಡಕವಾಗಿತ್ತು. ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ನನ್ನು ಕೇಂದ್ರ ಸರ್ಕಾರದವರು ಸದ್ಯದಲ್ಲೇ ನೇಮಕಮಾಡುತ್ತಾರೆ, ಅವರು ಒಂದು ವರದಿ ಬಂದ ನಂತರ ಈ ಪ್ರಶ್ನೆಯನ್ನು ಅವರು ಇತ್ಯರ್ಥಮಾಡುತ್ತಾರೆ ಎಂದು ಸರ್ಕಾರದ ಅಭಿಪ್ರಾಯವಿತ್ತು. ಆದ್ದರಿಂದ ಈ ಶೇಕಡಾವಾರು ಸಂಖ್ಯೆಯನ್ನು ನಿಗದಿ ಮಾಡುವುದು ಸ್ವಲ್ಪ ತಡವಾಯಿತು. ಈಗಿರತಕ್ಕ, ಇದುವರೆಗೆ ಜಾರಿಯಲ್ಲಿದ್ದ ನಿಯಮಗಳ ಪ್ರಕಾರ ಬ್ರಾಹ್ಮಣರು ಹೊರತು ಬಾಕಿ ಎಲ್ಲರೂ ಕೂಡ ಹಿಂದುಳಿದವರು ಎಂದು ಪರಿಗಣಿಸಲ್ಪಟ್ಟಿದೆ. ಕಾಕಾ ಕಾಲೇಲ್ಕರ್‌ರವರು ನನ್ನ ಹತ್ತಿರ ಮಾತನಾಡಬೇಕಾದರೆ ವೈಯುಕ್ತಿಕವಾಗಿ ಕೆಲವು ವಿಚಾರಗಳನ್ನು ಕೇಳಿದರು. ಬ್ರಾಹ್ಮಣರಲ್ಲಿ ಕೂಡ ಕೆಲವು ಹಿಂದುಳಿದ ಪಂಗಡಗಳಿವೆ, ಅವುಗಳಿಗೆ ಯಾವ ರಕ್ಷಣೆ ಕೊಟ್ಟಿದ್ದಾರೆ ಎಂದು ಕೇಳಿದರು. ಈ ವಿಚಾರ ಮತ್ತು ಹಿಂದುಳಿದ ಕೋಮುಗಳಿಗೆ ಸೇರಿದ ಮುಂದುವರಿದ ಪಂಗಡಗಳ ವಿಚಾರ ಸರ್ಕಾರದ ಪರ್ಯಾಲೋಚನೆಯಲ್ಲಿದೆ. ಯಾರಿಗೂ ಕೂಡ ತೊಂದರೆ ಯಾಗದ ರೀತಿಯಲ್ಲಿ ಈ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಸರ್ಕಾರ ಪ್ರಯತ್ನಪಡುತ್ತದೆ ಎಂದು ಹೇಳಿ ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇನೆ.

ನಿಮ್ಮ ತರಗತಿಯವರ ವಿಚಾರದಲ್ಲಿ, ಅವರ ನ್ಯಾಯವಾದ ಬೇಡಿಕೆಯ ವಿಚಾರದಲ್ಲಿ ಸರ್ಕಾರದ ಸಹಾನುಭೂತಿ ಇದೆ. ಈ ಸಹಾನುಭೂತಿಯು ಯಾವಾಗಲೂ ಇನ್ನು ಮುಂದೆಯೂ ಇರುತ್ತದೆ. ಆದುದರಿಂದ ನಿಮ್ಮ ತರಗತಿಯವರು ಈ ವಿಚಾರದಲ್ಲಿ ಸರ್ಕಾರದವರು ಅನುಸರಿಸುವ ಕಾರ್ಯಕ್ರಮದ ವಿಚಾರದಲ್ಲಿ ಶಂಕೆಯನ್ನಿಡಬೇಕಾಗಿಲ್ಲ. ಈ ನಿರ್ಣಯದಲ್ಲಿ ಅಡಗಿರತಕ್ಕ ಅಂಶವನ್ನು ಅಕ್ಷರಶಃ ಪಾಲಿಸಲು ಸರ್ಕಾರಕ್ಕೆ ಏನು ತೊಂದರೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಜಾರಿಗೆ ತರುವಾಗ ಕೆಲವು ಅಡ್ಡಿ ಆತಂಕಗಳು ಬರಬಹುದು. ರಾಜ್ಯಾಂಗಕ್ಕೆ ಅನುಗುಣವಾದ ತತ್ವವು ಇದರಲ್ಲಿ ಏನು ಅಡಗಿದೆಯೋ ಅದನ್ನು ಸರ್ಕಾರದವರು ಒಪ್ಪಲು ಸಾಧ್ಯ. ಇಷ್ಟು ಹೇಳಿ ಈ ನಿರ್ಣಯದಲ್ಲಿ ಅಡಗಿರುವ ತತ್ವವನ್ನು ಒಪ್ಪಿಕೊಳ್ಳಲು ಸರ್ಕಾರ ಸಿದ್ಧವಾಗಿದೆಯೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಪಬ್ಲಿಕ್ ಸರ್ವಿಸ್ ಕಮಿಷನ್ ಈ ವಿಚಾರದಲ್ಲಿ ಮಾಡಿದ ಶಿಫಾರಸುಗಳೇನು ಮತ್ತು ಆ ಬಗ್ಗೆ ಸರ್ಕಾರದವರು ವ್ಯಕ್ತಪಡಿಸಿರುವ ಅಭಿಪ್ರಾಯಗಳೇನು ?

Sri Kadidal MANJAPPA.—That is treated as confidential.

Sri K. PRABHAKAR.—I press the resolution.

Mr. SPEAKER.—The question is:

"This Assembly is of the opinion that necessary rules in respect of reservation of posts or appointments on population basis to the candidates belonging to the Scheduled Castes and other Backward Classes which are not adequately represented in the gazetted and non-gezetted services of the State, be framed for guidance of the Public Service Commission in Mysore, keeping in view the relevant provisions of the Indian Constitution."

The motion was adopted.

DISCUSSION ON QUESTION No. 238.

Issue of Government Advertisements to Dailies, Weeklies and Periodicals.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು-ದಕ್ಷಿಣ).—ಸಭಾಪತಿಯವರೇ, 238ನೆಯ ಪ್ರಶ್ನೆಯ ಬಗ್ಗೆ ಈ ಮನೆಯಲ್ಲಿ ತಾರೀಖು 28-7-53 ಮತ್ತು 3-8-53 ರಲ್ಲಿ ಪ್ರಶ್ನೋತ್ತರಗಳಾದವು. ಆ ಸಮಯದಲ್ಲಿ ಪೂರ್ವ ಭಾವಿಯಾಗಿ ಕೇಳಿದ ಉಪಪ್ರಶ್ನೆಗಳಿಗೆ ಸರ್ಕಾರದವರು ತೃಪ್ತಿಕರವಾದ ಉತ್ತರಗಳನ್ನು ಒದಗಿಸದೆ ಹೋದದ್ದರಿಂದ ನಾನು ಅದರಮೇಲಿನ ಚರ್ಚೆಗೆ ಪುನಃ ಅವಕಾಶಕೊಡಬೇಕೆಂದು ಅಧ್ಯಕ್ಷರನ್ನು ಕೇಳಿದುದಕ್ಕೆ ಇಂದು ಅದಕ್ಕೆ ಅವಕಾಶ ದೊರೆತಿದೆ. ಇದಕ್ಕಾಗಿ, ಮೊಟ್ಟಮೊದಲು ಸಭಾಪತಿಯವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.